ಆಧುನಿಕಪೂರ್ವ ಕನ್ನಡ ಸಾಹಿತ್ಯದಲ್ಲಿ ಪುನರ್ಲೇಖ ಪ್ರಕ್ರಿಯೆಗಳು.

ರನ್ನನ ಸಾಹಸ ಭೀಮ ವಿಜಯಂ ಕಾವ್ಯವನ್ನು ಅನುಲಕ್ಷಿಸಿ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಭಾಷಾಂತರ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ತಿಪ್ಪೇಶಪ್ಪ. ಬಿ.

ಮಾರ್ಗದರ್ಶಕರು
ಡಾ: ಎಂ. ಉಷಾ
ಪ್ರವಾಚಕರು
ಭಾಷಾಂತರ ಅಧ್ಯಯನ ವಿಭಾಗ

ಭಾಷಾಂತರ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276
2008

535

ಆಧುನಿಕಪೂರ್ವ ಕನ್ನಡ ಸಾಹಿತ್ಯದಲ್ಲಿ ಪುನರ್ಲೇಖ ಪ್ರಕ್ರಿಯೆಗಳು.

.ರನ್ನನ ಸಾಹಸ ಭೀಮ ವಿಜಯಂ ಕಾವ್ಯವನ್ನು ಅನುಲಕ್ಷಿಸಿ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಭಾಷಾಂತರ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ತಿಪ್ಪೇಶಪ್ಪ. ಬಿ.

ಮಾರ್ಗದರ್ಶಕರು
ಡಾ: ಎಂ. ಉಷಾ
ಪ್ರವಾಚಕರು
ಭಾಷಾಂತರ ಅಧ್ಯಯನ ವಿಭಾಗ

ಭಾಷಾಂತರ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276
2008

ಪ್ರಮಾಣಪತ್ರ

ಆಧುನಿಕಪೂರ್ವ ಕನ್ನಡ ಸಾಹಿತ್ಯದಲ್ಲಿ ಪುನರ್ಲೇಖ ಪ್ರಕ್ರಿಯೆಗಳು ಎಂಬ ನಿಬಂಧವನ್ನು ಡಾ: ಎಂ.ಉಷಾ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ಭಾಷಾ ನಿಕಾಯದ ಭಾಷಾಂತರ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಶಿವೇಶಪ್ಪ. ಬಿ
ಸಂಶೋಧಕ
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸ್ಥಳ : ವಿದ್ಯಾರಣ್ಯ
ದಿನಾಂಕ : 7-10-2008

ಮಾರ್ಗದರ್ಶಕರ ಪ್ರಮಾಣಪತ್ರ

ಆಧುನಿಕಪೂರ್ವ ಕನ್ನಡ ಸಾಹಿತ್ಯದಲ್ಲಿ ಪುನರ್ಲೇಖ ಪ್ರಕ್ರಿಯೆಗಳು ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ತಿಪ್ಪೇಶಪ್ಪ ಬಿ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ: ಎಂ.ಉಷಾ
ಮಾರ್ಗದರ್ಶಕರು
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸ್ಥಳ : ವಿದ್ಯಾರಣ್ಯ
ದಿನಾಂಕ : 7-10-2008

ಕೃತಜ್ಞತೆಗಳು

ಕನ್ನಡ ವಿಶ್ವ ವಿದ್ಯಾಲಯ ಹಂಪಿಯಲ್ಲಿ ೨೦೦೭-೦೮ನೇ ಸಾಲಿನಲ್ಲಿ ಎಂ.ಫಿಲ್ ಮಾಡಲು ನನಗೆ ಅವಕಾಶ ಮಾಡಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ: ಎ. ಮುರಿಗೆಪ್ಪ ರವರಿಗೆ ಹಾಗೂ ಕುಲಸಚಿವಾರದ ಹಿ.ಚಿ. ಬೋರಲಿಂಗಯ್ಯ ರವರಿಗೂ ಅಧ್ಯಯನಾಂಗದ ನಿರ್ದೇಶಕಾರದ ಡಾ: ಡಿ. ಪಾಂಡುರಂಗ ಬಾಬು ರವರಿಗೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

ಭಾಷಾಂತರ ಅಧ್ಯಯನ ವಿಭಾಗದ ಮುಖ್ಯಿರಸ್ತರಾದ ಡಾ: ವಿ.ಬಿ. ತಾರಕೇಶ್ವರರವರಿಗೂ ಹಾಗೂ ನಿಬಂಧ ಸಿದ್ದಪಡಿಸಲು ಉತ್ತಮ ಸಲಹೆ ಸಹಕಾರ ನೀಡಿದ ಪ್ರವಾಚಕರು ಹಾಗೂ ಮಾರ್ಗದರ್ಶಕರಾದ ಡಾ: ಎಂ. ಉಷಾರವರಿಗೂ ಹಾಗೂ ನಮ್ಮ ಗುರುಗಳಾದ ಪ್ರೊ.ವಿಠಲರಾವ್ ಗಾಯಕ್ವಾಡ್ ರವರಿಗೂ ಹಾಗೂ ಮೋಹನ ಕುಂಟಾರರವರಿಗೂ ಮತ್ತು ಸಿಬ್ಬಂದಿ ವರ್ಗದವರಾದ ಪ್ರಲ್ಲಾದ ಆಚಾರ್ , ಹೇಮರೆಡ್ಡಿ , ಸಹ ಪಾಟಿಗಳಾದ ಫಕೀರಪ್ಪ ವಜ್ರಬಂಡಿ , ಮಹೇಶ್ ಕುಮಾರ್, ಗಜಾನನ , ಬಾಬು , ಮಾಣಿಕಪ್ಪ , ಅವರಿಗೂ ನನ್ನ ಕೃತಜ್ಞತೆಗಳು .

ಅಧ್ಯಯನ ಸಂಧರ್ಬದಲ್ಲಿ ಸಹಕಾರ ನೀಡಿದಂತಹ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಹೆಚ್. ಎಂ. ಭೂತನಾಳ್ ಅವರಿಗೂ ಮತ್ತು ಸಹೊದ್ಯೋಗಿಗಳಾದ ಡಾ: ಎಸ್.ವಿ. ಡಾಣಿ , ಬಿ.ಎಂ. ಕಾಂಬಳಿ, ವಿ.ಜಿ. ಶಿವರುದ್ರಯ್ಯ, ಬಿ.ಎಲ್. ಶಿವಮೂರ್ತಿ, ವೀರಾಪುರ್ , ಲಕ್ಷ್ಮಣ , ಹಾಗೂ ಚೌಡಪ್ಪನವರಿಗೆ ನನ್ನ ಹೃತ್ಪೂರಕ ಕೃತಜ್ಞನತೆಗಳನ್ನು ಅರ್ಪಿಸುತ್ತೇನೆ.

ಕನ್ನಡ ವಿಶ್ವವಿದ್ಯಾಲಯದಲ್ಲಿ ಸಹಕರಿಸಿದಂತಹ ಸ್ನೇಹಿತರಾದ ಎಂ. ಶಂಕರಲಿಂಗಯ್ಯ , ಶಂಕರಪ್ಪ ಗುರಿಕಾರ್ , ಯರಿಯಪ್ಪ ಬೆಳಗುರ್ಕಿ, ಹಾಗೂ ಅನಿಕೇತನ ವಸತಿ ನಿಲಯದ ಎಲ್ಲಾ ಸ್ನೇಹಿತರಿಗೂ ನನ್ನ ಕೃತಜ್ಞತೆಗಳು.

ನನ್ನ ಶ್ರೇಯೋಬಿಲಾಷಿಗಳಾದ ಅಣ್ಣಂದಿರು, ಹಾಗೂ ಅಕ್ಕಂದಿರಿಗೆ ಮತ್ತು ಪ್ರಿಯ ಪತ್ನಿ ಮಂಜುಳಾ ಹಾಗೂ ಮುದ್ದು ಮಗನಾದ ಜಿ.ಟಿ. ರಾಘು ಅವರನ್ನು ಪ್ರೀತಿಯಿಂದ ಸ್ಮರಿಸುತ್ತೇನೆ. ಹಾಗೂ ಅಂದವಾಗಿ ಡಿ.ಟಿ.ಪಿ. ಮಾಡಿಕೊಟ್ಟ ರಮೇಶ್ ರವರಿಗೂ ಕೃತಜ್ಞತೆಗಳು.

✍ ತಿಪ್ಪೇಶಪ್ಪ . ಬಿ.

ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಮಹತ್ವ

ಅಧ್ಯಾಯ-೧

ಒಂದು ಭಾಷೆಯಲ್ಲಿ ರಚಿತವಾದ ಸಾಹಿತ್ಯ ಮತ್ತೊಂದು ಭಾಷೆಗೆ ಭಾಷಾಂತರಗೊಳ್ಳುವ ಕ್ರಿಯೆ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಹಲವಾರು ಸಿದ್ಧಾಂತಗಳು ಪರಿಕಲ್ಪನೆಗಳು ಇಂದು ಭಾಷಾಂತರ ಅಧ್ಯಯನವೆಂಬ ಕ್ಷೇತ್ರದ ವ್ಯಾಪ್ತಿ ಒಳಗೆ ರೂಪುಗೊಳ್ಳುತ್ತಿದ್ದು ಈಸಂಧರ್ಭದಲ್ಲಿ ಮೂಲನಿಷ್ಟತೆಯ ಪ್ರಶ್ನೆಯೊಂದು ಪಾಶ್ಚಾತ್ಯ ಭಾಷಾಂತರ ಸಿದ್ಧಾಂತಗಳಲ್ಲಿ ಬಹು ಚರ್ಚೆಗೊಳ್ಳುತ್ತಿರುವ ವಿಷಯ. ಕನ್ನಡದಲ್ಲೂ ಕೂಡ ಇದೂವರೆಗೆ ಮೂಲನಿಷ್ಠತೆಯ ಪ್ರಶ್ನೆಯ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಈ ಅಂಶವನ್ನು ಗಮನದಲ್ಲಿ ಇಟ್ಟುಕೊಂಡೆ "ಸೂಸಾನ್ ಬಾಸ್‌ನೆಟ್" ಎಂಬ ಪಾಶ್ಚಾತ್ಯ ಬಾಷಾಂತರ ತಜ್ಞನು ಸುಮಾರು ೨೦೦೦ ವರ್ಷಗಳ ಭಾಷಾಂತರ ಚಿಂತನೆಯ ಸಾರವೆಂದರೆ ಅದು ಮೂಲನಿಷ್ಠತೆಯ ಪ್ರಶ್ನೆಯೇ ಆಗಿರುತ್ತದೆ ಎನ್ನುತ್ತಾರೆ. ಆದರೆ ಈ ಮೂಲ ನಿಷ್ಟತೆಯ ಪ್ರಶ್ನೆ ಕನ್ನಡ ಭಾಷಾಂತರ ಸಾಹಿತ್ಯ ಸಂಧರ್ಭದಲ್ಲಿ ಮಹತ್ವವೆನಿಸುವುದಿಲ್ಲ. ಹೇಗೆಂದರೆ ಪ್ರಾಚೀನ ಕನ್ನಡ ಸಾಹಿತ್ಯ ಸಂಧರ್ಭದಲ್ಲಿ ಕನ್ನಡ ಕೃತಿಗಳಲ್ಲೆವೂ ಬಹುತೇಕ ಸಂಸ್ಕತ ಸಾಹಿತ್ಯದ ಭಾಷಾಂತರವೇ ಆಗಿದ್ದರೂ ಮೂಲಕ್ಕೆ ನಿಷ್ಟ ವಾಗಿರಬೇಕೇಂಬ ನಂಬಿಕೆ ಅವುಗಳಲ್ಲಿ ಕಂಡುಬರುವುದಿಲ್ಲ. ಉದಾಹರಣೆಗೆ ಪಂಪನು ವ್ಯಾಸಭಾರತವನ್ನು ತನ್ನ ಕಾಲದ ಆಶೋತ್ತರಗಳಿಗೆ ಪೂರಕವಾಗುವಂತೆ ಬದಲಾಯಿಸಿಕೊಂಡಿರುವುದು. ಇಂತಹ ಭಾಷಾಂತರ ಮಾದರಿಯನ್ನು ಇಂದು ನಾವು ಪುನರ್ಲೇಖ ಪ್ರಕ್ರಿಯೆ ಎಂದು ಗುರುತಿಸುತ್ತೇವೆ.

ಪ್ರಸ್ತುತ ಅಧ್ಯಯನದಲ್ಲಿ ಭಾಷಾಂತರದ ಒಂದು ಮಾದರಿಯಾದ ಪುನರ್ಲೇಖ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಪಂಪನ 'ವಿಕ್ರಮಾರ್ಜುನ ವಿಜಯಂ' ಮತ್ತು ರನ್ನನ 'ಸಾಹಸ ಭೀಮ ವಿಜಯಂ' ಕಾವ್ಯವನ್ನು ಪರಿಶೀಲಿಸಲಾಗುವುದು

ಉದ್ದೇಶಗಳು:

ಪ್ರಸ್ತುತ ಅಧ್ಯಯನದಲ್ಲಿ ಪುನರ್ಲೇಖ ಪ್ರಕ್ರಿಯೆಯನ್ನು ಭಾಷಾಂತರದ ಒಂದು ಕ್ರಮ ಅಥವಾ ಮಾದರಿ ಎಂದು ಪರಿಭಾವಿಸಲಾಗಿದ್ದು, ಒಂದೇ ಕಾಲಘಟ್ಟದಲ್ಲಿ ಒಂದೇ ಛಂದೋ ಪ್ರಕಾರದೊಳಗೆ ಒಂದೇ ವಸ್ತುವನ್ನು ಮತ್ತೆ ಬರೆಯುವ ಪ್ರಕ್ರಿಯೆಯನ್ನು ಹಾಗೂ ಅದರ ಹಿಂದಿರುವ ಪ್ರೇರಣೆ ಪ್ರಭಾವವನ್ನು ಕುರಿತು ಅಧ್ಯಯನ ಕೈಗೊಳ್ಳಲಾಗಿದೆ. ಇದಕ್ಕೆ ಆಕಾರ ಸಾಮಾಗ್ರಿಯಾಗಿ ಪಂಪನ ವಿಕ್ರಮಾರ್ಜುನ ವಿಜಯ ಮತ್ತು ರನ್ನನ ಗದಾಯುದ್ಧದ ಕೃತಿಗಳನ್ನು ಪರಿಗಣಿಸಲಾಗಿದೆ. ಪ್ರಸ್ತುತ ಅಧ್ಯಯನವು ಉದ್ದೇಶವನ್ನು ಸ್ಥೂಲವಾಗಿ ಈ ಕೆಳಗಿನಂತೆ ಗುರುತಿಸಲಾಗಿದೆ.

೧) ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನಡೆದು ಬಂದಿರುವ ಪುನರ್ಲೇಖ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳುವುದು. ಅಂದರೆ ಆಧುನಿಕ ಪೂರ್ವ ಕನ್ನಡ ಸಾಹಿತ್ಯವೆಲ್ಲ ಸಂಸ್ಕೃತ, ಪ್ರಾಕೃತ ಸಾಹಿತ್ಯದ ನೇರ ಭಾಷಾಂತರವಾಗಿರದೇ ಬೇರೆ ಬೇರೆ ಆಶೋತ್ತರಗಳನ್ನು ಹೊಂದಿದ ಮರು ಬರವಣಿಗೆ ಅಥವಾ ಪುನರ್ಲೇಖ ಎಂದು ಇಲ್ಲಿ ವಿವರಿಸಿಕೊಡಲಾಗುವುದು.

೨) ಒಂದೇ ಭಾಷೆಯೊಳಗೆ ನಡೆಯುವ ಪುನರ್ಲೇಖ ಪ್ರಕ್ರಿಯೆಯ ಅಗತ್ಯವನ್ನು ವಿವರಿಸಿಕೊಳ್ಳುವುದು. ಈ ಸಂದರ್ಭದಲ್ಲಿ ವಿವಿಧ ಸಂವೇದನೆಗಳ ಅಂದರೆ ಲೌಕಿಕ, ಧಾರ್ಮಿಕ (ವೈದಿಕ, ಜೈನ) ಧೋರಣೆಗಳನ್ನು ವಿಶ್ಲೇಷಿಸುವುದರ ಜೊತೆಗೆ ಕೃತಿಯಲ್ಲಿ ಆದ ಬದಲಾವಣೆಗಳನ್ನು ಗುರುತಿಸುವ ಉದ್ದೇಶವನ್ನು ಹೊಂದಲಾಗಿದೆ.

೩) ಒಂದೇ ಕಾಲಘಟ್ಟದಲ್ಲಿ ನಡೆಯುವ ಪುನರ್ಲೇಖ ಪ್ರಕ್ರಿಯೆಯ ಹಿಂದಿನ ಕಾಲಮಾನವನ್ನು ಗ್ರಹಿಸಲು ಪ್ರಯತ್ನಿಸುವುದು. ಅಂದರೆ ಪಂಪನ ಕಾಲದವನೇ ಆದ ರನ್ನ ಪಂಪನನ್ನು ಅನುಸರಿಸಿಯೂ ಮತ್ತೊಮ್ಮೆ ಮಹಾಭಾರತವನ್ನು ಬರೆಯುವುದರ ಹಿಂದಿನ ಉದ್ದೇಶವೇನೆಂಬುದನ್ನು ಅರಿಯಲೆತ್ನಿಸುವ ಉದ್ದೇಶ ಈ ಅಧ್ಯಯನದಲ್ಲಿ ಹೊಂದಲಾಗಿದೆ. ಪಂಪ ರನ್ನರ ಬಗ್ಗೆ ಇದುವರೆಗಿನ ಅಧ್ಯಯನಗಳು ತೌಲನಿಕ ಅಧ್ಯಯನಗಳಾಗಿದ್ದು, ಪ್ರಸ್ತುತ ಅಧ್ಯಯನವು ಭಾಷಾಂತರ ಮಾದರಿಗಳಲ್ಲಿ ಒಂದಾದ ಪುನರ್ಲೇಖ ಪರಿಕಲ್ಪನೆಯ ನೆಲೆಯಲ್ಲಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಈ ಅಧ್ಯಯನದಲ್ಲಿ ಇದೂವರೆಗೂ ರನ್ನನ ಬಗೆಗೆ ಬಂದಿರುವ ವಿವಿಧ ವಿಮರ್ಶಕರ ಲೇಖನಗಳನ್ನು ಆಧರಿಸಿ ಮತ್ತು ಅಗತ್ಯವಿದ್ದಲ್ಲಿ ಅವರ ಅಭಿಪ್ರಾಯಗಳನ್ನು ಬಳಸಿಕೊಂಡು ಸ್ಥೂಲವಾಗಿ ಚರ್ಚಿಸಲಾಗಿದೆ.

ಅಧ್ಯಯನದ ವ್ಯಾಪ್ತಿ:

ಆಧುನಿಕ ಪೂರ್ವ ಕನ್ನಡ ಸಾಹಿತ್ಯ ಸಂಸ್ಕೃತದಿಂದ ಭಾಷಾಂತರಗೊಂಡು ವಿಶಿಷ್ಟ ಬದಲಾವಣೆಗಳನ್ನು ಪಡೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ೧೦ ನೇ ಶತಮಾನದಲ್ಲಿ ಪಂಪನ ಕೃತಿ ವಿಕ್ರಮಾರ್ಜುನ ವಿಜಯ, ವ್ಯಾಸರ ಭಾರತದ ಕೃತಿಯನ್ನು ಆಧರಿಸಿದ್ದರೂ ಅದು ಹಲವಾರು ಬದಲಾವಣೆಗಳನ್ನು ಹೊಂದಿದೆ. "ಕನ್ನಡ ಕವಿಗಳು ಅನುವಾದದ ಪ್ರಕ್ರಿಯೆಯಲ್ಲಿ ಇರುವವರೇ ಆಗಿದ್ದಾರೆ. ಆದರೆ ಈ ಅನುವಾದ ನಾವು ಈಗ ತಿಳಿದಿರುವ ಅನುವಾದದ ಮಾದರಿಯದ್ದಲ್ಲ. ಅವರ ಎದುರು ಇದ್ದುದು ಅಧಿಕಾರದ ಭಾಷೆ: ಸಂಸ್ಕೃತ. ಆ ಭಾಷೆಯ ಸಾಹಿತ್ಯ ಕೃತಿಗಳನ್ನು ತಮ್ಮ ಭಾಷೆಗೆ ತರುವಾಗ ಕನ್ನಡ ಮತ್ತು ಸಂಸ್ಕೃತಗಳ ನಡುವೆ ಇರುವ ಅಸಮ ಸಂಬಂಧದ ಗೊಡವೆ ಅವರಿಗೆ ಇದ್ದಂತಿಲ್ಲ. ಸುಮ್ಮನೆ ಎರಡು ಮಾದರಿಗಳನ್ನು ನಿಮ್ಮ ಮುಂದೆ ಇಡುತ್ತೇನೆ. ಪಂಪ ಮಹಾಭಾರತದ

ಕಥೆಯನ್ನು ಹೇಳಲು ಹೊರಟಾಗ "ವ್ಯಾಸ ಮುನೀಂದ್ರ ರುಂದ್ರ ವಚನಾಮೃತ ವಾರ್ಧಿ" ಯನ್ನು ಈಜುವೆನೆಂಬ ಹಮ್ಮು ತನಗೆ ಇಲ್ಲವೆಂದು ಹೇಳುತ್ತಾನೆ. ಇದು ವಿನಯದ ಮಾತೆಂದು ಎಲ್ಲರೂ ಗುರುತಿಸುತ್ತಾರೆ. ಇದ್ದೀತು. ಆದರೆ ಪಂಪನ ಕೃತಿ ಅವನ ಮೀರುವಿಕೆಯನ್ನು ಹೆಜ್ಜೆಹೆಜ್ಜೆಗಳಲ್ಲಿ ತೋರಿಸಿಕೊಡುತ್ತದೆ.''[೧] ಅಂದರೆ ಇಲ್ಲಿ ಭಾಷಾಂತರದ ಮೂಲ ನಿಷ್ಠತೆಯ ಪ್ರಶ್ನೆ ಇಲ್ಲ. ಕವಿ ತನ್ನ ಆಶೋತ್ತರಗಳನ್ನು ಕೃತಿಯಲ್ಲಿ ತಂದು ತನಗೆ ಅಗತ್ಯ ಕಂಡಷ್ಟು ಸಂಗ್ರಹಿಸಿ ಬದಲಾಯಿಸಿಕೊಂಡಿದ್ದಾನೆ. ಇಂತಹ ಬದಲಾವಣೆ ರೀತಿ, ತಂತ್ರ, ಛಂದಸ್ಸು, ನಾಯಕ, ಪ್ರತಿನಾಯಕ ಇತ್ಯಾದಿ ಅಂಶಗಳನ್ನು ಒಳಗೊಂಡಿರುತ್ತದೆ.

ಪಂಪನ ಕೃತಿಯನ್ನು ಆಧಾರವಾಗಿಟ್ಟುಕೊಂಡು ಹೆಚ್ಚುಕಡಿಮೆ ಅದೇ ಕಾಲಘಟ್ಟದಲ್ಲಿ ರನ್ನ ವಿಕ್ರಮಾರ್ಜುನ ವಿಜಯ ದ ವಸ್ತುವನ್ನೇ ಆಧರಿಸಿ ಪ್ರತಿಯಾಗಿ ಸಾಹಸ ಭೀಮ ವಿಜಯವೆಂಬ ಕೃತಿಯನ್ನು ಬರೆದದ್ದರ ಹಿಂದಿನ ಆಶಯವೇನು ಎಂಬುದನ್ನು ಈ ಅಧ್ಯಯನದಲ್ಲಿ ವಿವರಿಸಲಾಗಿದೆ. ರನ್ನನ ಕಾವ್ಯದ ಪುನರ್ಲೇಖದ ಹಿಂದಿರುವ ಪಂಪನ ಪಠ್ಯವನ್ನು ಅದರಲ್ಲಿ ಮಾಡಿಕೊಂಡ ಬದಲಾವಣೆಗಳನ್ನು ಇಲ್ಲಿ ಗುರುತಿಸಿಕೊಡಲಾಗಿದೆ. ಹಾಗೂ ಪಂಪನ ಕಾವ್ಯದ ೧೩ ಮತ್ತು ೧೪ನೇ ಆಶ್ವಾಸದ ಗದಾಯುದ್ಧ ಪ್ರಸಂಗವನ್ನು ಆಧಾರವಾಗಿಟ್ಟುಕೊಂಡು ರನ್ನ ತನ್ನ ವಿಶಿಷ್ಟ ತಂತ್ರವಾದ ಸಿಂಹಾವಲೋಕನ ಕ್ರಮದಿಂದ ಒಂದು ಮಹಾಕಾವ್ಯವನ್ನು ರಚಿಸಿದ್ದರ ಮಹತ್ವವನ್ನು ಭಾಷಾಂತರದ ಮಾದರಿಯಾದ ಪುನರ್ಲೇಖ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ವಿವರಿಸಿಕೊಡಲಾಗಿದೆ.

ಈಗಾಗಲೇ ಬಂದಿರುವ ರನ್ನನ ಕೃತಿ ವಿಮರ್ಶೆಗಳು ವಿಶ್ಲೇಷಣೆಗಳು, ತೌಲನಿಕ ಅಧ್ಯಯನಗಳು ಮುಂತಾದ ಬರಹಗಳನ್ನು ನಿಯೋಜಿತ ಪ್ರಬಂಧದ ಅಗತ್ಯಕ್ಕನುಗುಣವಾಗಿ ಬಳಸಿಕೊಂಡು ವಿಶ್ಲೇಷಿಸಲಾಗಿದೆ. ಹಾಗೂ ಕನ್ನಡದಲ್ಲಿ ಬಂದಿರುವ ಮಹಾಭಾರತಗಳ ಸಮೀಕ್ಷೆಯೊಂದನ್ನು ಭಾಷಾಂತರದ ಮಾದರಿಗಳ ಹಿನ್ನೆಲೆಯಲ್ಲಿ ವಿವರಿಸಲಾಗುವುದು.

ಒಟ್ಟಾರೆ ಈ ಅಧ್ಯಯನದಲ್ಲಿ ಒಂದೇ ಕಾಲಘಟ್ಟದಲ್ಲಿ ಒಂದೇ ವಸ್ತು ಮತ್ತೆ ರಚನೆಗೊಂಡಿದ್ದರ ಹಿಂದಿನ ಕಾರಣವೇನು? ಎಂಬುದನ್ನು ಪಂಪ ರನ್ನರ ಕೃತಿಯನ್ನು ಆಧರಿಸಿ ವಿವರಿಸಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಪ್ರಬಂಧವನ್ನು ಐದು ಅಧ್ಯಾಯಗಳಲ್ಲಿ ತನ್ನ ವಿಚಾರಗಳನ್ನು ಮಂಡಿಸಲು ಪ್ರಯತ್ನಿಸುತ್ತದೆ.

೧. ಮೊದಲನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ಮಹತ್ವವನ್ನು ಕುರಿತಂತೆ ಗಮನಹರಿಸಲಾಗಿದೆ.

೨. ಎರಡನೇ ಅಧ್ಯಾಯದಲ್ಲಿ ಭಾಷಾಂತರದ ಹಲವು ಮಾದರಿಗಳಲ್ಲಿ ಒಂದಾದ ಪುನರ್ಲೇಖ ಪರಿಕಲ್ಪನೆಯ ಕುರಿತಂತೆ ವಿವಿಧ ನಿಘಂಟುಗಳಲ್ಲಿ ವ್ಯಕ್ತವಾಗಿರುವ ಅರ್ಥ ಮತ್ತು ವ್ಯಾಖ್ಯೆಗಳನ್ನು ಕ್ರೋಢೀಕರಿಸಲಾಗಿದೆ. ಈ ಸಮೀಕ್ಷೆಯಲ್ಲಿ ಪಾಶ್ಚಾತ್ಯ ಮತ್ತು ಭಾರತೀಯ ಅಭಿಪ್ರಾಯಗಳನ್ನು ಸಂಗ್ರಹಿಸುವುದರ ಜೊತೆಗೆ ಕನ್ನಡ ಸಂದರ್ಭದ ಪುನರ್ಲೇಖ ಪ್ರಕ್ರಿಯೆಯನ್ನು ವಿವರಿಸಲಾಗಿದೆ.

೩. ಮೂರನೇ ಅಧ್ಯಾಯದಲ್ಲಿ ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ವಿವಿಧ ಕಾಲಘಟ್ಟದಲ್ಲಿ ಪುನರ್ಲೇಖಗೊಂಡಿರುವ ಕನ್ನಡ ಮಹಾಭಾರತಗಳ ಸಮೀಕ್ಷೆಯೊಂದನ್ನು ನೀಡಲಾಗಿದೆ. ಈ ಸಂದರ್ಭದಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

೧) ಲೌಕಿಕ ಭಾರತಗಳು (ಪಂಪ, ರನ್ನರ ಕೃತಿಗಳು)

೨) ಭಾಗವತ ಸಂಪ್ರದಾಯದ ಭಾರತಗಳು (ಕುಮಾರವ್ಯಾಸ, ತಿಮ್ಮಣ್ಣ ಕವಿ, ಲಕ್ಷ್ಮೀಶ, ತಿಮ್ಮಪ್ಪದಾಸ, ಪರಮದೇವ ಕವಿ, ಮುಂತಾದವರ ಕೃತಿಗಳು)

೩) ಜೈನ ಭಾರತಗಳು (ನೇಮಿಚಂದ್ರ, ಸಾಳ್ವಕವಿ, ಮೂರನೇ ಮಂಗರಸ ಬಂಧುವರ್ಮ ಮುಂತಾದವರ ಕೃತಿಗಳು)

೪. ನಾಲ್ಕನೇ ಅಧ್ಯಾಯದಲ್ಲಿ ರನ್ನನ ಸಾಹಸಭೀಮ ವಿಜಯ ಕಾವ್ಯವನ್ನು ಪುನರ್ಲೇಖ ಪರಿಕಲ್ಪನೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದ್ದು. ಪಂಪನ ವಿಕ್ರಮಾರ್ಜುನ ವಿಜಯಂ ಕಾವ್ಯದ ಗದಾಯುದ್ಧ ಪ್ರಸಂಗವನ್ನು ಅನುಲಕ್ಷಿಸಿ, ರನ್ನ ಮತ್ತೆ ಬರೆದು ಹೇಗೆ ಯಶಸ್ಸು ಸಾಧಿಸಿದ್ದಾನೆಂದು ಈ ಅಧ್ಯಾಯದಲ್ಲಿ ವಿವರಿಸಿಕೊಡಲಾಗಿದೆ.

೫. ಐದನೇ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳನ್ನು ಕುರಿತು ಸ್ಥೂಲವಾಗಿ ಚರ್ಚಿಸ ಲಾಗಿದೆ. ಕೊನೆಯಲ್ಲಿ ಪರಾಮರ್ಶನ ಗ್ರಂಥಗಳನ್ನು ಕೊಡಲಾಗಿದೆ.

ಅಧ್ಯಯನದ ಮಹತ್ವ :

ನಮ್ಮ ಎಲ್ಲಾ ಆಲೋಚನೆಗಳು ಭಾಷಾಂತರಗಳೇ ಆಗಿರುತ್ತವೆ ಎಂಬ ಭಾಷಾಂತರ ಚಿಂತಕರ ಅಭಿಪ್ರಾಯದಂತೆ ಒಂದು ಕಾಲಘಟ್ಟದಲ್ಲಿ ರಚಿತವಾದ ಕಲಾಕೃತಿಯನ್ನು ಅದೇ ಕಾಲಘಟ್ಟದಲ್ಲಿ ಮತ್ತೊಬ್ಬ ಕವಿ ಮತ್ತೆ ಬರೆದಾಗ ಏನೆಲ್ಲಾ ಬದಲಾವಣೆಗಳು ಆಗಿ ಹೇಗೆ ಮಹತ್ವ ಪಡೆದುಕೊಳ್ಳುತ್ತದೆ ಎಂದು ಈ ಅಧ್ಯಯನದಿಂದ ತಿಳಿಯಬಹುದಾಗಿದೆ. ಈ ಸಂದರ್ಭದಲ್ಲಿ ಕವಿಗಳು ವಹಿಸಿಕೊಂಡ ಸ್ವಾತಂತ್ರ್ಯ ಮೂಲದ ಕ್ರಮವನ್ನು ವಿಕ್ರಮಗೊಳಿಸಿ ಹೇಗೆ ಯಶಸ್ಸು ಸಾಧಿಸಿದ್ದಾರೆಂದು ಈ ಅಧ್ಯಯನದಿಂದ ಕಂಡುಕೊಳ್ಳಬಹುದು. ಉದಾಹರಣೆಗೆ ಕಾಳಿದಾಸನ ಶಾಕುಂತಲಾ ನಾಟಕದ ಅನೇಕ ಅನುವಾದಗಳು ಕನ್ನಡದಲ್ಲಿ, ಇಂಗ್ಲೀಷನಲ್ಲಿ, ಇತರ ಭಾಷೆಗಳಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಬಂದಿವೆ. ಆದರೆ ಯಾವ ಒಂದು

ಭಾಷಾಂತರವೂ ಮೂಲ ಒಂದೇ ಆದರೂ ಸಂಪೂರ್ಣವಾಗಿ ಸಮಾನವಾಗಿಲ್ಲ. ಪ್ರತಿಯೊಂದು ಭಾಷಾಂತರವೂ ಮತ್ತೊಂದರಿಂದ ಭಿನ್ನವಾಗಿದೆ. ಉಪಯೋಗಿಸಿದ ಭಾಷಾಸ್ತರದಲ್ಲಿ, ಸಂಗ್ರಹ-ವಿಸ್ತಾರ ಕಾರ್ಯಗಳಲ್ಲಿ, ಇತ್ಯಾದಿ. ಇಂತಹ ಭಿನ್ನತೆಗಳನ್ನು ಗುರುತಿಸಿ, ಅವುಗಳ ಆಧಾರದ ಮೇಲೆ ನಾವು ಅನೇಕ ಸಾಹಿತ್ಯಿಕ ಸಾಂಸ್ಕೃತಿಕ ಒಳನೋಟಗಳನ್ನು ಪಡೆಯುವ ಸಾಧ್ಯತೆಯಿದೆ." [೨] ಎಂಬ ಈ ಅಭಿಪ್ರಾಯವನ್ನು ಪುನರ್ಲೇಖದ ಅಧ್ಯಯನದ ಮಹತ್ವದ ಹಿನ್ನಲೆಯಲ್ಲಿ ಗಮನಿಸಬಹುದಾದ ಅಭಿಪ್ರಾಯವಾಗಿದೆ. ಅದೇ ರೀತಿ ಕೀರ್ತಿನಾಥ ಕುರ್ತಕೋಟಿ ಹೇಳಿರುವ ಈ ಮಾತುಗಳು ಪುನರ್ಲೇಖದ ಮಹತ್ವವನ್ನು ಕುರಿತಂತೆ ಗಮನಾರ್ಹ ಅಭಿಪ್ರಾಯಗಳಾಗಿವೆ. "ಕಥೆ ದೊಡ್ಡದಾಗಿದ್ದರೆ ಅದನ್ನು ಚಿಕ್ಕದಾಗಿಸಿಕೊಳ್ಳುವುದು, ಚಿಕ್ಕದಾಗಿದ್ದರೆ ಅದನ್ನು ವಿಸ್ತಾರಗೊಳಿಸುವುದು, ಈ ಪ್ರಕ್ರಿಯೆ ಉದ್ದೇಶಪೂರ್ವಕವಾಗಿದೆಯಲ್ಲದೇ ಅದಕ್ಕೊಂದು ಅರ್ಥವೂ ಇದೆ. ಕಾವ್ಯ ಪರಂಪರೆ ಮುಂದುವರೆಯಬೇಕು ಅದರಲ್ಲಿ ಹೊಸ ಹೊಸ ಅರ್ಥಗಳಿಗೆ ಇಂಬು ದೊರಕಬೇಕು ಎಂದಾಗ ಹೀಗೆ ಕವಿತೆಯ ಗಾತ್ರದಲ್ಲಿ ಹೆಚ್ಚು ಕಡಿಮೆಯಾಗುತ್ತಿರಬೇಕು. ದೊಡ್ಡ ಕತೆ ಚಿಕ್ಕದಾದರೆ ಅನವಶ್ಯಕವಾದ ಅಪ್ರಸ್ತುತವಾದ ಅಂಶಗಳನ್ನು ತೆಗೆದುಹಾಕಬಹುದು. ಚಿಕ್ಕಕತೆ ದೊಡ್ಡದಿದ್ದರೆ ಮೂಲ ವಸ್ತುವಿನ ಸುತ್ತ ಹೊಸ ಅರ್ಥಗಳನ್ನು ಕಟ್ಟಿಕೊಳ್ಳಬಹುದು."[೩] ಈ ಅಭಿಪ್ರಾಯ ಪುನರ್ಲೇಖದ ಮಹತ್ವವನ್ನು ಅರಿತುಕೊಳ್ಳುವಲ್ಲಿ ಮುಖ್ಯವಾದುದು. ಸಾಹಿತ್ಯ ಅಧ್ಯಯನವು ಇದುವರೆಗೆ ಭಾಷಾಂತರ ಮತ್ತು ಸೋಪಜ್ಞತೆ ಎಂಬ ಪರಿಕಲ್ಪನೆಗಳ ಬಗ್ಗೆ ಹೊಂದಿದ್ದ ತಾರತಮ್ಯಾಧಾರಿತ ವಿವರಣೆಯನ್ನು ಬಿಟ್ಟುಕೊಟ್ಟು ಪುನರ್ಲೇಖವೆಂಬ ಪರಿಕಲ್ಪನೆಯ ಮೂಲಕ ಕನ್ನಡದ ಕಾವ್ಯ ಪ್ರಕ್ರಿಯೆಯನ್ನು ವಿವರಿಸಿಕೊಳ್ಳುವ ಈ ಅಧ್ಯಯನವು ಯಾವುದೇ ತಾರತಮ್ಯಗಳಿಲ್ಲದೇ ಕೃತಿಗಳೆರಡನ್ನು ಪರಿಭಾವಿಸಬಹುದಾದ ಸಾಧ್ಯತೆಯೊಂದನ್ನು ರೂಪಿಸಿಕೊಳ್ಳುವ ಪ್ರಯತ್ನದ್ದಾಗಿದೆ.

ಅಡಿಟಿಪ್ಪಣಿಗಳು:

೧. ಕೆ.ವಿ.ನಾರಾಯಣ ೧೯೯೯, ಭಾಷಾಂತರ ಸಾಂಸ್ಕೃತಿಕ ನೆಲೆಗಳು, ಪುಟ ೪

೨. ಡಾ.ಸಿ.ಎನ್.ರಾಮಚಂದ್ರನ್, ೨೦೦೭, ರಕ್ತಿ-ರೂಪಣೆ. ಪುಟ

೩. ಕುರ್ತಕೋಟಿ ಕೀರ್ತಿನಾಥ (೧೯೯೨) ಕನ್ನಡ ಸಾಹಿತ್ಯ ಸಂಘ ಪುಟ

ಅಧ್ಯಾಯ-೨

ಪುನರ್ಲೇಖದ ಅರ್ಥ ಮತ್ತು ವ್ಯಾಖ್ಯೆಗಳು

ಅಧ್ಯಾಯ - ೨

ಪುನರ್ಲೇಖದ ಅರ್ಥ ಮತ್ತು ವ್ಯಾಖ್ಯೆಗಳು.

ಭಾಷಾಂತರ ಅಧ್ಯಯನದಲ್ಲಿ ಪುನರ್ಲೇಖ ಎಂಬ ಕನ್ನಡ ಪದ ಇಂಗ್ಲೀಷ್‌ನ Rewriting ಗೆ ಸಂವಾದಿಯಾಗಿ ಬಳಕೆಯಾಗುತ್ತಿದೆ. ಇಂಗ್ಲೀಷ್-ಇಂಗ್ಲೀಷ್-ಕನ್ನಡ ನಿಘಂಟುವಿನಲ್ಲಿ Rewriting ಗೆ ಸಂವಾದಿಯಾಗಿ ಪುನರ್ಲೇಖ ಎಂದು ಅರ್ಥೈಸಲಾಗಿದೆ. ಕನ್ನಡ ನಿಘಂಟುವಿನಲ್ಲಿ ಮತ್ತೆ ಮತ್ತೆ ಮರಳಿ ಬರೆದದ್ದು. ಅಥವಾ ಬರವಣಿಗೆ ಎಂಬ ಅರ್ಥಗಳಿವೆ. ಪುನರುಕ್ತಿ ಎಂಬ ಪದ ಪ್ರಯೋಗವೂ ದೊರೆಯುತ್ತದೆ. ಒಂದನ್ನೇ ಪುನಃ ಪುನಃ ಹೇಳುವುದು ಎಂದು ಅರ್ಥ. ಪುನರ್ಲೇಖ ಪರಿಕಲ್ಪನೆ ಇಂಗ್ಲೀಷ್ ಸಾಹಿತ್ಯದ ಪ್ರೇರಣೆಯಿಂದ ಕನ್ನಡ ಸಾಹಿತ್ಯದಲ್ಲಿ ಪ್ರವೇಶ ಪಡೆದಿದೆ. ಭಾಷಾಂತರ ಮಾದರಿಗಳಲ್ಲಿ ಒಂದಾದ ಪುನರ್ಲೇಖ ಪ್ರಕ್ರಿಯೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಆದರಲ್ಲೂ ಆಧುನಿಕಪೂರ್ವ ಕನ್ನಡ ಸಾಹಿತ್ಯದಲ್ಲಿ ಮಹತ್ವವನ್ನು ಪಡೆದುಕೊಂಡಿದೆ.

Oxford Cross word dictionary ಯಲ್ಲಿ Rewriting ಎಂಬ ಪದಕ್ಕೆ To write again in a different aspect more suitableway ಎಂದೂ Mardern rewrite of an old story[1] ಎಂದು ವಿವರಿಸಲಾಗಿದೆ.

Oxford paper back dictionary ಯಲ್ಲಿ Rewrite to write (a thing) again in a different form or style[2] ಅಂದರೆ ಒಂದು ವಿಷಯವನ್ನು ಕುರಿತಂತೆ ಬೇರೆ ಬೇರೆ ಛಂದಸ್ಸು ಮತ್ತು ಶೈಲಿಯಲ್ಲಿ ಮತ್ತೆ ಮತ್ತೆ ಬರೆಯುವುದು ಅಥವಾ ಸೃಷ್ಟಿಸುವುದು ಎಂದಿದೆ. ಈ ಅರ್ಥವು ನಾವು ಇಂದು ಕರೆಯುವ ಪುನರ್ಲೇಖ ಪ್ರಕ್ರಿಯೆಗೆ ಹೆಚ್ಚು ಹತ್ತಿರವಾದ ವ್ಯಾಖ್ಯಾನವಾಗಿದೆ.

Rewriting ಎಂದರೆ To wrote something again or differently ಮತ್ತೆ ಬೇರೆ ರೀತಿಯಾಗಿ ಬರೆಯುವುದು ಎಂದರ್ಥ. ಇಲ್ಲಿ ಬೇರೆ ರೀತಿ ಎಂಬುದು ಬದಲಾವಣೆ, ವ್ಯತ್ಯಾಸ ಎಂಬ ಅರ್ಥ ಗ್ರಹಿತವಾಗುತ್ತದೆ.

Rewrite to write some thing again in order to improve it [3]
ಎಂದು ಕೇಂಬ್ರಿಡ್ಜ ಶಬ್ದ ಕೋಶದಲ್ಲಿ ವಿವರಿಸಿದೆ.

Oxford advanced learners dictionary ಯಲ್ಲಿ Rewring ಎಂಬುದಕ್ಕೆ ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ. To write again in a different way usually in order to improve it or because there is some new information.[4]

Route ledge Encyclopedia of Translation studies ಎಂಬ ಗ್ರಂಥದಲ್ಲಿ ಮೋನಾಬೇಕರ್ ಎಂಬುವವರು Literary translation (Research issues) ಎಂಬ ಲೇಖನದಲ್ಲಿ ಪುನರ್ಲೇಖ, ಅನುಸರಣೆ, ಅನುವಾದ ಇವುಗಳ ಬಗ್ಗೆ ಪ್ರಸ್ತಾಪಿಸುತ್ತಾ ಈ ಕೆಳಗಿನಂತೆ ಅಭಿಪ್ರಾಯಪಡುತ್ತಾರೆ. " The concept of translation itself is similarly far from being universal, and where it does exist, the borderlines between it and related concepts such as ADAPTATION and rewriting are not necessarily clear or uniformly drawn, whether historically or at a given moment in time, not even within the same linguistic tradition. [5]

The conscious oxford dictionary ಯಲ್ಲಿ ಪುನರ್ಲೇಖ ಪ್ರಕ್ರಿಯೆಗೆ Rewrite again or differently the act or an instance of Rewriting -a thing rewritten'[6] ಎಂಬ ವಿವರಣೆಯೂ ಇದೆ. ಅಂದರೆ ಒಂದು ಬಾರಿ ನಟಿಸಿದ್ದನ್ನು ಮತ್ತೊಮ್ಮೆ ಬೇರೆ ರೀತಿಯಾಗಿ ನಟಿಸುವುದು. ಹಾಗೂ ಒಮ್ಮೆ ಬರೆದದ್ದನ್ನು ಪುನ: ಬೇರೆ ಕ್ರಮವನ್ನು ಅನುಸರಿಸಿ ಬರೆಯುವುದು ಎಂದು ಅರ್ಥವಾಗುತ್ತದೆ.

Websters third new international dictionary ಯಲ್ಲಿ Rewriting man ಎಂಬ ಶಬ್ದವಿದ್ದು ಪುನ: ಬರೆಯುವವನು ಎಂದಾಗುತ್ತದೆ. ಅಲ್ಲದೇ Rewrite a piece of writing as a article or new story constructed by rewriting a complete of the first draft a nover[7] ಎಂದು ವ್ಯಾಖ್ಯಾನಿಸಲಾಗಿದೆ.

Douwe Fokkema ಎಂಬ ಪಾಶ್ಚಾತ್ಯ ಲೇಖಕ The various possible meaning or Rewriting- Different treditionas in east and west ಎಂಬ ಲೇಖನದಲ್ಲಿ ಪುನರ್ಲೇಖ ಪ್ರಕ್ರಿಯೆಯ ಬಗ್ಗೆ ಗಂಭೀರವಾಗಿ ಚರ್ಚಿಸುತ್ತಾನೆ. ಅವನ ಚರ್ಚೆಯ ಸಾರಾಂಶವನ್ನು ಸ್ಥೂಲವಾಗಿ ಇಲ್ಲಿ ಸಂಗ್ರಹಿಸಿ ಹೀಗೆ ವ್ಯಾಖ್ಯಾನಿಸಬಹುದು.. . . .

ಆಧುನಿಕ ಪೂರ್ವದಲ್ಲಿ ಯುರೋಪ್, ಚೀನಾ, ಭಾರತ ಸಾಹಿತ್ಯವು ಪುನರ್ಲೇಖ ಪ್ರಕ್ರಿಯೆಯಿಂದ ಕೂಡಿದ್ದು, ಅದು ಬೇರೆ ಬೇರೆ ಉದ್ದೇಶಗಳಿಂದ ಹೊಂದಿದೆ ಎಂದು ಅಭಿಪ್ರಾಯಪಡುತ್ತಾನೆ. ಒಂದು ಪುನರ್ಲೇಖಿತ ಪಠ್ಯವು ಹೊಂದಿರಬಹುದಾದ ವ್ಯತ್ಯಾಸಗಳನ್ನು ಫೊಕೆಮಾ ಈ ಕೆಳಗಿನಂತೆ ವಿಂಗಡಿಸುತ್ತಾನೆ.

Rewriting appears in many manifestations. As a classification, I might suggest the differentiation according to

a) the linguistic level: words, sentences, texts;
b) the narratological level: motifs, plots, themes;

c) the pragmatic level: kinds of texts (genres)

These divisions merely serve to give a predominantly quantitative indication of the entities we are talking about, but there are also qualitative differences in rewriting.[8]

ಅಂದರೆ

೧) ಭಾಷೆಯಲ್ಲಿ, ಪದದಲ್ಲಿ, ವಾಕ್ಯದಲ್ಲಿ ಬೇರೆ ಬೇರೆಯಾಗಿರುವುದು.

೨) ಕಥೆಯ ನಿರೂಪಣೆಯಲ್ಲಿ ಬದಲಾವಣೆಯನ್ನು ತರುವುದು.

೩) ಪ್ರಾಯೋಗಿಕವಾಗಿ ಸಾಕಷ್ಟು ವಿಚಾರವನ್ನು ಹೊಂದಿರುವುದಲ್ಲದೇ ಪುನರ್ಲೇಖದ ರೀತಿ ಮತ್ತು ಪದ್ಧತಿಯಲ್ಲಿ ಏನಾದರೂ ಹೊಸದನ್ನು ಸೇರಿಸಿ ಬರೆಯುವುದು.

ಈ ಮೂರೂ ಅಂಶಗಳು ಪುನರ್ಲೇಖದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಎಂಬುದಾಗಿ ಫೊಕೇಮಾ ತನ್ನ ಲೇಖನದಲ್ಲಿ ವಿವರಿಸುತ್ತಾನೆ. ಹಾಗೂ ಬೇರೆ ಬೇರೆ ದೇಶಗಳ ಉದಾಹರಣೆಗೆ ಚೈನಾ, ಯುರೋಪ್ ಮತ್ತು ಭಾರತದ ಸಾಹಿತ್ಯದಲ್ಲಿನ ಪುನರ್ಲೇಖ ಪ್ರಕ್ರಿಯೆಯ ಬಗ್ಗೆ ತನ್ನ ಲೇಖನದಲ್ಲಿ ಚರ್ಚೆ ನಡೆಸುತ್ತಾನೆ. ಅವನ ಅಭಿಪ್ರಾಯದಂತೆ ಭಾರತೀಯ ಪುನರ್ಲೇಖ ಸಾಹಿತ್ಯವು ಪ್ರಶ್ನೆ ಕೇಳುವುದರಲ್ಲಿಯೇ ಉತ್ತರವಿರುವ ಸಂಭಾಷಣೆವುಳ್ಳದ್ದಾಗಿರುತ್ತದೆ ಎಂದು ಭಾವಿಸುತ್ತಾನೆ. ಒಟ್ಟಾರೆ ಪುನರ್ಲೇಖ ಪ್ರಕ್ರಿಯೆಯ ಬಗ್ಗೆ ಫೊಕೆಮಾ ಒಂದು ವಿಮರ್ಶಾತ್ಮಕ ಲೇಖನವನ್ನು ಬರೆದಿದ್ದಾನೆ ಎಂದು ಹೇಳಬಹುದು.

ಹೀಗೆ ಇನ್ನೂ ಮುಂತಾದ ಪಾಶ್ಚಾತ್ಯ ವಿದ್ವಾಂಸರು ಪುನರ್ಲೇಖದ ಅರ್ಥ ಮತ್ತು ವ್ಯಾಖ್ಯೆಯ ಬಗ್ಗೆ ವಿವರಿಸಿದ್ದಾರೆ.

೧) ಈ ಮೇಲಿನ ಪಶ್ಚಿಮದ ಒಟ್ಟು ನಿಲುವು ಏನೆಂದರೆ ಮರು ಬರವಣಿಗೆ ಭಿನ್ನವಾಗಿರುತ್ತದೆ.

೨) ಮರು ಬರವಣಿಗೆ ಉತ್ತಮ ಪಡಿಸುವ ಹಾಗೂ ಸರಿ ಪಡಿಸುವ ದಿಕ್ಕಿನಲ್ಲಿ ಕೈಗೊಳ್ಳುವ ಪ್ರಕ್ರಿಯೆಯಾಗಿರುತ್ತದೆ.

೩) ಮೋನಾಬೇಕರ್ ಅವರ ಒಟ್ಟು ಅಭಿಪ್ರಾಯ ವೇನೆಂದರೆ ಒಂದೇ ಬಗೆಯ ಬರವಣಿಗೆ ಇರದೇ ಭಿನ್ನ ರೀತಿಯಲ್ಲಿ ಇರುವುದು ಎಂಬುದಾಗಿದೆ.

ಕನ್ನಡ ಶಬ್ದಕೋಶ ಮತ್ತು ವಿಮರ್ಶಕರ ವ್ಯಾಖ್ಯಾನಗಳು.

ಎಸ್.ವಿ.ಹಂಜಿಯವರ ಸಂಸ್ಕತ ಶಬ್ದಕೋಶದಲ್ಲಿ ಪುನರ್-ಪುನಃ ಎಂಬುದಕ್ಕೆ ಮತ್ತೊಮ್ಮೆ, ಮತ್ತೂ, ಹೊರ್ತಾಗಿ, ಅನೇಕ ಸಲ ಹಾಗೂ ಲೇಖನ ಎಂಬುದಕ್ಕೆ ಕೈಬರಹ ಎಂದು ಅರ್ಥವನ್ನು ಕೊಡಲಾಗಿದೆ.[9]

ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸಿರುವ ಕನ್ನಡ ನಿಘಂಟು ೭ನೇ ಸಂಪುಟದಲ್ಲಿ 'ಪುನರ್ರಚನೆ' ಎಂಬ ಪದಪುಂಜ ವಿದ್ದು, ಅದನ್ನು ನವೀಕರಿಸಿ ಪುನಃ ನಿರ್ಮಿಸುವಿಕೆ ಎಂದು ವಿವರಿಸಲಾಗಿದೆ.[10] ಇದೂ ಸಹ ಪುನರ್ಲೇಖದ ಪ್ರಕ್ರಿಯೆಯನ್ನು ಸ್ಥೂಲವಾಗಿ ವಿವರಿಸುತ್ತದೆಯೇ ಹೊರತು ಇಂಗ್ಲೀಷ್‌ನ Rewriting ಗೆ ಸಂವಾದಿಯಾಗಿ ಬಳಸುವ ಪುನರ್ಲೇಖ ಎಂಬರ್ಥವನ್ನು ಇದು ಧ್ವನಿಸುವುದಿಲ್ಲ.

ಈ ಮೇಲಿನ ಅಭಿಪ್ರಾಯದಂತೆ ಭಾಷಾಂತರ ಸಿದ್ಧಾಂತಗಳಿಗೆ ಹೊರತಾಗಿ ಒಂದು ಭಾಷೆಯಲ್ಲಿರುವ ಕೃತಿಯನ್ನು ಮತ್ತೊಂದು ಭಾಷೆಗೆ ಅನುವಾದ ಅಥವಾ ಅದೇ ಭಾಷೆಯಲ್ಲಿ ಮತ್ತೆ ಬರೆಯುವುದರಿಂದ ಬದಲಾದ ಅರ್ಥವನ್ನು ಹಾಗೂ ಅದರ ತಾತ್ವಿಕ ಮಹತ್ವವನ್ನು ಕಂಡುಕೊಳ್ಳಬಹುದಾಗಿದೆ.

ಕನ್ನಡ ಭಾಷೆ ಮತ್ತು ಸಾಹಿತ್ಯ ಸಂದರ್ಭದಲ್ಲಿ ಅದರಲ್ಲೂ ಜಾನಪದ ಸಾಹಿತ್ಯದ ಹಾಡುಗಳಲ್ಲಿ ಪದಗಳು ಪುನರುಕ್ತಗೊಳ್ಳುವ ಅಥವಾ ಒಮ್ಮೆ ಹೇಳಿದ ಸಾಲೊಂದನ್ನು ಮತ್ತೊಮ್ಮೆ ಹೇಳಿ ಮುಂದೆ ಹೋಗುವುದನ್ನು ಕಾಣುತ್ತೇವೆ. ಅಂದರೆ ಪುನರುಕ್ತಿ ಎಂಬ ಪ್ರಕ್ರಿಯೆ ಮೌಖಿಕ ಪರಂಪರೆಯಲ್ಲಿ ಹಿಂದಿನಿಂದಲೂ ಇತ್ತು ಎಂದು ಭಾವಿಸಬಹುದಾಗಿದೆ. ಅಂದು ಮೌಖಿಕವಾಗಿದ್ದ ಪುನರುಕ್ತಿ ಇಂದು ಲಿಖಿತ ರೂಪ ಪಡೆದು ಪುನರ್ಲೇಖವಾಗಿದೆ. ಅಲ್ಲದೇ ಅದು ಕೃತಿಯ ಮೌಲ್ಯವನ್ನು ಹೆಚ್ಚಿಸುವ ಹಾಗೂ ಅರ್ಥದಲ್ಲಿ ಬದಲಾವಣೆ ತರುವ ಕ್ರಿಯೆಯಾಗಿ ಕಾಣಿಸುತ್ತದೆ. ಉದಾಹರಣೆಗೆ "ಕೂಸು ಇದ್ದ ಮನೆಗೆ ಬೀಸಣಿಕೆ ಯಾತಾಕ, ಕೂಸು ಕಂದಯ್ಯ ಒಳಹೊರಗೆ ಆಡಿದರೆ" ಮತ್ತೊಮ್ಮೆ "ಕೂಸು ಕಂದಯ್ಯ ಒಳಹೊರಗೆ ಆಡಿದರೆ ಬೀಸಣೀಕೆ ಗಾಳಿ ಸುಳಿದಾವ" ಈ ತ್ರಿಪದಿಯನ್ನು ಹಾಡುವಾಗ ಕೂಸು ಕಂದಯ್ಯ ಒಳಹೊರಗೆ ಆಡಿದರೆ ಎಂಬ ಸಾಲು ಪುನರುಕ್ತವಾಗಿರುವುದನ್ನು ಕಾಣಬಹುದು.

ಇವುಗಳ ರಚನೆ ಯಾರಿಂದ ಯಾವಾಗ ಆಯಿತೆಂದು ನಿಕರವಾಗಿ ಬೊಟ್ಟುಮಾಡಿ ಹೇಳಲು ಸಾಧ್ಯವಿಲ್ಲ. "ರೂಢಿಗತವಾಗಿ ಬಾಯಿಂದ ಬಾಯಿಗೆ ಹಾದುಬಂದ ಈ ಹಾಡುಗಳು ತಲೆಮಾರುಗಳ ಅವಧಿಯಲ್ಲಿ ಹೊಸ ಸೃಷ್ಟಿಕಾರ್ಯಗಳಿಗೆ ಒಳಗಾಗುವುದು ಕಡಿಮೆ. ಇರುವುದರಲ್ಲಿಯೆ ಸಾಮುದಾಯಿಕ ಪುನರ್‌ಸೃಷ್ಟಿ(Communal recreation) ಯನ್ನು ಹೊಂದುತ್ತವೆ. ಕವಿಯ ಪ್ರತಿಭಾಮೂಸೆಯಲ್ಲಿ ಕಾವ್ಯ ಸೃಷ್ಟಿಯಾಗುವಂತೆ ಜನಪದ ಕಾವ್ಯ ಸೃಷ್ಟಿಯಾಗುವುದಿಲ್ಲ. ಜನಪದ ಕಾವ್ಯ ಬೆಳೆಯುತ್ತದೆ. ಸತತವಾಗಿ ಅದರ ಬದಲಾವಣೆ ನಡೆಯುತ್ತಾ ಹೋಗುತ್ತದೆ"[11] ಹೀಗೆ ಜನಪದ ಸಾಹಿತ್ಯದಲ್ಲಿ ಪುನರ್ಲೇಖ ಪ್ರಕ್ರಿಯೆಯನ್ನು ನೋಡಬಹುದು. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಈ ಕ್ರಿಯೆ ತೀರ ಸಹಜವೆಂಬಂತೆ ಕಂಡುಬರುತ್ತದೆ.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕೆ.ಡಿ.ಕುರ್ತಕೋಟಿ ಯವರು ಭಾಷಾಂತರ ಮತ್ತು ಪುನರ್ಲೇಖ ಪ್ರಕ್ರಿಯೆ ಬಗ್ಗೆ ಚರ್ಚಿಸುತ್ತ ಕೆಲವು ಮಹತ್ವದ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. ಕನ್ನಡ

ಸಾಹಿತ್ಯ ಸಂಗಾತಿ ಕೃತಿಯಲ್ಲಿ 'ಅನುವಾದ ಮತ್ತು ಪುನರ್ಲೇಖ' ಬಯಲು ಆಲಯ ಕೃತಿಯಲ್ಲಿ ಭಾಷಾಂತರ ಮತ್ತು ಪುನರ್ಲೇಖನ, ನೂರು ಮರ, ನೂರು ಸ್ವರ ಕೃತಿಯ ಪ್ರಸ್ತಾವನೆಯಲ್ಲಿ ಪುನರ್ಲೇಖ ಪ್ರಕ್ರಿಯೆಯ ಅರ್ಥದ ಬಗ್ಗೆ ಮಹತ್ವದ ವಿಚಾರವನ್ನು ಮಂಡಿಸಿದ್ದಾರೆ. ಅವರ ಪ್ರಕಾರ "ಕನ್ನಡ ಕಾವ್ಯದ ಇತಿಹಾಸ ಪ್ರಾರಂಭವಾಗುವುದು ಅನುವಾದ ಮತ್ತು ಪುನರ್ಲೇಖನಗಳಿಂದ 'ಕತೆ ಪಿರಿದಾದೊಡಂ ಕತೆಯ ಮೈಗಿಡಲೀಯದೆ ಸಮಸ್ತ ಭಾರತ ಮನಪೂರ್ವವಾಗಿ ಪೇಳ್ದ ಕಬ್ಬಿಗರಿಲ್ಲ' ಎಂದು ಪಂಪ ತನ್ನ ಕಾವ್ಯ ಪ್ರಯತ್ನದ ಬಗ್ಗೆ ಹೇಳುತ್ತಾನೆ. ಮೂಲಕಥೆಯ ಬಂಧ ಕೆಡದಂತೆ ಇನ್ನೊಂದು ಭಾಷೆಯಲ್ಲಿ ಅದನ್ನು ಮತ್ತೊಮ್ಮೆ ಬರೆಯುವುದು ಕಷ್ಟಸಾಧ್ಯವಾದ ಕಲೆ ಎಂದು ಅವನ ಅಭಿಪ್ರಾಯವಿದ್ದಂತಿದೆ. ಕತೆ ದೊಡ್ಡದಾಗಿದ್ದರೆ ಅದನ್ನು ಚಿಕ್ಕದಾಗಿಸಿ ಹೇಳುವುದು, ಚಿಕ್ಕದಾಗಿದ್ದರೆ ಅದನ್ನು ವಿಸ್ತಾರಗೊಳಿಸುವುದು- ಈ ಪ್ರಕ್ರಿಯೆ ಉದ್ದೇಶಪೂರ್ವಕವಾಗಿದೆಯಲ್ಲದೆ ಅದಕ್ಕೊಂದು ಅರ್ಥವೂ ಇದೆ. ಕಾವ್ಯಪರಂಪರೆ ಮುಂದುವರಿಯಬೇಕು ಮತ್ತು ಅದರಲ್ಲಿ ಹೊಸ ಹೊಸ ಅರ್ಥಗಳಿಗೆ ಇಂಬು ಇರಬೇಕು ಎಂದಾಗ ಹೀಗೆ ಕವಿತೆಯ ಗಾತ್ರದಲ್ಲಿ ಹೆಚ್ಚು ಕಡಿಮೆಯಾಗುತ್ತಿರಬೇಕು. ದೊಡ್ಡ ಕತೆ ಚಿಕ್ಕದಾದರೆ ಅನವಶ್ಯಕವಾದ, ಅಪ್ರಸ್ತುತವಾದ ಅಂಶಗಳನ್ನು ತೆಗೆದುಹಾಕಬಹುದು; ಚಿಕ್ಕ ಕತೆ ದೊಡ್ಡದಾದರೆ ಮೂಲವಸ್ತುವಿನ ಸುತ್ತ ಹೊಸ ಅರ್ಥಗಳನ್ನು ಕಟ್ಟಿಕೊಳ್ಳಬಹುದು."[೧೨] ಕುರ್ತುಕೋಟಿಯವರ ಈ ಅಭಿಪ್ರಾಯಗಳು ಪುನರ್ಲೇಖ ಪ್ರಕ್ರಿಯೆಯ ಅರ್ಥವನ್ನು ವ್ಯಾಖ್ಯಾನಿಸಿಕೊಳ್ಳುವಲ್ಲಿ ಮಹತ್ವವುಳ್ಳ ಅಭಿಪ್ರಾಯವಾಗಿದೆ. ಮತ್ತು ಪುನರ್ಲೇಖದಲ್ಲಿ ಹಳೆಯ ತಿಳುವಳಿಕೆ ಪ್ರತಿಮಾನಗಳು ಹೊಸ ಪ್ರತಿಮಾನಗಳೊಂದಿಗೆ ಕೂಡಿಕೊಂಡು ಹೊಸದಾದ ಅರ್ಥ ನಿರ್ಮಾಣಕ್ಕೆ ಕಾರಣವಾಗುತ್ತದೆ ಎಂಬ ವಿಚಾರವನ್ನು ಹೇಳುತ್ತಾ ಕೆಲವು ಉದಾಹರಣೆಗಳಿಂದ ಸ್ಪಷ್ಟಪಡಿಸುತ್ತಾರೆ. ಪುನರ್ಲೇಖದ ಪ್ರಕ್ರಿಯೆಯಲ್ಲಿ ಪ್ರತಿಮಾನಗಳು ಬೇರೆ ಬೇರೆ ಅರ್ಥವನ್ನು ಪಡೆದುಕೊಂಡು ಕಾಲಕ್ರಮದಲ್ಲಿ ಹೊಸ ಅರ್ಥಗಳೆಲ್ಲ ಸೇರಿ ಮೂಲ ಪ್ರತಿಮೆಯನ್ನು ಮತ್ತೆ ಕಟ್ಟುತ್ತಲೇ ಪುನಸೃಷ್ಟಿಗೊಳ್ಳುತ್ತವೆ ಎಂದು ವಿವರಿಸುತ್ತಾ ರೆ.

ಕುರ್ತಕೋಟಿಯ ಈ ಅಭಿಪ್ರಾಯಗಳು ಪುನರ್ಲೇಖ ಪ್ರಕ್ರಿಯೆಯ ಅರ್ಥವನ್ನು ವಿವರಿಸುತ್ತದೆ. ಅವರ ಒಟ್ಟಾಭಿಪ್ರಾಯದಲ್ಲಿ ಸಂಸ್ಕೃತದಲ್ಲಿನ ಮಹಾಭಾರತ ರಾಮಾಯಣಗಳು ಕನ್ನಡದಲ್ಲಿಯೂ ಇರಬೇಕು ಎಂಬ ಉದ್ದೇಶ ಹೊಂದಿದ್ದು, ಅವು ಭಾಷಾಂತರ ಮಾದರಿಗಳಲ್ಲಿ ಒಂದಾದ ಪುನರ್ಲೇಖಗಳೇ ಹೊರತು ನೇರ ಭಾಷಾಂತರಗಳಲ್ಲ ಎಂಬುದು ಅವರ ಅಭಿಪ್ರಾಯದ ಹಿನ್ನೆಲೆಯಲ್ಲಿರುವ ಆಶಯ. 'ಭಾಷಾಂತರ ಪ್ರಕ್ರಿಯೆಯಲ್ಲಿ ಕೇವಲ ವಿಭಿನ್ನ ಕಾಲ ದೇಶ ಮತ್ತು ಭಾಷೆ ರೂಪ ಸಂಜ್ಞೆ ವ್ಯವಸ್ಥೆಗಳಲ್ಲದೇ ಕ್ರಿಯಾಶೀಲ ಏಜೆಂಟ್ ಸಹ ಕೆಲಸ ಮಾಡುತ್ತಿರುತ್ತದೆ.'[13] ಎಂಬ ತಾರಕೇಶ್ವರ ಅವರ ಅಭಿಪ್ರಾಯ ಪುನರ್ಲೇಖ ಪ್ರಕ್ರಿಯೆಯ ಅರ್ಥವನ್ನೆ ವಿವರಿಸುತ್ತದೆ.

ಈ ಮೇಲೆ ವಿವರಿಸಿದ ವಿವಿಧ ಅರ್ಥ ಮತ್ತು ವ್ಯಾಖ್ಯಾನಗಳನ್ನು ಗಮನಿಸಿದಾಗ ಭಾಷಾಂತರದ ಹಲವಾರು ಮಾದರಿಗಳಲ್ಲಿ ಒಂದಾದ ಪುನರ್ಲೇಖ ಪ್ರಕ್ರಿಯೆಯು ಒಂದು ಕಲಾಕೃತಿಯನ್ನು ಮತ್ತೊಮ್ಮೆ ಬರೆದಾಗ ಕವಿ ವಹಿಸುವ ಸ್ವಾತಂತ್ರ್ಯ ಮತ್ತು ಬದಲಾವಣೆಗಳನ್ನು ವಿವರಿಸಿಕೊಡುತ್ತದೆ. ಎಷ್ಟು ಬಾರಿ ಬರೆದು ತೆಗೆದರೂ ಅದು ಮತ್ತೆ ಮತ್ತೆ ಬದಲಾವಣೆಗಳನ್ನು ಹೊಂದುತ್ತದೆ. ಏಕೆಂದರೆ ಒಬ್ಬರ ಗ್ರಹಿಕೆಯನ್ನು ಮತ್ತೊಬ್ಬರು ಗ್ರಹಿಸುವಲ್ಲಿಯೇ ಭಾಷಾಂತರ ಕ್ರಿಯೆಯೊಂದು ನಡೆಯುತ್ತದೆ ಎಂದು ಸ್ಟೈಬರ್ ಎಂಬ ಭಾಷಾಂತರಕಾರ ಅಭಿಪ್ರಾಯಪಡುತ್ತಾನೆ. ಈ ಹಿನ್ನೆಲೆಯಲ್ಲಿ ಒಂದು ಕೃತಿಯನ್ನು ಮತ್ತೆ ಬರೆದಾಗ ಬರೆಯುವವನ ಅರ್ಹತೆ ಮತ್ತು ಕಾಲಮಾನಕ್ಕನುಸಾರವಾಗಿ ಬೇರೆ ಬೇರೆ ಅರ್ಥಗಳು ರೂಪುಗೊಳ್ಳುತ್ತವೆ. ಈ ಸಂದರ್ಭದಲ್ಲಿ ಕುರ್ತಕೋಟಿಯವರ ಈ ಅಭಿಪ್ರಾಯ ಉಲ್ಲೇಖನಾರ್ಹ. "ಭಾಷಾಂತರ ಎಂದರೆ ಮುಖ್ಯವಾಗಿ ಒಂದು ಸಂಸ್ಕೃತಿಯ ವಿನಿಮಯ. ಒಂದು ಭಾಷೆಯ ಅರ್ಥ ಸಂಚಯವನ್ನು ಇನ್ನೊಂದು ಭಾಷೆಗೆ ಒಯ್ಯುವಾಗ ಅನೇಕ ವಿಸ್ಮಯಕಾರಿಯಾದ ಬದಲಾವಣೆಗಳಾಗುತ್ತವೆ. ಅಂದರೆ ಬದಲಾವಣೆ ಈ ವ್ಯಾಪಾರದಲ್ಲಿ ಅನಿವಾರ್ಯವಾಗುತ್ತದೆ"[14] ಹೀಗೆಯೇ ಒಂದು ಕೃತಿಯನ್ನು ಮತ್ತೆ ಬರೆದಾಗ ಇಂತಹ ಬದಲಾವಣೆಗಳಾಗಿತ್ತವೆ. ಅವು ಪುನರ್ಲೇಖಗಳು.

ಈ ಅರ್ಥ ವ್ಯಾಖ್ಯೆಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯವನ್ನು ಗಮನಿಸಿದಾಗ ಕೆಲವು ನೇರಾನುವಾದಗಳು ಹಾಗೂ ಕೆಲವು ಪುನರ್ಲೇಖಗಳು ಕಂಡು ಬರುತ್ತದೆ. ಅಂತಹ ಪುನರ್ಲೇಖಗಳಲ್ಲಿ ಒಂದಾದ ರನ್ನನ ಗಧಾ ಯುದ್ಧವನ್ನು ಪಂಪನ ಕೃತಿಯೊಂದಿಗೆ ತೌಲನಿಕ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ.

ಅಡಿಟಿಪ್ಪಣಿಗಳು

1. Oxford cross word dictionary,2006, P.No.1229
2. Oxford paperback dictionary, 1990, P.No.694
3. Cambridge learner Dictionary 2001 P.No.550
4. Oxford advanced learners dictionary,
5. Monabaker Route ledge Encyclopedia to translation studies, 2001 P.No.130
6. The conscious oxford dictionary, 1990, P.No.1032
7. Websters third new International dictionary, 1986, P.No.1229
8. Amiya Dev Edit, 1994, Narrative a seminor, P.No. 111.

9. ಹಂಜಿ ಎಸ್.ವಿ. 2003, ಸಂಸ್ಕೃತ ಕನ್ನಡ ಶಬ್ದಕೋಶ,

10. ಕನ್ನಡ ನಿಘಂಟು 6ನೇ ಸಂ., 1990,

11. ಶ್ರೀಕಂಠಕೂಡಿಗೆ 1973 ಅಂಟಿಗೆ ಪಂಟಿಗೆ ಪದಗಳು(ಸಂ.)ಪು.ಸಂ.11

12. ಕುರ್ತಕೋಟಿ ಕೀರ್ತಿನಾಥ, 2006, ಕನ್ನಡ ಸಾಹಿತ್ಯ ಸಂಗಾತಿ, ಪು.ಸಂ.

13. ತಾರಕೇಶ್ವರ ವಿ.ವಿ.2006 ವಸಾಹತುಶಾಹಿ ಮತ್ತು ಭಾಷಾಂತರ ಪ್ರಸಾರಂಗ, ಪು.ಸಂ.3

14. ಕುರ್ತಕೋಟಿ ಕೀರ್ತಿನಾಥ,1992 ಬಯಲು ಆಲಯ ಪುಟ 32

ಅಧ್ಯಾಯ-೩

ಆಧುನಿಕಪೂರ್ವ ಕನ್ನಡ ಭಾರತಗಳ ಪುನರ್ಲೇಖ

ಅಧ್ಯಾಯ-೩

ಆಧುನಿಕಪೂರ್ವ ಕನ್ನಡ ಭಾರತಗಳ ಪುನರ್ಲೇಖ

.ರಾಮಾಯಣ ಮಹಾಭಾರತ ಮಹಾ ಕಾವ್ಯ ಕೃತಿಗಳು ಭಾರತೀಯ ಸಾಹಿತ್ಯದಲ್ಲಿ ಮಹತ್ವದ ಸ್ಥಾನ ಪಡೆದು ಕೊಂಡಿರುವಂತಹವು, ಅವುಗಳನ್ನು ಕೇಳರಿಯದ ಜನ ಇಲ್ಲ ಅವು ಈ ದೇಶದ ಸಾಂಸ್ಕೃತಿಕ ಪ್ರತೀಕಗಳು. ಧಾರ್ಮಿಕ ಮತ್ತು ಲೌಕಿಕ ದೃಷ್ಟಿಯಿಂದಲೂ ತಾತ್ವಿಕ ಮಹತ್ವವುಳ್ಳ ಕೃತಿಗಳಾಗಿವೆ. ಭಾರತ ದೇಶದ ಎಲ್ಲ ಭಾಷಾ ಸಾಹಿತ್ಯದಲ್ಲಿ ಇವು ಮರು ರೂಪ ಪಡೆದಿವೆ. ಕಾಲಕಾಲಕ್ಕೆ ತನ್ನ ಆಶೋತ್ತರಗಳಿಗೆ ತಕ್ಕಂತೆ ಕವಿಗಳು ಇವುಗಳನ್ನು ಪುನರ್ ರೂಪಿಸಿದ್ದಾರೆ. ಕಥೆ ಕಾವ್ಯ ನಾಟಕ, ಕಾದಂಬರಿ ಟೀಕು ಟಿಪ್ಪಣಿ ಖಂಡಕಾವ್ಯ ಗದ್ಯಾನುವಾದ, ಸಂಗ್ರಹಾನುವಾದ, ಭಾವಾನುವಾದ ಹೀಗೆ ಹಲವು ಹತ್ತು ಪ್ರಕಾರಗಳಲ್ಲಿ ಪುನರ್ಲೇಖಿತವಾಗಿವೆ. ಪ್ರಸ್ತುತ ಅಧ್ಯಾಯದಲ್ಲಿ ಮಹಾಭಾರತದ ವಸ್ತುವನ್ನಾಧರಿಸಿ ಕನ್ನಡದಲ್ಲಿ ಪುನರ್ಲೇಖಗೊಂಡಿರುವ ಕವಿ ಕೃತಿಗಳನ್ನು ಪರಿಚಯಿಸಿಕೊಡಲಾಗಿದೆ. ಅವುಗಳನ್ನು ಇಲ್ಲಿ ಆಧುನಿಕಪೂರ್ವ ಕನ್ನಡ ಮಹಾಭಾರತಗಳೆಂದು ಕರೆಯಲಾಗಿದೆ.

ಕನ್ನಡ ಸಾಹಿತ್ಯ ಕೃತಿಗಳು ಅಧಿಕೃತವಾಗಿ ದೊರೆಯುವುದೇ ಕ್ರಿ.ಶ. 10ನೇ ಶತಮಾನದಲ್ಲಿ ಅದಕ್ಕಿಂತ ಪೂರ್ವದಲ್ಲಿ ಸಾಹಿತ್ಯ ಕೃತಿಗಳು ಇರುವುದಕ್ಕೆ ಸಾಕ್ಷಿಗಳು ಸಾಹಿತ್ಯ ಚರಿತ್ರೆಯಲ್ಲಿ ದೊರೆತರೂ ಅಧಿಕೃತ ಕೃತಿ ಅಥವಾ ಕಾವ್ಯಗಳು ಇನ್ನು ಸಿಕ್ಕಿಲ್ಲ. ಸುಮಾರು 8ನೇ ಶತಮಾನದ್ದೆಂದು ಹೇಳಲಾದ ಶ್ರೀ ವಿಜಯ ರಚಿತ ಕವಿರಾಜಮಾರ್ಗ ಕನ್ನಡದ ಮೊದಲ ಕೃತಿ. ಈ ಕೃತಿಯ 2ನೇ ಪ್ರಕರಣದಲ್ಲಿ ಒಬ್ಬ ರಾಜಕನ್ಯೆಯ ಸ್ವಯಂವರ ಸಂಧರ್ಭವುಳ್ಳ ಪದ್ಯವಿದೆ. (2-14) ಆದರಲ್ಲಿ **ಚಪಲಧ್ವಜ** ಎಂಬ ಪದ ಪ್ರಯೋಗವಾಗಿದೆ. ಚಪಲಧ್ವಜ ಎಂದರೆ ಅರ್ಜನ ಎಂದಾಗುವದಾದರೆ ಅದು ಹಿಂದೆ ಇದ್ದ ಕನ್ನಡ ಮಹಾಭಾರತ ಒಂದರಿಂದ ತೆಗೆದುಕೊಂಡು ಪದ್ಯವಾಗಿರಬಹುದು"[1] ಎಂದು ರಂ.ಶ್ರೀ.ಮುಗಳಿಯವರು ಹೇಳುವುದರಿಂದ ಪಂಪನಿಗಿಂತ ಮೊದಲು ಕನ್ನಡ ಮಹಾಭಾರತ ಇದ್ದುವೆಂದು ಊಹಿಸಬಹುದು. ಸಧ್ಯಕ್ಕೆ ಕನ್ನಡದ ಮೊದಲ ಮಹಾಭಾರತವನ್ನು ಆಧರಿಸಿದ ಕನ್ನಡ ಭಾರತ ಕೃತಿ ಎಂದರೆ ಪಂಪನ ವಿಕ್ರಮಾರ್ಜುನ ವಿಜಯ.

ಕನ್ನಡ ಮಹಾಭಾರತಗಳೆಲ್ಲವೂ ಸಂಸ್ಕೃತದ ವ್ಯಾಸರ ಭಾರತದ ಭಾಷಾಂತರಗಳೇ ಆದರೂ ಮೂಲನಿಷ್ಠತೆಯ ಪ್ರಶ್ನೆಯ ಹಿನ್ನೆಲೆಯಲ್ಲಿ ಅವು ಭಾಷಾಂತರಗಳಲ್ಲ. ಭಾಷಾಂತರದ ಹಲವು ಮಾದರಿಗಳಾದ ಪುನರ್ಲೇಖ, ಅನುಸರಣೆ, ಕನ್ನಡೀಕರಣ ಮುಂತಾದ ಪರಿಕಲ್ಪನೆಗಳ

ಹಿನ್ನೆಲೆಯಲ್ಲಿ ನೋಡಬಹುದಾದರೂ ಪ್ರಸ್ತುತ ಅಧ್ಯಯನದಲ್ಲಿ ಕನ್ನಡ ಮಹಾಭಾರತಗಳನ್ನು ಪುನರ್ಲೇಖಗಳೆಂದು ಪರಿಭಾವಿಸಿದೆ.

3.1 ಭಾರತದ ಲೌಕಿಕ ಪುನರ್ಲೇಖಗಳು

ಪಂಪ ರನ್ನರ ಕೃತಿಗಳಾದ ವಿಕ್ರಮಾರ್ಜುನ ವಿಜಯ ಮತ್ತು ಸಾಹಸ ಭೀಮ ವಿಜಯ ಕೃತಿಗಳನ್ನು ಈ ಸಾಲಿಗೆ ಸೇರಿಸಬಹುದು.

ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗುವಂತೆ ಕೆಲವೊಂದು ವಿಚಾರಗಳನ್ನು ಇಲ್ಲಿ ವಿವರಿಸಲಾಗಿದೆ. ಪಂಪ ತನ್ನ ಕೃತಿ ಬಗ್ಗೆ ಸಾಕಷ್ಟು ವಿವರಗಳನ್ನು ಹೇಳಿಕೊಂಡಿದ್ದಾನೆ. 'ಬೆಳಗುವೆನಿಲ್ಲಿ ಲೌಕಿಕಮುಮನಲ್ಲಿ ಜಿನಾಗಮಂ ಎಂದಿರುವುದರಿಂದ ಮೊದಲು ಆದಿಪುರಾಣ ಎಂಬ ಜೈನ ಧಾರ್ಮಿಕ ಕೃತಿಯನ್ನು ಬರೆದು ಸಾಕಷ್ಟು ಕಾವ್ಯಾನುಭವವನ್ನು ಪಡೆದಿದ್ದನು. ಹಾಗಾಗಿ ವಿಕ್ರಮಾರ್ಜುನ ವಿಜಯ ಹೆಚ್ಚು ಕಾವ್ಯಾತ್ಮಕ ಗುಣವನ್ನು ಪಡೆದುಕೊಂಡಿದೆ. ತನ್ನ ಕೃತಿಗೆ ವ್ಯಾಸಮುನಿಯ ಸಂಸ್ಕೃತ ಮಹಾಭಾರತ ಕಾರಣವೆಂದು ಈ ಕೆಳಗಿನ ಪದ್ಯದಲ್ಲಿ

ವ್ಯಾಸಮುನೀಂದ್ರ ರುಂದ್ರವಚನಾಮೃತ ವಾರ್ಧಿಯನೀಸುವೆಂ
ಕವಿವ್ಯಾಸನೆಂಬ ಗರ್ವಮೆನಗಿಲ್ಲ ಗುಣಾರ್ಣವನೊಳ್ಪು ಮನ್ಮನೋ।
ವಾಸಮನೆಯ್ದೆ ಪೇಳ್ದಪೆನದಲ್ಲದೆ ಗರ್ವಮೆ ದೋಷಮ ಲ್ತೆಗಂ
ದೋಷಮೆ ಕಾಣೆನೆನ್ನರಿವ ಮಾಳ್ಕೆಯೆ ಪೇಳ್ವೆನಿದಾವ ದೋಷಮೋ॥ ಪಂ.ಭಾ 1-13

ಎಂದು ತನ್ನ ವಿನಯವನ್ನು ಪ್ರದರ್ಶಿಸಿದ್ದಾನೆ. ಜೈನಧರ್ಮಿಯನಾದ ಪಂಪ ತನ್ನ ಆಶೋತ್ತರಗಳಿಗೆ ತಕ್ಕಂತೆ ಕೃತಿಯಲ್ಲಿ ಬದಲಾವಣೆ ತಂದಿದ್ದರೂ ಯಾವುದೇ ಧಾರ್ಮಿಕ ಈರ್ಷೆಗೆ ಕಾರಣವಾಗದಂತೆ ಎಚ್ಚರಿಕೆ ವಹಿಸಿದ್ದಾನೆ.

ಪಂಪನ ಕಾಲಕ್ಕೆ ಹಿಂದೆ ಕೆಲವು ಕನ್ನಡ ಭಾರತಗಳಿದ್ದು, ಅವು ಪಂಪನ ಮೇಲೆ ಪ್ರಭಾವ ಬೀರಿರಬಹುದೆಂದು ಊಹಿಸಬಹುದು. "ನಾಗವರ್ಮನ ಕಾವ್ಯಾವಲೋಕನದಲ್ಲಿ ಲಕ್ಷ್ಯವಾಗಿ ಕೊಟ್ಟಿರುವ ಕೆಲವು ಪದ್ಯಗಳು ಯಾವುದೇ ಕನ್ನಡ ಭಾರತಗಳಿಂದ ಉದ್ದರಿಸಲ್ಪಟ್ಟಿರುವುದಾಗಿ ಕಾಣುತ್ತದೆ. ಅಲ್ಲದೆ ಪಂಪನೇ 'ಮುಂ ಸಮಸ್ತ ಭಾರತಮನ ಪೂರ್ವಮಾಗಿ ಪೇಳ್ದ ಕವೀಶ್ವರರಿಲ್ಲ ಎಂದು ಹೇಳಿ ತನ್ನ ಭಾರತವನ್ನು 'ಸಮಸ್ತ ಭಾರತ ಎಂದು ಹೇಳಿಕೊಂಡಿರುವುದರಿಂದ ಇವನಿಗಿಂತ ಹಿಂದೆ ಕೆಲವರು ಭಾರತದ ಕೆಲಕೆಲ ಭಾಗಗಳನ್ನು ಕನ್ನಡದಲ್ಲಿ ರಚಿಸಿದ್ದರೆಂದೂ ಸಂಪೂರ್ಣವಾಗಿ ಭಾರತವನ್ನು ರಚಿಸಿದವರಲ್ಲಿ ಪಂಪನೇ ಮೊದಲಿಗ[2] ಎಂದು ಕನ್ನಡ ಸಾಹಿತ್ಯ ಚರಿತ್ರೆಕಾರರಾದ ರಂ.ಶ್ರೀ.ಮುಗಳಿ ಹೇಳುತ್ತಾರೆ.

"ವಿಕ್ರಮಾರ್ಜುನನ ವಿಜಯ ಸುದೀರ್ಘ ಇತಿಹಾಸದ ಕನ್ನಡ ಸಾಹಿತ್ಯವನ್ನು ಸಂಕ್ಷಿಪ್ತವಾಗಿ ಮಾಡಿರುವ ಮಹಾಕಾವ್ಯ. ಇದು ಕನ್ನಡದ ಆದಿಕಾವ್ಯ ಅಗ್ರ ಕಾವ್ಯ. ಈ ಭಾಷೆಯ ಒಂದು ಅವಿಭಾಜ್ಯವಾದ ಅಂಗ ಈ ಸಾಹಿತ್ಯದ ಪೋಷಕ ಶಕ್ತಿ, ಕಾವ್ಯೋನ್ನತಿಯ ಶಿಖರಸ್ಥಾನ ಈ ಕೃತಿಯನ್ನು ಕವಿ ಪ್ರಬಂಧ ಕೃತಿಬಂಧ ಎಂದು ಕರೆದಿರುವದಾಗಿ ಹೇಳಿಕೊಂಡಿದ್ದಾನೆ. ಆದ್ದರಿಂದ, ಇದೊಂದು ಪ್ರಬಂಧ ಕಾವ್ಯವೆಂದು ಹೇಳಬೇಕಾಗುತ್ತದೆ. ಹಿಂದೆ ಇತಿಹಾಸ ಮಹಾಕಾವ್ಯಗಳಂತಲ್ಲದೆ, ನಗರ, ಸಮುದ್ರ, ಪರ್ವತ, ಋತು ಮುಂತಾಗಿ ಪ್ರಸಿದ್ಧವಾಗಿರುವ 18 ವರ್ಣನೆಗಳಿಗೆ ಯಥೋಚಿಕವಾಗಿ ಪ್ರಾಮುಖ್ಯ ಕೊಟ್ಟು ನಾಯಕನೊಬ್ಬನ ಚರಿತ್ರೆಯನ್ನು ಜನನದಿಂದ ಮೊದಲುಗೊಂಡು ಅತಿಶಯವಾದ ಅಭ್ಯುದಯವನ್ನು ಪಡೆಯುವರೆಗೆ ವರ್ಣಿಸುವುದು ಈ ತೆರನ ಮಹಾಕಾವ್ಯದ ಸಾಮಾನ್ಯ ಲಕ್ಷಣವೆನ್ನುಬಹುದು. ಪ್ರಸ್ತುತ, ಭಾರತದ ಕಥೆಯನ್ನು ಭಿತ್ತಿಯಾಗಿಟ್ಟುಕೊಂಡು ಅರ್ಜುನನ ಚರಿತ್ರೆಯನ್ನು ಹಾಗೆ ಪಂಪ ಭಾರತದಲ್ಲಿ ನಿರೂಪಿಸಿದೆ."[3]

ಪಂಪ ಬಹುನಾಯಕರನ್ನುಳ್ಳ ವ್ಯಾಸ ಭಾರತವನ್ನು ಏಕ ನಾಯಕ ಪ್ರಧಾನವನ್ನಾಗಿ ಹಾಗೂ ಕಥಾಕೇಂದ್ರಿತವಾದ ಕಾವ್ಯವನ್ನು ವರ್ಣನಾ ಪ್ರಧಾನ ಕಾವ್ಯವಾಗಿ ಮಾಡಿಕೊಂಡು ರಚಿಸಿದ್ದಾನೆ. ಮತ್ತು ಪಂಪ ಜೈನ ಧರ್ಮೀಯನಾಗಿದ್ದು ವೈದಿಕ ಸಂಸ್ಕೃತಿಯ ಕೃತಿಯೊಂದನ್ನು ಪುನರ್ ರೂಪಿಸುವ ನೆಪದಲ್ಲಿ ತನ್ನ ಆಶೋತ್ತರಗಳಿಗೆ ತಕ್ಕಂತೆ ಬದಲಾಯಿಸಿ ಯಶಸ್ಸು ಸಾಧಿಸಿದ್ದಾನೆ. ಅವನ ಕೃತಿಯಲ್ಲಿ ಪ್ರಮುಖವಾಗಿ ಮಾಡಿಕೊಂಡಿರುವ ಬದಲಾವಣೆಗಳು ಈಗಾಗಲೇ ವಿಮರ್ಶಕರು ಗುರುತಿಸಿರುವಂತೆ ಅರ್ಜುನನ್ನು ತನ್ನ ಆಶ್ರಯದಾತನಿಗೆ ತಗುಳ್ಚಿ ಹೇಳಿರುವುದು, ಶ್ರೀಕೃಷ್ಣನ ಪಾತ್ರವನ್ನು ವೈಭವೀಕರಿಸದೇ ಸಂಕ್ಷೇಪಿಸಿರುವುದು ಕಾವ್ಯದ ಕೊನೆಯಲ್ಲಿ ಸುಭದ್ರೆ ರಾಣಿಯಾಗುವುದು ಇತ್ಯಾದಿ ಪಂಪನ ಕೃತಿಯನ್ನು ಪುನರ್ಲೇಖ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ ಅಧ್ಯಯನ ಮಾಡಬಹುದಾಗಿದೆ. ಹಾಗಾಗಿ ಇಲ್ಲಿನ ಅದ್ಯಯನಕ್ಕೆ ಪೂರಕವಾಗಿ ಪಂಪನ ವಿಕ್ರಮಾರ್ಜುನ ವಿಜಯದ ಬಗ್ಗೆ ಒಂದೆರಡು ಪರಿಚಯಾತ್ಮಕ ವಿವರಗಳನ್ನು ನೀಡಲಾಗಿದೆ. ಅವು ಪಂಪನ ಪುನರ್ಲೇಖ ಪ್ರಕ್ರಿಯೆಗಳು.

ಶ್ರೀ ಕೃಷ್ಣನ ಪಾತ್ರ ರಚನೆಯಲ್ಲಿ ಹಿಂದೂಗಳಿಗೆ ಭಾರತವು ಪಂಚಮವೇದ. ಅದರ ಮೂಲ ಶಕ್ತಿ ಶ್ರೀಕೃಷ್ಣ. ಕೆಲವು ಕವಿಗಳಂತೂ ಭಾರತವನ್ನು ಕೃಷ್ಣ ಚರಿತ್ರೆಯೆಂದೆ ಕರೆದಿರುವುದು ಉಂಟು. ಜೈನರಿಗೆ ಭಾರತದಲ್ಲಾಗಲಿ ಕೃಷ್ಣ ಭಗವಂತನಲ್ಲಾಗಲಿ ಪೂಜಾ ಮನೋಭಾವವಿಲ್ಲ ಅವರ ಪ್ರಕಾರ ಕೃಷ್ಣ ಗೌಣ ಹಾಗೂ ಒಬ್ಬ ಸಾಮಾನ್ಯ ಮನುಷ್ಯ ವಾಸುದೇವ . ಈ ಜೈನಮತದ ಪ್ರಭಾವದ ಫಲವಾಗಿ ಪಂಪನು ಶ್ರೀ ಕೃಷ್ಣ ವಿಷಯದಲ್ಲಿ ತೀರ್ಥಂಕರನಿಗೆ ತೋರಿರುವ

ಶ್ರದ್ಧಾಭಕ್ತಿಗಳನ್ನು ತೋರಿಲ್ಲವೆಂಬುದು ಗೋಚರವಾಗುತ್ತದೆ. ಅವನ ಪ್ರಾಮುಖತೆಯ ಸನ್ನಿವೇಶಗಳೆನ್ನೆಲ್ಲಾ ತೇಲಿಸಿಬಿಟ್ಟು ಕೊನೆಗೆ ಗೀತೋಪದೇಶವನ್ನು ವಿಕ್ರಮಾರ್ಜುನನೊಳಾದ ವ್ಯಾಮೋಹವನ್ನು ಕಳೆಯಲೆಂದು ದಿವ್ಯ ಸ್ವರೂಪಮಂ ತೋರಿ 'ನಿನಗೊಡ್ಡಿ ನಿಂದುದನೋವದೆ ಕೊಲ್ವೆಡೆ ನೀನುಮೆನ್ನ ಕಜ್ಜದೊಳೆಸಗೆಂದು ಸ್ವೇತಜಿತ ನಾದಿಯ ವೇದ ರಹಸ್ಯದೋಳ ನಿರಂತರಂ ಪರಿಚರ್ಯೆಯಿಂ ನೆರೆಯೆ ಯೋಜಿಸಿದ ಕದನ ತ್ರಿಣೇತ್ರನಂ'(ಪಂ.ಪಾ ಭಾರತ) ಎಂಬ ಭಾಗದಿಂದ ಮುಗಿಸಿಬಿಟ್ಟಿದ್ದಾನೆ. ಒಟ್ಟಾರೆ ಕನ್ನಡ ಮಹಾಭಾರತಗಳ ಪುನರ್ಲೇಖಗಳ ಸಾಲಿನಲ್ಲಿ ಮೊದಲು ನಿಲ್ಲುವ ಕೃತಿ ಪಂಪನ ವಿಕ್ರಮಾರ್ಜುನನ ವಿಜಯ.

"ಪಂಪ ಜೈನನಾಗಿದ್ದರೂ ಜೈನಭಾರತ ಸಂಪ್ರದಾಯದ ಹರಿವಂಶ ಪುರಾಣ ಮುಂತಾದವುಗಳ ಮೂಲಕ ಅವನಿಗೆ ಪರಿಚಿತವಾಗಿದ್ದರೂ ಅವನು ವೈದಿಕ ಸಂಪ್ರದಾಯದ ಭಾರತ ಕಥೆಗೆ ಒಲಿದಿರುವುದು ಕಾಣುತ್ತದೆ. ಆಶ್ರಯಧಾತನಾದ ಅರಿಕೇಸರಿಯ ಅಪೇಕ್ಷೆ ಹಾಗಿದ್ದಿರಬಹುದು. ವ್ಯಾಸಭಾರತದೊಂದಿಗೆ ಹರಿವಂಶ ಪುರಾಣಭಾಗವಾದ ಜೈನಭಾರತದ ಕಥೆ ಹೇಗೂ ಸರಿಗಟ್ಟಲಾರದೆಂದು ಅವನು ಭಾವಿಸಿರಬಹುದು."[4] ಕ ಎಂದು ಟಿ.ವಿ. ವೆಂಕಟಚಲಾಶಾಸ್ತ್ರಿ ಹೇಳುತ್ತಾ ಮುಂದುವರಿದು "ತನ್ನ ಕಾಲದ ಸಾಮಾಜಿಕ ಸ್ಥಿತಿಗತಿಗಳ ಅರಸು ಮನೆತನಗಳ ಹೋರಾಟಗಳ ರಾಜನೈತಿಕ ಸೂಕ್ಷ್ಮಗಳ ಚಿತ್ರಣಕ್ಕೆ ವ್ಯಾಸ ಭಾರತದ ಸಹಜ ವಿನ್ಯಾಸದ ಕಥೆ ಒಳ್ಳೆಯ ವೇದಿಕೆಯಾಗುವ ಹಾಗೆ ಭವಾವಳಿಗಳ ವಿವಾಹ ವೃತ್ತಾಂತಗಳು, ಉಪಖ್ಯಾನಗಳು ತುಂಬಿಕೊಂಡ ಜೈನಭಾರತ ಕಥೆ ವೇದಿಕೆಯಾಗಲಾರದು ಎಂಬುದು ವಿದಿತವೇ ಆಗಿದೆ."[5]

"ಪಂಪ ಮಾರ್ಗಸಾಹಿತ್ಯದ ಛಂದೋ ರೂಪಗಳನ್ನು ಬಳಸಿಕೊಂಡರೂ ತನ್ನ ಕೃತಿ ದೇಸಿಯ ಕೃತಿಯಾಗುವಂತೆ ಮಾಡುವುದು ಹೇಗೆ ಎಂಬ ಸಮಸ್ಯೆಯನ್ನು ಎದುರಿಸಿದವನು. ಲೌಕಿಕ ಮತ್ತು ಆಗಮಿಕಗಳ ಒಡಂಬಡಿಕೆಯನ್ನು ಸಾಧಿಸಲು ಬಯಸಿದವನು. ಆದ್ದರಿಂದಲೇ ಅವನ ಕೃತಿಯ ಶೀರ್ಷಿಕೆಯಲ್ಲೇ ಇರುವ ಸೂಚನೆಯನ್ನು ಕುರ್ತುಕೋಟಿ ಮೊದಲಾದ ವಿಮರ್ಶಕರು ಗುರುತಿಸುತ್ತಾರೆ. ಅದು ವಿಕ್ರಮ ಅಥವಾ ಕಥನ ಕ್ರಮದ ಭಂಗ. ವಿಕ್ರಮಾರ್ಜುನ ವಿಜಯವು ಮೂಲ ಕಥೆಯ ಕ್ರಮವನ್ನು "ವಿ-ಕ್ರಮ"ಗೊಳಿಸಿದ ಕ್ರಮಭಂಗಗೊಳಿಸಿದ ಸ್ವಾತಂತ್ರ್ಯದ ಕಥೆಯೂ ಹೌದು. ಪರಿಚಿತ ಮಹಾಭಾರತದ ಕಥನ ಕ್ರಮದ ಭಂಗವೇ ವಿಕ್ರಮಾರ್ಜುನ ವಿಜಯ"[6], ಇದು ಪಂಪವ ಪುನರ್ಲೇಖ ಕ್ರಿಯೆ.

ಪಂಪ ತನ್ನ ಭಾರತವನ್ನು ಹೆಚ್ಚು ಸಂವಾದ ರೂಪದಲ್ಲಿ ಬರೆದು ಚೈತನ್ಯವನ್ನುಂಟು ಮಾಡಿದ್ದಾರೆ. ಪಾತ್ರಗಳಾಡುವ ಭಾಷೆ ಬಹುಸರಳ ಸುಂದರವಾಗಿದೆ. ನಿದರ್ಶನವಾಗಿ ಶಿಶುಪಾಲನು ಪೂಜಾ ಸಂಧರ್ಭದಲ್ಲಿ ಆಡಿದ ಮಾತು ಧರ್ಮರಾಜನಿಗೆ ಆಡಿದ ಮಾತುಗಳು-

ಮನದೊಲವರಮುಳ್ಳೊಡೆ ಕುಡು

ಮನೆಯೊಳ್ ಹರಿಗಗ್ರಪೂಜೆಯಂ ಯಜ್ಞದೊಳೀ।

ಮನುಜಾಧೀಶ್ವರ ಸಭೆಯೊಳ್

ನೆನೆಯಲುಮಾಗದು ದುರಾತ್ಮನಂ ಬೆಸಗೊಳ್ವಾ॥ ಪಂ.ಭಾ. 6-45

ಸಹಜವಾಗಿ ಮಾತನಾಡಿದಂತೆ ಬರೆಯುವುದು ಪಂಪನ ಪದ್ಧತಿಯಾದುದರಿಂದ ಅವನು ಜನಸಾಮಾನ್ಯರಲ್ಲಿ ರೂಢಿಯಲ್ಲಿರುವ ಪದಗಳನ್ನು ದೇಸಿಯ ನುಡಿಗಟ್ಟುಗಳನ್ನು ಧಾರಾಳವಾಗಿ ಬಳಸುತ್ತಾನೆ. ಉದಾಹರಣೆಗೆ

1) 'ಪುಣ್ಯ ಭಾಜನನಂನೆಗೆ ನೂಕೆ ಪಾಸು'

2) 'ರಾಜಹಂಸ ಮಾನಸ ಸರೋವರನಲ್ಲದೆ ಪೆರತೆನೇಕೆ ಬಯಸುಗುಂ'

3) ಸೆಟ್ಟಿಯ ಬಳ್ಳಂ ಕಿರಿದು,

4) ನೃಪಚಿತ್ತ ವೃತ್ತಿ ಸಂಚಲಂ ಅದರಿಂದಂ ಓಲಗಿಸಿ, ಬಾಳ್ವುದೆ ಕಷ್ಟಂ
ಇಳಾಧಿನಾಥರಂ.,

5) ತನ್ನಿಕ್ಕಿದ ತತ್ತಿಯನೆ ಪಾವುನೊಣೆವಂತಕ್ಕುಂ,

6) ಭಾನುವೆ ಸಾಲದೆ ಪಗಲೆನಿತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ,

ಹೀಗೆ ಹಲವಾರು ದೇಸಿಯ ನುಡಿಗಟ್ಟುಗಳನ್ನು ತನ್ನ ಕೃತಿಯಲ್ಲಿ ಅರ್ಥಪೂರ್ಣವಾಗಿ ಬಳಸುವುದರ ಸೃಜನಶೀಲತೆಯನ್ನು ಮೆರೆದಿದ್ದಾನೆ. ಇಲ್ಲಿ ಯಾವುದೇ ಭಾಷಾಂತರದ ಮೂಲನಿಷ್ಠತೆಯ ಪ್ರಶ್ನೆ ಇಲ್ಲ. ಅವೆಲ್ಲವೂ ಅವನ ಸ್ವಂತ ಸೃಷ್ಟಿ. ಆದರೂ ಮೂಲಕಥೆಗೆ ಭಂಗವಿಲ್ಲ. ಒಟ್ಟಾರೆ ಅವನು ವಹಿಸಿಕೊಂಡ ಈ ಸ್ವಾತಂತ್ರ್ಯ ಮುಂದಿನ ಕವಿಗಳಿಗೆ ಮಾರ್ಗದರ್ಶನವಾಯಿತು. ಅಂದರೆ ಒಂದು ಹೊಸ ಕಾವ್ಯ ಪರಂಪರೆ ಅಥವಾ ಮಾರ್ಗ ನಿರ್ಮಾಣವಾಯಿತು. ಅದನ್ನು ನಾವು ಇಂದು ಪುನರ್ಲೇಖ ಕ್ರಿಯೆ ಎಂದು ಕರೆಯುತ್ತೇವೆ.

ಲೌಕಿಕ ಮಹಾಕಾವ್ಯದ ಸಾಲಿನಲ್ಲಿ ರನ್ನನ ಸಾಹಸಭೀಮ ವಿಜಯ ಎರಡನೆಯದು. ಪಂಪನದು ವಿಕ್ರಮಾರ್ಜುನ ವಿಜಯವಾದರೆ ರನ್ನನದು ಸಾಹಸಭೀಮ ವಿಜಯ.

ಪಂಪ ಮಧ್ಯಮ ಪಾಂಡವನನ್ನು ನಾಯಕನನ್ನಾಗಿ ಮಾಡಿದರೆ, ರನ್ನ ಎರಡನೆಯ ಪಾಂಡವನಾದ ಭೀಮನನ್ನು ನಾಯಕನನ್ನಾಗಿ ಮಾಡಿದ್ದು, ಈ ನಾಯಕ ಬದಲಾವಣೆಯಲ್ಲಿ ಒಂದು ಬಗೆಯ ಭಾಷಾಂತರ ನೆಲೆಯೊಂದು ನಮಗೆ ಗೋಚರವಾಗುತ್ತದೆ. ಹೀಗೆ ನಾಯಕನನ್ನು ಬದಲಿಸಿಕೊಂಡ ರನ್ನ ಆದಕ್ಕೆ ತಕ್ಕಂತೆ ಭೀಮನ ಪಾತ್ರವನ್ನು ಸೃಷ್ಟಿಸುತ್ತಾನೆ. ಹಾಗೂ ಮಹಾಭಾರತ ಕಥೆಯನ್ನು ಪುನರ್ಲೇಖಿಸುತ್ತಾನೆ ತನ್ನ ಕಾವ್ಯದ ಉದ್ದಕ್ಕೂ ಭಾಷೆ, ಭಾವ, ಶೈಲಿ, ತಂತ್ರ, ಕಥೆಯ ಪಲ್ಲಟ ಇತ್ಯಾದಿ ಬದಲಾವಣೆಗಳನ್ನು ತಂದುಕೊಂಡು ಕೃತಿಯ ಮಹತ್ವವನ್ನು ಹೆಚ್ಚಿಸಿದ್ದಾನೆ. ಅಂದರೆ ಮತ್ತೆ ಮತ್ತೆ ಬರೆಯುವ ಪ್ರಕ್ರಿಯೆಯೊಂದು ಕೃತಿಯಲ್ಲಿ ಬದಲಾವಣೆಗಳಾಗುತ್ತವೆ ಎಂದು ಮನಗಾಣಬಹುದು.

ರನ್ನನ ಗಧಾಯುದ್ಧವೆಂಬ ಸಾಹಸಭೀಮವಿಜಯ ವ್ಯಾಸರ ಮಹಾಭಾರತ ಪಂಪನ ವಿಕ್ರಮಾರ್ಜುನನ ವಿಜಯ ಭಟ್ಟನಾರಾಯಣನ ವೇಣಿ ಸಂಹಾರ ಭಾಸನ ಊರುಭಂಗ ಮುಂತಾದ ಕೃತಿಗಳ ಪ್ರೇರಣೆಯೊಂದಿಗೆ ರಚನೆಗೊಂಡಿದ್ದನ್ನು ಪಂಪನ ಪ್ರಭಾವ ದಟ್ಟವಾಗಿ ಎದ್ದು ಕಾಣುತ್ತದೆ. ಮಹಾಭಾರತದ ವಸ್ತುವಿಷಯವನ್ನೊಳಗೊಂಡ ಕನ್ನಡ ಭಾರತಗಳ ಸಾಲಿನಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ.

"ರನ್ನನ ಸಾಹಸ ಭೀಮವಿಜಯ ಮೊದಲಿನಿಂದ ಕೊನೆಯವರೆಗೂ ದುರ್ಯೋಧನನ ಪಡೆಮಾತಿನಿಂದ ತುಂಬಿ ಹೋಗಿರುವುದು ಹಾಗೆ ನೋಡಿದರೆ 'ದುರ್ಯೋಧನ ಭಾರತದ ಉದ್ದಕ್ಕೆ ನದಿಯಂತೆ ಹರಿಯುತ್ತಿದ್ದರೆ. ಕರ್ಣ ಅದರ ನಡುವೆ ಎದ್ದು ನಿಂತಿರುವ ನಡುಗಡ್ಡೆಯ ಕೋಡುಗಲ್ಲಿನಂತಿದ್ದಾನೆ' ಅಲ್ಲಿ ಕರ್ಣನ ವೀರ ಕರ್ಣನ ಸತ್ಯ, ಕರ್ಣನ ದಾನ ತಾನೇತಾನಾಗಿ ಮರೆದರೆ ದುರ್ಯೋಧನನ ಬಂಧು ಪ್ರೇಮ, ಸ್ನೇಹ, ಛಲ, ತಾನೇ ತಾನಾಗಿ ಮೆರೆಯಿತು. ಇಲ್ಲಿನ ದುರ್ಯೋಧನ ನಾವು ಮಹಾಭಾರತದಲ್ಲಿ ಕಾಣಲಾಗದ ಹೊಸ ದುರ್ಯೋಧನ ಪಂಪಭಾರತದ ಮಹಾಚಿತ್ರದಿಂದ ಪ್ರತ್ಯೇಕಿಸಿ ತೆಗೆದು ಹೊಸದಾದ ಮೆರಗು ಕೊಟ್ಟ ಹಸನು ಮಾಡಿದ ದುರ್ಯೋಧನ ಅದೇ ಏಕಾಂಗ ಸಾಹಸ, ಅದೇ ಮಹಾಸತ್ತ್ವ, ಅದೇ ಅಭಿಮಾನನ ಧನ, ಅದೇ ಸಯೋಧನ ಆದರೆ ಮಾತ್ರ ಅದೇ ಹಳೆಯ ವಿಗ್ರವನ್ನು ತಂದು ನಡೆಸಿರುವ ರಂಗ-ಸಂಪೂರ್ಣವಾಗಿ ರನ್ನನೇ ಆದ ರತ್ನರಂಗ" [7] ಎಂಬ ರಾಜರತ್ನಂ ಅವರ ಮಾತುಗಳು ಪಂಪ ರನ್ನರು ಚಿತ್ರಿಸಿರುವ ದುರ್ಯೋಧನನ ವ್ಯಕ್ತಿತ್ವನ್ನು ತೌಲನಿಕವಾಗಿ ಗ್ರಹಿಸಿರುವದಾಗಿದೆ.

ಈಗಾಗಲೇ ಪ್ರಸಿದ್ಧಿಪಡೆದ ಪಂಪನ ಕೃತಿಯ ಕಡೆಯ ಆಶ್ವಾಸದ ಘಟನೆಯೊಂದನ್ನೇ ಅಂದರೆ ಗದಾಯುದ್ಧ ಪ್ರಸಂಗವನ್ನು ತನ್ನ ಕಾವ್ಯದ ವಸ್ತುವನ್ನಾಗಿ ಮಾಡಿಕೊಂಡು

ಸಿಂಹಾವಲೋಕನ ಕ್ರಮವೆಂಬ ತಂತ್ರದೊಂದಿಗೆ ರನ್ನ ತನ್ನ ಕೃತಿಯನ್ನು ರಚಿಸಿದ್ದಾನೆ. ಭೀಮ ದುರ್ಯೋಧನನ ಯುದ್ಧವನ್ನು ಕೇಂದ್ರವಾಗಿಟ್ಟುಕೊಂಡು ತನ್ನ ಅದ್ಭುತ ನಾಟಕೀಯ ಶೈಲಿಯಲ್ಲಿ ಇಡೀ ಮಹಾಭಾರತದ ಕಥೆಯನ್ನೆಲ್ಲ ಸಂಗ್ರಹವಾಗಿ ಕಟೆದಿದ್ದಾನೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದೆನ್ನುವಂತೆ ಗದಾಯುದ್ಧ ಇತರೆ ಮಹಾಕಾವ್ಯಗಳಿಗೆ ಹೋಲಿಸಿದರೆ ಗಾತ್ರದಲ್ಲಿ ಚಿಕ್ಕದು. ಕೀರ್ತಿ ಧ್ವನಿಪಾರ್ಯಮ್ಯತೆ ರಸೋತ್ಕಟತೆಯಲ್ಲಿ ಎಲ್ಲಕ್ಕಿಂತಲೂ ಒಂದು ಕೈಮಿಗಿಲು ಎಂಬಂತೆ ತೋರುತ್ತದೆ. ಪಂಪನ ಹೆಜ್ಜೆಯ ಮೇಲೆ ಹೆಜ್ಜೆಯನಿಟ್ಟು ನಡೆದರೂ ಅವನ ಪುನರ್ಲೇಖ ಪ್ರಕ್ರಿಯೆ ಯಿಂದಾಗಿ ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ಈ ಸಂದರ್ಭದಲ್ಲಿ ಡಾ. ಬಿ.ಎ.ವಿವೇಕರೈ ಅವರ ಮಾತುಗಳು ಉಲ್ಲೇಖನಾರ್ಹ. " ಪಂಪ ಕವಿಯ ತನ್ನ ಭಾರತ ಕಥೆಯ ಕೇಂದ್ರವನ್ನು ಅರ್ಜುನನಿಂದ ರನ್ನನು ಭೀಮನಕಡೆಗೆ ವರ್ಗಾವಣೆ ಮಾಡುವ ಮೂಲಕ ನಿಜವಾದ ಶಕ್ತಿಯ ಅನಾವರಣ ಮಾಡುತ್ತಾನೆ. ದ್ರೌಪದಿಯಂತಹ ಹೆಣ್ಣಿನ ನೋವು ಮತ್ತು ಸಿಟ್ಟಿನ ಪ್ರತೀಕಾರದ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸಿಕೊಡುತ್ತಾನೆ. ಆದ್ದರಿಂದ ಪಂಪ ರನ್ನರ ನಡುವೆ ಕೇವಲ ನಾಯಕನ ಬದಲಾವಣೆ ಮಾತ್ರ ನಡೆಯದೇ ತಾತ್ವಿಕ ಪಲ್ಲಟ ಕೂಡಾ ಸಂಭವಿಸಿದೆ ಎಂಬುದನ್ನು ಗಮನಿಸಬೇಕು. ಯುದ್ಧದ ದುರಂತವೊಂದನ್ನು ಹೆಚ್ಚು ಪ್ರಖರವಾಗಿ ಪ್ರಕಟಿಸುವುದರ ಮೂಲಕ ಶಾಂತರಸದ ಅವಕಾಶಕ್ಕೆ ಬಾಗಿಲು ತೆರೆಯುವ ಕೆಲಸವನ್ನು ರನ್ನ ಕವಿ ಮಾಡುತ್ತಾನೆ."[8]

ರನ್ನ ಚಿತ್ರಿಸಿರುವ ಭೀಮ ದುರ್ಯೋಧನರ ಪಾತ್ರ ಕುರಿತಂತೆ ಪ್ರೋ: ಬಿ.ಸುಬ್ಬರಾಯ ಭಟ್ಟರು ಗದ್ಧಾಯುದ್ಧ ದರ್ಪಣದಲ್ಲಿ ಹೇಳಿರುವ ಈ ಕೆಳಗಿನ ಮಾತುಗಳು ಗಮರ್ನಾವಾದವು. "ಭೀಮ ದುರ್ಯೋಧನರಿಬ್ಬರೂ ರಾಜಸ ಪ್ರಕೃತಿಯವರೇ ಸ್ಥಿರಬದ್ಧ ಮತ್ಸರಲ್ಲಿ ಸ್ವಾತಿಕ ಗುಣ ಎಲ್ಲಿಂದ ಬರಬೇಕು ? ಭೀಮ ಮಧ್ಯಮ ಪಾಂಡವನು ಸ್ವಭಾವದಲ್ಲಿ ಮಧ್ಯಮನು ದುರ್ರ್ಯೋಧನ ಗಾಂಧಾರಿಯ ಮತ್ಸರ ಗರ್ಭದಿಂದ ಹೊರಬಂದವರಲ್ಲಿ ಮೊದಲಿಗನು ಇವನ ಛಲ ಮತ್ಸರಗಳು ರಕ್ತಗತವಾಗಿ ಬಂದವುಗಳು ಈ ಗುಣಗಳನ್ನು ಅಲ್ಲಗಳೆಯುವುದೆಂತು ? ತನ್ನ ಪ್ರತಿಭಾಕ್ತಿಯಿಂದ ಭಾರತ ಇವರಿಬ್ಬರ ನೈಜ ಸ್ವಭಾವಗಳನ್ನು ಕಂಡ ರನ್ನ ಅವುಗಳನ್ನು ಯಥೋಚಿತವಾಗಿ ಕಾವ್ಯದಲ್ಲಿ ಚಿತ್ರಿಸಿರುವನು, ಹಾಗೆ ಚಿತ್ರಿಸುವಾಗ ಅವರಿಬ್ಬರ ಮಾನಸಿಕ ತುಯ್ದಾಟವನ್ನು ಎಳೆಎಳೆಯಾಗಿ ವಿಶ್ಲೇಷಿಸಿ ಭೀಮನ ಏಕಮುಖ ವ್ಯಕ್ತತ್ವ ದುರ್ಯೋಧನ ದ್ವಿಮುಖ ವ್ಯಕ್ತಿತ್ವವನ್ನು ಮುಚ್ಚಿ ಹೇಳಿದೇ ಬಿಚ್ಚಿ ತೋರಿಸಿರುವುನು ಇದನ್ನು ನೋಡಿದಾಗ ರನ್ನನ್ನು ಮಹಾಕವಿ ಮಾತ್ರವಲ್ಲ ಶ್ರೇಷ್ಠ ಮನೋವಿಜ್ಞಾನಿ ಆಗಿದ್ದನನ್ನೆಬೇಕು. ಹೀಗೆ ಗಂಡುಗಲಿಯಾಗಿ ಮಹಾಕವಿಯಾಗಿ ಮನಶಾಸ್ತ್ರಜ್ಞನಾಗಿ ಕೀರ್ತಿಗಳಿಸಿದ್ದ ರನ್ನನು ಚಿರಸ್ಮರಣೆಯನೇ ಸರಿ"[9] ಪ್ರಸುತ್ತ

ಪಂಪ ರನ್ನರ ವಿಕ್ರಮಾರ್ಜುನ ವಿಜಯ ಮತ್ತು ಸಾಹಸ ಭೀಮವಿಜಯ ಕಾವ್ಯಗಳನ್ನು ಭಾಷಾಂತರ ದೃಷ್ಟಿಯಿಂದ ಪುನರ್ಲೇಖನಗಳೆಂಬ ಶಿರ್ಷಿಕೆಯಲ್ಲಿ ಗುರುತಿಸಬಹುದು.ಇವರ ನಂತರ ಕಾಲಗಣನೆ ದೃಷ್ಟಿಯಿಂದ ಸುಮಾರು 1-2 ಶತಮಾನಗಳ ಕಾಲಗಳವರೆಗೆ ಕನ್ನಡ ಮಹಾಭಾರತಗಳು ರಚಿತವಾಗಿರುವುದು ಕಂಡುಬರುವುದಿಲ್ಲ.

3.2 ಭಾರತದ ಭಾಗವತ ಪುನರ್ಲೇಖಗಳು

ಪ್ರಸುತ್ತ ಶೀರ್ಷಿಕೆ ಅಡಿಯಲ್ಲಿ ಕುಮಾರವಾಸ್ಯಭಾರತ, ತಿಮ್ಮಣ್ಣ ಕವಿ ಕೃಷ್ಣರಾಯಭಾರತ, ಲಕ್ಷ್ಮೀಶನ ಜೈಮಿನಿಭಾರತ, ತಿಮ್ಮಪ್ಪ ದಾಸರ ಶ್ರೀಕೃಷ್ಣ ಬಾಲಲೀಲೆ, ಪರಮದೇವ ವಿರಚಿತ ತುರಂಗಭಾರತ, ಇವುಗಳ ಮೂಲ ಪಠ್ಯವನ್ನು ಗಮನಿಸಿ ಭಾಷಾಂತರ ಮಾದರಿಗಳಲ್ಲಿ ಯಾವ ಮಾದರಿಗೆ ಈ ಕೃತಿಗಳು ಸೇರುತ್ತವೆ ಎಂದು ನಿರ್ಧರಿಸುವುದರ ಜೊತೆಗೆ ಅವೆಲ್ಲವೂ ಪುನರ್ಲೇಖಗಳೆಂದು ಗುರುತಿಸುವುದು.

ಭಾಗವತ ಸಂಪ್ರಾದಯದ ಸಾಲಿನಲ್ಲಿ ಮೊದಲು ನಿಲ್ಲಬಲ್ಲ ಕನ್ನಡ ಭಾರತ ಎಂದರೆ ಕುಮಾರವ್ಯಾಸನ ಕರ್ನಾಟಕ ಭಾರತ ಕಥಾಮಂಜರಿ. ಇದಕ್ಕೆ ಗದುಗಿನ ಭಾರತ, ಕನ್ನಡ ಭಾರತ, ಕುಮಾರವ್ಯಾಸ ಭಾರತ, ಕೃಷ್ಣ ಚರಿತೆ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತದೆ. ಈ ಹೆಸರುಗಳ ಬದಲಾವಣೆಯಲ್ಲಿಯೇ ಪುನರ್ಲೇಖದ ಪ್ರಕ್ರಿಯೆ ಗೋಚರವಾಗುತ್ತದೆ. ಈ ಕೃತಿರಚನೆಯ ಕಾಲವನ್ನು ಸುಮಾರು ಕ್ರಿ.ಶ.1400 ರಿಂದ 1500 ರ ನಡುವೆ ಎಂದು ಅಂದಾಜಿಸುತ್ತಾರೆ. ವ್ಯಾಸಭಾರತ ಕಥೆಯನ್ನು ಆಧರಿಸಿದರೂ ಕುಮಾರವ್ಯಾಸ ಪಂಪರನ್ನರನ್ನು ಓದಿದ್ದನೆಂದು ಆತನ ಕೃತಿಯಿಂದ ತಿಳಿಯುತ್ತದೆ. ."ತಿಳಿಯ ಹೇಳುವೆ ಕೃಷ್ಣ ಕಥೆಯನು ಇಳೆಯ ಜಾಣರು ಮೆಚ್ಚುವಚಿತಿರೆ, ನೆಲೆಗೆ ಪಂಚಮಶೃತಿಯನೊರೆವೆನು ಕೃಷ್ಣ ಮೆಚ್ಚಲಿಕೆ (1-25) ಎಂದು ತನ್ನ ಕಾವ್ಯೋದ್ದೇಶವನ್ನು ಸ್ಪಷ್ಟಪಡಿಸಿದ್ದಾನೆ. ವೀರನಾರಾಯಣನೆ ಕವಿ ಲಿಪಿಕಾರ ಕುವರ ವ್ಯಾಸನೆಂದು ತನ್ನ ವಿನಯವನ್ನು ಪ್ರದರ್ಶಿಸಿದ್ದಾನೆ. ಪರಮಾತ್ಮನ ಸ್ತುತಿರೂಪವಾಗಿಯೇ ಇದನ್ನು ರಚಿಸುವೆನಾದ್ದರಿಂದ ಹಲವು ಜನ್ಮದ ಪಾಪರಾಶಿಯ ತೊಳೆವ ಜಲವಿದು ಶ್ರೀಮದಾಗಮ ಕುಳಕೆ ನಾಯಕ ಭಾರತಾ ಕೃತಿ ಪಂಚಮಶೃತಿಯು. ಎಂದು ಹೇಳಿಕೊಂಡಿದ್ದಾನೆ."[10] ಪ್ರಸ್ತುತ ಮಹಾಭಾರತವು ಹತ್ತು ಪರ್ವಗಳಿಂದ ಕೂಡಿದ್ದು, ಮೊದಲ ಐದು ಪರ್ವಗಳು ಆದಿ ಪಂಚಕವೆಂತಲೂ, ನಂತರದ ಐದು ಪರ್ವಗಳನ್ನು ಯುದ್ಧ ಪಂಚಕಗಳೆಂದು ಗುರುತಿಸಲಾಗಿದೆ.

ಕುಮಾರವ್ಯಾಸನು ತನ್ನ ಕಾಲದ ದೇಶದ ರೀತಿ-ನೀತಿಗಳನ್ನು ಬಹಳ ಸೊಗಸಾಗಿ ವರ್ಣಿಸಿರುವುದನ್ನು ಅಲ್ಲಲ್ಲಿ ನೋಡಬಹುದಾಗಿದೆ. ಮನೆಮಾತಿನ ನೇರವಾದ ಶೈಲಿಯಿಂದ

ಪಾಠಕರ ಮನಸ್ಸನ್ನು ಅವನು ಸೂರೆಗೊಳ್ಳುತ್ತಾನೆ. 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ, ಪದವಿಟ್ಟಳುಪದೊಂದಗ್ಗಳಕೆ . . . ಎಂದು ತನ್ನ ಕಾವ್ಯಶಕ್ತಿಯನ್ನು ಹೇಳಿಕೊಂಡಿದ್ದಾನೆ.

ವ್ಯಾಸರ ಇತಿಹಾಸ ಕಾವ್ಯವನ್ನು ಕನ್ನಡ ಭಾರತವಾಗಿ ಮಾಡಿರುವುದು ಇಲ್ಲಿ ಪುನರ್ಲೇಖ ಎಂದು ತಿಳಿಯಬಹುದಾಗಿದೆ. ಅಮೂಲಾಗ್ರವಾಗಿ ಕೃತಿಯನ್ನು ಅಧ್ಯಯನ ಮಾಡಿದಾಗ ಮೂಲಭಾರತದ ಪ್ರಸಂಗಗಳು ಹೇಗೆ ಬದಲಾಗಿ ಮರುರೂಪ ಪಡೆದುಕೊಂಡಿವೆ ಎಂದು ಗೋಚರವಾಗುತ್ತದೆ. ಶ್ರೀಕೃಷ್ಣನ ಪಾತ್ರ ಸಂಗತಿಯನ್ನು ತನ್ನ ಕಾವ್ಯೋದ್ದೇಶಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು ಕೃಷ್ಣ ಚರಿತೆಯಾಗಿ ಮಾಡಿದ್ದಾನೆ. ಕನ್ನಡ ಭಾಷೆಯ ಅಂತಃಸತ್ವವನ್ನು ಹಿಡಿದಿಟ್ಟಿದ್ದಾನೆ.

ಕುಮಾರವ್ಯಾಸನಿಗೆ ಮಹಾಭಾರತ ಭಗಂತವಿಲಾಸದ ತಾಣವಾಗಿದೆ. ಪಂಪ ರನ್ನರಿಗೆ ಲೌಕಿಕವಾಗಿದ್ದು, ಕುಮಾರವ್ಯಾಸನಿಗೆ ಪಾರಮಾರ್ಥಿಕವಾಗಿ ಕಂಡಿದೆ ಮತ್ತು ಆತ್ಮ ಪ್ರಕಾಶದ ಏಕೈಕ ಪ್ರಕಾರವಾಗಿದೆ. ಪಂಪನ ಪ್ರತಿಭೆ ಇಮ್ಮಡಿಯಾಗಿ ಅವನ ಎರಡು ಕಾವ್ಯದಲ್ಲಿ ವ್ಯಕ್ತವಾದರೆ ಇವನ ಪ್ರತಿಭೆ ಒಂದೇ ಕೃತಿಯಲ್ಲಿ ಮೂಡಿದೆ. ತನ್ನ ಕಾವ್ಯದ ಫಲವನ್ನು ಕುರಿತಂತೆ ಈ ರೀತಿ ಅಭಿಪ್ರಾಯ ಪಡುತ್ತಾನೆ.

ವೇದ ಪಾರಾಯಣದ ಫಲ ಗಂ.
ಗಾದಿ ತೀರ್ಥ ಸ್ನಾನ ಫಲ ಕೃ
ಚ್ಛ್ರಾದಿ ತಪಸಿನ ಫಲವು ಜ್ಯೋತಿಷ್ಟೋಮ ಯಾಗಫಲ.
ಮೇದಿನಿಯ ನೊಲಿದತ್ತ ಫಲ ವ
ಸ್ತ್ರಾದಿ ಕನ್ಯಾದಾನ ಫಲವಹು
ದಾದರಿಸಿ ಭಾರತದೊಳಂದಕ್ಷರವ ಕೇಳ್ದರಿಗೆ.

ಆದಿಪರ್ವ 1-20

ಇಂತಹ ಮಹಾಸತ್ವವುಳ್ಳ ಕೃತಿಗೆ ಕಾರಣಕೃತರರಾದವರ ಬಗೆಗಿನ ಧೋರಣೆಯನ್ನು ನೋಡಿದಾಗ ಕುಮಾರವ್ಯಾಸನ ಕೃಷ್ಣ ಭಕ್ತಿ ಏನೆಂದು ಗೋಚರವಾಗುತ್ತದೆ.

ವೀರ ನಾರಾಯಣನೆ ಕವಿ ಲಿಪಿ
ಕಾರ ಕುವರ ವ್ಯಾಸ ಕೇಳುವ
ಸೂರಿಗಳು ಸನಕಾದಿಗಳು ಜಂಗಮ ಜನಾರ್ದನರು
ಚಾರಕವಿತೆಯ ಬಳಕೆಯಲ್ಲ ವಿ
ವಿಚಾರಿಸುವಡಳವಲ್ಲ ಚಿತ್ತವ

ಧಾರು ಹೋ ಸರ್ವಜ್ಞರಾದರು ಸಲುಗೆ ಬಿನ್ನಪವ.1-7 (ಕುಮಾರವ್ಯಾಸ ಭಾರತ)

ಕುಮಾರವ್ಯಾಸ ಕಂಡ ಕೃಷ್ಣ ಅವನ ಆದರ್ಶ ಪ್ರತಿಮೆಯಾಗಿ ಮೂಡಿದ್ದಾನೆ. ಆತ ನರನಾಟಕದ ಸೂತ್ರದಾರಿ ಕವಿ ಬಗವದ್ ಪಾರಮ್ಯವನ್ನು ಹೇಳುವ ಭರದಲ್ಲಿ ಔಚಿತ್ಯ ಮರೆತಿಲ್ಲ ಇದಕ್ಕೆ ಭೀಷ್ಮ ಪರ್ವದಲ್ಲಿ ಕೃಷ್ಣನು ಚಕ್ರವನ್ನು ಕೈಯಲ್ಲಿ ಹಿಡಿದ ಸನ್ನಿವೇಶವನ್ನು ಕಾಣಬಹುದು. ಭಗವಂತನೂ ದಾರಿ ತಪ್ಪಬಲ್ಲ ಅಂತಹ ವೇಳೆ ಭಕ್ತ ತಿದ್ದಬಲ್ಲ ಶಕ್ತನಾಗಿದ್ದರೆ ಭೀಷ್ಮನ ಅಂತಹ ಭಕ್ತಿಯನ್ನು ಕುಮಾರವ್ಯಾಸ ವರ್ಣಿಸಿರುವ ಕ್ರಮ ಗಮರ್ನಾಹ ಅಂದರೆ ವ್ಯಾಸಭಾರತದ ಭೀಷ್ಮರ ವ್ಯಕ್ತಿತ್ವಕ್ಕೂ ಇಲ್ಲಿನ ಭೀಷ್ಮರ ವ್ಯಕ್ತಿತ್ವಕ್ಕೂ ಇರುವ ವ್ಯತ್ಯಾಸವನ್ನು ನೋಡಿದರೆ, ಭಾಷಾಂತರ ಪ್ರಕ್ರಿಯೆಯ ಅಂಶವನ್ನು ಮನಗಾಣಬಹುದು.

ಹೋದುದೊಂದ ಮೃತ್ಯು ಲೋಕಕೆ
ವೇದುದಿಲ್ಲಾ ಯುಷ್ಯ ಮಗದಪವಾದ
ವಾದ ದೇವಂಗಾಗಿ ತಪ್ಪತ್ತು ಮುಚ್ಚು ಮರೆಯೇಕೆ.
ಕಾದುಕೊಂಡನು ಭೀಷ್ಮ ನೀ ಕಮ
ಲೋದರನ ಕೆರಳಿಚಿಯು ಭಕುತಿಯ
ಲಾದರಿಸಿದನು ಪುಣ್ಯವೆಂದನು ಕಮಲಭವ ನಗತ.

ಭೀಷ್ಮ ಪರ್ವ ಸಂಧಿ 6-47

ಹೀಗೆ ಕುಮಾರವ್ಯಾಸ ತನ್ನ ಕಾವ್ಯದಲ್ಲಿ ಭಗವಂತ ದರ್ಶನದ ಸೂರ್ಯತೇಜಸ್ಸನ್ನು ಕಂಡಿದ್ದಾನೆ ಅವನ ಕಾವ್ಯದ ರೀತಿ ರೂಪಕಯುಕ್ತವಾದದು. ಅವನಿಗೆ ರೂಪಕ ಸಾಮ್ರಾಜ್ಯ ಚಕ್ರವರ್ತಿಯೆಂದೆ ಬಿರುದು. ಉದಾ: 1)"ಬಂಧುಗಳ ದರ್ಶನ ಫಲಬಲ ಸಂಸಾರ ತರುವಿಂದೆ," 2)" ನಮ್ಮ ಭಾಗ್ಯದ ಬಾಣಸಿಗ ವಿಧಿ ವಿಷವ ಬರಿಸುವೊಡಾರು ಕಾವರು "

ಅವನು ನುಡಿಯುವ ಭಾಷೆಯೇ ಭಾವವಾಗುತ್ತದೆ. ಭಾಷೆ ರೂಪಕವಾಗುತ್ತದೆ. ರೂಪಕವನ್ನು ಆ ನುಡಿಯಿಂದ ಬಿಡಿಸಿ ತಗೆಯುದಕ್ಕೆ ಸಾಧ್ಯವಾಗುವದಿಲ್ಲಾ ಯಾರನ್ನಾದರೂ ಅನುವಾದ ಮಾಡಬಹುದು. ಕುಮಾರವ್ಯಾಸನ ಅನುವಾದ ಮಾಡುವುದು ಎಂದೆದೊಗೂ ದುಸ್ಸಾಧ್ಯ."[11]

ಕವಿ ತನ್ನ ಶಕ್ತಿಯನ್ನು ಹೇಳಿಕೊಳ್ಳುತ್ತಾ ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ ಪದವಿಟ್ಟಳುಪದೊಂದಗ್ಗಳಿಕೆ. ಎಂದು ಕೊಂಡಾಡಿದ್ದಾನೆ. ಇವನ ರೂಪಕ ಶಕ್ತಿಯನ್ನು ಕಂಡಾಗ ಈ ಮಾತು ಉತ್ಪ್ರೇಕ್ಷೆಯಲ್ಲ ಎನಿಸುತ್ತದೆ.

"ವ್ಯಾಸನ ಅಖಂಡ ಭಾರತವನ್ನು ಕನ್ನಡದಲ್ಲಿ ಮರುಸೃಷ್ಟಿಗೆ ಒಳಪಡಿಸಿರುವ ಕ್ರಮ ಅನುವಾದದ ಸಂದರ್ಭದಲ್ಲಿ ತಾನು ತಾಳುವ ನಿರ್ಣಯಗಳು ಮಹತ್ವವಾದವು. ಇಲ್ಲಿನ ಕಥೆ

ಪಾತ್ರ ಸನ್ನಿವೇಶಗಳೆಲ್ಲವೂ ಕನ್ನಡದ ಮೂಸೆಯಲ್ಲಿ ಹುಟ್ಟಿಬೆಳೆದಂತಹವು. ಕಥೆಯ ಓಘವನ್ನು ಹರಿಯ ಬಿಡುವಲ್ಲಿ ಷಟ್ಪದಿಯ ನಡಿಗೆ ಸಹಜತೆಯನ್ನು ಪಡೆಯುತ್ತದೆ. ಪಂಪನ ಭಾರತದ ಕೇಂದ್ರ ನಾಯಕನಾಗಿ ಅರ್ಜುನ ಅರಿಕೇಸರಿಯಾಗಿ ಭಾಷಾಂತರಗೊಂಡರೆ ಕುಮಾರವ್ಯಾಸ ಭಾರತದಲ್ಲಿ ಕೃಷ್ಣನ ಭಕ್ತಿಕೇಂದ್ರಪಾತ್ರವಾಗಿ ರೂಪಕವಾಗುತ್ತದೆ. ಪುರಾಣ ಕಥೆಯಾಗಿ ಮಾರ್ಪಡುತ್ತದೆ"[12]

ಕುಮಾರವ್ಯಾಸನ ಕೃತಿಯು ಭಾಷಾಂತರ ನೆಲೆಯಲ್ಲಿ ವ್ಯಾಸರ ಕೃತಿಯ ಕನ್ನಡೀಕರಣ ಎಂದು ಕರೆಯಬಹುದು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಪಂಪ ರನ್ನರು ಹೇಗೆ ಏಕ ನಾಯಕ ಕೃತಿಯನ್ನಾಗಿ ಮಾಡಿದರೋ ಹಾಗೆ ಕುಮಾರವ್ಯಾಸನು ತಿಳಿಯ ಹೇಳುವೆ ಕೃಷ್ಣ ಕತೆ ಎಂದು ಹೇಳುವ ಮೂಲಕ ತನ್ನ ಕಥೆಯ ನಾಯಕನನ್ನು ಗುರುತಿಸಿಕೊಂಡಿದ್ದಾನೆ. ಅವನ ಸಂಗ್ರಹಣೆಯನ್ನು ಕುರಿತಂತೆ ಕುರ್ತಕೋಟಿಯವರು

"ಕುಮಾರವ್ಯಾಸ -ಹೆಸರೆ ಸೂಚಿಸುವಂತೆ ವ್ಯಾಸರ ಮೂಲ ಭಾರತವನ್ನೇ ಅವನಿಗೇ ಯಥಾವತ್ತಾಗಿ ಹೇಳು ಬೇಕಿದೆ. ಮೂಲಭಾರತದ ಗಾತ್ರ ನೋಡಿದರೆ ಒಂದು ಲಕ್ಷದ ಇಪ್ಪತ್ತೈದು ಸಾವಿರ ಶ್ಲೋಖಗಳು ಬಹಳ ದೊಡ್ಡ ಗ್ರಂಥ ಭವಿಷ್ಯ ಜಗತ್ತಿನಲ್ಲಿ ಅತ್ಯಂತ ದೊಡ್ಡ ಗ್ರಂಥ ಮಹಾಭಾರತ ಕುಮಾರವ್ಯಾಸನಲ್ಲಿ ಎಂಟು ಸಾವಿರ ಷಟ್ಪಪದಿಗಳಿಗೆ ಕಡಿಮೆಯಾಗಿರುತ್ತದೆ. ಪಂಪನದು ಸಮಸ್ತ ಭಾರತ ಸಮಸ್ತ ಎಂದರೆ ವಿಚಿತ್ರ ಶಬ್ಧ ಸಂಸ್ಕೃತದಲ್ಲಿ ಸಮಸ್ತ ಎಂದರೆ ಎಲ್ಲಾ ಬರಬೇಕಾದರೆ ಆದರೆ ಸಂಕ್ಷಿಪ್ತವೂ ಆಗಬೇಕು ಆದಕ್ಕೆ ಸಮಸ್ತ ಅಂತ ಹೆಸರು. ಅಂತಲೇ ಪಂಪ ಸಮಸ್ತ ಭಾರತವನ್ನು ಬರೆದ. ಕುಮಾರವ್ಯಾಸನದು ಸಮಸ್ತೆ ಭಾರತವೇ ಆದರೆ ಒಂದು ಅಂತರ ಇಬ್ಬರಲ್ಲಿ ಇದೆ. ಅದೇನು ಅಂದರೆ ಕುಮಾರವ್ಯಾಸ ಮೂಲ ಭಾರತವನ್ನು ಸಂಕ್ಷಿಪ್ತಗೊಳಿಸಿದ್ದಾನೆ. ಅವನ ಸಂಕ್ಷಿಪ್ತ ಹೇಗೆ ತಂದರೆ ಗೀತೆ ಏಳು ನೂರು ಪದ್ಯಗಳನ್ನು ಕೇವಲ 42 ಪದ್ಯಗಳಲ್ಲಿ ಹೇಳಿಬಿಡುತ್ತಾನೆ."[13] ಎನ್ನುವ ಮಾತುಗಳು ಕನ್ನಡ ಕವಿಗಳ ಕಾವ್ಯ ಕಲ್ಪನೆಗಳನ್ನು ಸೂಚಿಸುತ್ತವೆ.

ಕುಮಾರವ್ಯಾಸನ ನಂತರ ಅವನ ಪರಂಪರೆಯನ್ನು ಮುಂದುವರೆಸಿದವರು ತಿಮ್ಮಣ್ಣಕವಿ. ಶ್ರೀಕೃಷ್ಣ ದೇವರಾಯನ ಆಸ್ಥಾನದಲ್ಲಿದ್ದು ಆತನ ಆದೇಶದಂತೆ ಉತ್ತರಾರ್ಧ ಭಾರತವನ್ನು ಪೂರೈಸಿ ಕರ್ನಾಟಕ ಕೃಷ್ಣರಾಯ ಭಾರತ ಕಥಾಮಂಜರಿಯನ್ನು ಬರೆದು ರಾಜಋಣವನ್ನು ತೀರಿಸಿದ್ದಾನೆ. ಈತನದು ರಾಜನಿಷ್ಠ ವ್ಯಕ್ತಿತ್ವ, ಆದರೆ ಇದಕ್ಕೆ ವಿರುದ್ಧವಾದುದು ಕುಮಾರವ್ಯಾಸನ ವ್ಯಕ್ತಿತ್ವ. ಆದರೂ ಅವನ ಪರಂಪರೆಯನ್ನು ಮುಂದುವರೆಸಿದವನು ಈ ತಿಮ್ಮಣ್ಣ ಕವಿ. ಕುಮಾರವ್ಯಾಸ ಬರೆಯದೇ ಬಿಟ್ಟ ಭಾರತ ಕಥೆಯನ್ನು ಬರೆದು ಮುಗಿಸಿದನು.

ಕವಿಯೇ ತನ್ನ ಕೃತಿಯಲ್ಲಿ 'ಮೊದಲಾ ಕುಮಾರವ್ಯಾಸ ದಶಪರ್ವತಗಳಿ ಹೇಳಿದ ಭಾಸುರವಿದೆಂದೆನಿಸಿ ಭಾರತದುಳಿದ ಪರ್ವತಗಳ ನೀ ಸಕಲ ಜಗಮೆಚ್ಚುವಂತೆ ವಿಲಾಸದಲಿ ಪೇಳೆಂದೆನಲು' ಉಪದೇಶಿಸಿದನು. ರಾಜಾಜ್ಞೆಗೆ ಮಣಿದು ಕೃತಿ ಬರೆದುದಾಗಿ ಕವಿ ಹೇಳಿಕೊಂಡಿದ್ದಾನೆ. ಅಂದರೆ ಕುಮಾರವ್ಯಾಸ ಬರೆಯದೇ ಬಿಟ್ಟ ಕಥೆಯನ್ನು ಮುಂದುವರೆಸಿದ್ದಾನೆ. ಇದು ಸ್ವತಂತ್ರ ರಚನೆಯಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಒಟ್ಟಾರೆ ಭಾರತ ಕಥೆಯನ್ನು ಮುಗಿಸುವುದು ಅವನ ಗುರಿ. ಹಾಗಾಗಿ ಇವನ ಕೃತಿಯನ್ನು ಭಾಷಾಂತರದ ಮಾದರಿಗಳಲ್ಲಿ ಅನುಸರಣೆ ಎಂದು ಗುರುತಿಸಬಹುದು.

ಪ್ರತಿ ಪರ್ವಾಂತ್ಯದಲ್ಲಿ ಕೃಷ್ಣರಾಯ ಭಾರತ ಕಥಾಮಂಜರಿ ಕುಮಾರವ್ಯಾಸನದು ಕರ್ನಾಟಕ ಭಾರತವಾದರೆ ಇವನದು ಕೃಷ್ಣರಾಯ ಭಾರತ ಕಥಾಮಂಜರಿ. ಇವನು ಗದುಗಿನ ವೀರನಾರಾಯಣನ ಭಕ್ತನಲ್ಲ. ತಿರುಪತಿ ವೆಂಕಟೇಶನ ಭಕ್ತನು. ಪ್ರತಿ ಸಂಧಿಯ ಕೊನೆಯಲ್ಲಿಯೂ ವೆಂಕಟೇಶನನ್ನು ಧ್ಯಾನಿಸುತ್ತಾನೆ. 'ಇತಿ ಶ್ರೀಮದಚಿಂತ್ಯ ಮಹಿಮೆ ವೆಂಕಟಪತಿ ಚರಣಾರವಿಂದ.' ಎಂದು ಆರಂಭವಾಗುವ ಗದ್ಯ ಇದೆ. ಒಟ್ಟಾರೆ ಕನ್ನಡಕ್ಕೆ ಪೂರ್ಣ ಭಾರತವನ್ನು ಕವಿ ಒದಗಿಸಿದ್ದಾನೆ. ಕೃಷ್ಣಭಕ್ತಿಯನ್ನು ಎಲ್ಲಿಯೂ ಮರೆತಿಲ್ಲ. ಭಗವತ್ ದೃಷ್ಟಿಕೋನ ಇಲ್ಲದಿಲ್ಲ. ಹಾಗಾಗಿ ಭಾಗವತ್ ಸಂಪ್ರದಾಯದ ದೃಷ್ಟಿಕೋನ ಎದ್ದುಕಾಣುತ್ತದೆ.

"ಕವಿ ಸಂಪ್ರದಾಯದ ಸೋತ್ರಗಳನ್ನು ಎಂದರೆ, ತನಗೆ ತನ್ನ ಆರಾಧ್ಯದೈವ ಕಾವ್ಯಶಕ್ತಿ ಕೊಡಲಿ ಮುಂತಾಗಿ ಕೇಳಿದೆ ವೆಂಕಟೇಶ ನರಸಾತ್ಮಜ ಕೃಷ್ಣರಾಯನನ್ನು ಪಾಲಿಸಲಿ, ವಿರೂಪಾಕ್ಷ ನರಮಹೀಶನಂದನ ರಕ್ಷಿಸಲಿ ವಿರಂಚಿ ಕುಮಾರಕ ಕೃಷ್ಣರಾಯನಿಗೆ ದೀರ್ಘಾಯುವನು ಕರುಣದಲಿ ಈಯಲಿ ಆ ಸಿರಿ ಕೃಷ್ಣರಾಯನಿಗೆ ಮನೆಯೊಳೊಲಿದಿರಲಿ ಎಂದು ಹೇಳಿ ಕಡೆಗೆ ಗಣಪ ನಿರ್ವಿಘ್ನತೆಯ ನೀಗೆಮಗೆ ಎಂದು ಕೇಳಿಕೊಂಡು ವಾಣೀನಿತಂಬನಿ ಮಾನಸದೊಳಾನಿರಿಸಿ ತನ್ನಯ ಕಾವ್ಯರಚನೆಗೆ ವರದೆಯಾಗೆಂದಧಿಕ ಭಕ್ತಿಯೊಳೆರಗಿ ನುತಿಸುವೆನು ಎಂದು ಸರಸ್ವತಿಯನ್ನು ಮಾತ್ರ ಪ್ರಾರ್ಥಿಸಿದ್ದಾನೆ. ತನ್ನ ಮತವನ್ನಾಗಲಿ ಗುರುವನ್ನಾಗಲಿ ಧ್ಯಾನಿಸಿಲ್ಲ, ನೇರವಾಗಿ ಕಥೆಯನ್ನು ಆರಂಭಿಸಿದ್ದಾನೆ. ಅದು ಸ್ತ್ರೀ ಪರ್ವದ ಕಥೆಯಾಗಲಿ, ಶಾಂತಿಪರ್ವದ ಕಥೆಯಾಗಲಿ, ಕವಿಯ ಉದ್ದೇಶ ಕುಮಾರವ್ಯಾಸ ಬಿಟ್ಟ ಕಥೆಯನ್ನು ಮುಂದುವರಿಸುವುದೇ ಹೊರತು ಸ್ವತಂತ್ರ ಕಾವ್ಯವನ್ನು ರಚಿಸುವುದಲ್ಲ."[14]

ತಿಮ್ಮಣ್ಣನ ಕೃಷ್ಣರಾಯ ಭಾರತ ಕುಮಾರವ್ಯಾಸ ಭಾರತಕ್ಕೆ ಪೂರಕವಾದುದು ಅಥವಾ ಮುಂದುವರೆದ ರೂಪ. ಎರಡೂ ಸೇರಿ ವ್ಯಾಸಭಾರತ ಕಥೆಯನ್ನು ಪೂರ್ಣ ಪ್ರಮಾಣದಲ್ಲಿ ಕನ್ನಡಕ್ಕೆ ಪುನರ್ಲೇಖಿಸಿದ್ದಾನೆ.

ಭಾಗವತ ಸಂಪ್ರದಾಯದ ಮತ್ತೊಬ್ಬ ಕವಿ ತಿಮ್ಮಪ್ಪದಾಸರು. ಅವರ ಶ್ರೀಕೃಷ್ಣ ಬಾಲಲೀಲೆ ಭಾಗವತ ಸಂಪ್ರದಾಯ ಪ್ರಮುಖ ಕಾವ್ಯ. ಈ ಕಾವ್ಯ ವೇದವ್ಯಾಸರು ರಚಿಸಿದ್ದೆಂದು ಪ್ರಸಿದ್ಧವಾದ ಶ್ರೀಮದ್ಭಾಗವತ ಮಹಾಪುರಾಣದ ದಶಮ ಸ್ಕಂಧದ ಕನ್ನಡಾನುವಾದವಾಗಿದೆ. ಕನ್ನಡ ಭಾಗವತ ಹರಿದಾಸ ಕೀರ್ತನೆಗಳಲ್ಲಿ ಹೆಣೆದುಕೊಂಡಿರುವ ಬಾಲಕೃಷ್ಣನ ಲೀಲಾ ಸನ್ನಿವೇಶಗಳು 'ಕೃತಿ ತನ್ನ ತಾನೆ ತಾ ಬಂದು ಬಹುಜಿತವಾಯಿತು ಜಗದಲ್ಲಿ ನಿಂತು' ಈ ಕೃತಿ ತಾವು ರಚಿಸಲಿಲ್ಲ. ಕಲಿಸಿದ ಕವಿಕಲೆಗಳನು ಕೃತಿಗೊಳಿಸಿದೆ ಕಮಲಾಕ್ಷ ನೀನು ವೀಣೆಯು ಸ್ವರ ವಿವರವನು ಪೇಳೆ ವೀಣೆಗೆ ಚೈತನ್ಯವೇನು? ವೀಣೆಗೆ ವೊಡಲು ಮಾನವನು ಹಾಗೆ ನಾನು ನೀ ನುಡಿಸೆ ನುಡಿವೆನು. ಹಾಗೆ ನುಡಿಯುವವನು ಬಾಲಲೀಲೆಗಳನ್ನು ಮೆರೆದ ಶ್ರೀ ಕೃಷ್ಣನೇ 'ಲೀಲೆಯಿಂದಾಡಿದ ಲಲಿತ ಚರಿತವನು ಕೀಲಿಸಿ ಕೊಡುತಿಹೆ ಕಾಣಲೆಂದಿದನು. 'ವೀರನಾರಾಯಣನೆ ಕವಿ ಲಿಪಿಕಾರ ಕುವರವ್ಯಾಸ' ಎಂಬ ಕುಮಾರವ್ಯಾಸನ ನಿಲುವೆ ಈ ಕೃತಿಯಲ್ಲಿ ಕಂಡು ಬರುತ್ತದೆ.

"ತಮ್ಮದು ಕವಿತೆ, ತಾವು ಕವಿ ಎಂಬ ಅರಿವಿದ್ದರೂ ಬಾಲಲೀಲೆ ಲಕ್ಷಣಬದ್ಧವಾದ ಕಾವ್ಯಕೃತಿಯಾಗಿರದೇ ಕೀರ್ತನೆಗಳ ರೂಪದಲ್ಲಿ ಅದನ್ನು ರಚಿಸಿರುವುದರಿಂದ ಆ ಪ್ರಕಾರದಲ್ಲಿ ತಾವು ವಹಿಸಿರುವ ಸ್ವಾತಂತ್ರ್ಯವನ್ನು ಅದರ ವೈಲಕ್ಷಣಗಳನ್ನು ಕವಿ ತಿಮ್ಮಪ್ಪದಾಸರು ತಿಳಿಸಿರುತ್ತಾರೆ.

ಕನ್ನಡದ ಭಾಷೆಯಲಿ ಕುರುಹಿಟ್ಟ ವರ್ಣಗಳ
ಸನ್ನುತನ ಸತ್ಕಥೆಯು ಸಾಗಿಬಂದಿಹುದು
ಮುನ್ನ ಭಕ್ತರು ಮಾಡ್ದ ಮುಖ್ಯ ಪಲ್ಲಟವ ಪದದ
ಸನ್ನೆಯೊಂದೇ ಸಿದ್ಧಿಸಿದನದಿ ನಡೆಸಿದನು. 5-14

ಪ್ರತಿ ಕೀರ್ತನೆಗೂ ತಮಗಿಂತ ಹಿಂದಿನವರಾದ ಪುರಂದರದಾಸರು ಮುಂತಾದ ಭಕ್ತ ಕವಿಗಳ ವರ್ಣಗಳ ಧಾಟಿಯನ್ನು ಕುರುಹಾಗಿ ಇಟ್ಟುಕೊಂಡು ಆ ವರ್ಣದ ಪಲ್ಲವಿಯ ಪ್ರಥಮ ಪಾದವನ್ನು ಕೀರ್ತನಾರಂಭದಲ್ಲಿ ಕವಿ ಕಾಣಿಸಿರುವನು. ಕೆಲವೊಮ್ಮೆ ತಮ್ಮ ರಚನೆಯನ್ನೇ ಮಾದರಿಯಾಗಿ ಕೊಟ್ಟಿರುವನು. ಹಿಂದಿನವರ ಕೀರ್ತನೆಗಳಲ್ಲಿ ಸಾಧಾರಣವಾಗಿ ಪಲ್ಲವಿ, ಅನುಪಲ್ಲವಿ ಇರುತ್ತವೆ. ಬಾಲಲೀಲೆಯ ರಚನೆಗಳಲ್ಲಿ ಅನುಪಲ್ಲವಿ ಇಲ್ಲವೇಇಲ್ಲ. ಪಲ್ಲವಿಯು ಎರಡು ಅಥವಾ ನಾಲ್ಕು ಪಾದಗಳಲ್ಲಿದೆ"[15]

ಒಟ್ಟಾರೆ ಭಾಗವತ ಸಂಪ್ರದಾಯದಲ್ಲಿ ಶ್ರೀಕೃಷ್ಣ ಬಾಲಲೀಲೆ ಕೃತಿಯು ತಿಮ್ಮಪ್ಪದಾಸರ ಕೃಷ್ಣ ಚರಿತೆಯನ್ನು ಹೇಳುವ ಪುನರ್ಲೇಖ ಕೃತಿಯಾಗಿದೆ.

ಕ್ರಿ.ಶ. ಸುಮಾರು 1550 ರ ನಂತರ ಬಹುಮುಖ್ಯ ಕವಿಗಳಲ್ಲಿ ಲಕ್ಷ್ಮೀಶ ಪ್ರಮುಖನು. ಈತನ ಜೈಮಿನಿಭಾರತ ಕನ್ನಡ ಭಾರತಗಳ ಪೈಕಿ ವಿಶಿಷ್ಟ ಮಹತ್ವವನ್ನು ಪಡೆದುಕೊಳ್ಳುತ್ತದೆ. ಇವನ ಈ ಕೃತಿ ವಾರ್ಧಕ ಷಟ್ಪದಿಯ ವಿಶಿಷ್ಟ ಪ್ರಯೋಗವಾಗಿದ್ದು ಸಂಸ್ಕೃತ ಕವಿ ಜೈಮುನಿ ಬರೆದ ಭಾರತದ ಭಾಷಾಂತರವಾಗಿದೆ. ಈ ಕಾವ್ಯದಲ್ಲಿ ಪಾಂಡವರ ಕಥೆ ಆನುಷಂಗಿಕವಾಗಿದ್ದು ಕೃಷ್ಣ ಚರಿತೆಯ ಪ್ರಕಾಶಕ್ಕೆ ಹೆಚ್ಚು ಮಹತ್ವ ನೀಡಿ, ವೃತ್ತಿಯನ್ನು ಕೃಷ್ಣಭಕ್ತಿ ಕಥಾಗುಚ್ಚವನ್ನಾಗಿಸಿದ್ದಾನೆ. ಕೃಷ್ಣ ಭಕ್ತನಾದ ವೃಷಕೇತು, ಯೌವ್ವನಾಶ್ವ, ಮರುತ್ತರಾಯ, ಅನುಸಾಲ್ವ, ನೀಲಧ್ವಜ, ಹಂಸಧ್ವಜ, ಸುಧನ್ವ, ಬಭ್ರುವಾಹನ, ತಾಮ್ರಧ್ವಜ, ಮಯೂರಧ್ವಜ, ಚಂದ್ರಹಾಸ ಮೊದಲಾದವರ ಕಥೆಗಳು ಚಿತ್ರಿತವಾಗಿವೆ. ಲಕ್ಷ್ಮೀಶ ಶ್ರೇಷ್ಠಮಟ್ಟದ ಕಥೆಗಾರನೆಂಬುದು ಇಲ್ಲಿಯ ಕಥೆಗಳಿಂದ ತಿಳಿಯುತ್ತದೆ.

ಕವಿ ತನ್ನ ಕಥೆಯ ಸ್ವರೂಪವನ್ನು . . . 'ಪುಣ್ಯಮಿದು ಕೃಷ್ಣ ಚರಿತಾಮೃತಂ ಸುಕವೀಂದ್ರ ಗಣ್ಯಮಿದು ಶೃಂಗಾರ ಕುಸುಮ ತರುತರುಗಿದಾರಣ್ಯಮಿದು ನವರಸ ಪ್ರೌಢ ಲಾಲಿತ್ಯ ನಾನಾ ವಿಚಿತ್ರಾರ್ಥಂಗಳ ಗಣ್ಯಮಿದು, ಶಾರದೆಯ ಸಮ್ಮೋಹನಾಂಗ ಲಾವಣ್ಯಮಿದು, ಭಾವಕರ ಕಿವಿದೊಡವಿಗೊರಗಿದ ಹಿರಣ್ಯಮಿದು ಭೂತಳದೊಳು ವಿರಾಜಿಪುದು ಲಕ್ಷ್ಮೀಪತಿಯ ಕಾವ್ಯರಚನೆ.' ಎಂದು ಪೀಠಿಕಾ ಸಂಧಿಯಲ್ಲಿ ಹೇಳಿಕೊಂಡಿದ್ದಾನೆ.

ಉಪಮೆ ರೂಪಕಗಳ ಬಳಕೆಯಲ್ಲಿ ಮನೋಹರತೆ ಕಂಡುಬರುತ್ತದೆ. ಉಪಮೆಗಳು ಮೂಲಕ್ಕಿಂತಲೂ ಜೀವಂತವಾಗಿವೆ. ರಸಾದ್ರವಾಗಿವೆ. ಭಕ್ತಿರಸ ಪ್ರತಿಪಾದನೆಯಲ್ಲಿ ಕವಿಸಿದ್ಧ ಹಸ್ತ. ವಿಷ್ಣುಭಕ್ತಿಯನ್ನು ಪ್ರತಿಪಾದನೆ ಮಾಡುವಲ್ಲಿ ಅನ್ಯದೈವಗಳಲ್ಲಿ ಸಹನೆ ತೋರಿದ್ದಾನೆ. ಕವಿಯ ಹರಿಹರ ಬೇಧ ದೃಷ್ಟಿಗೆ ಕಾವ್ಯದಲ್ಲಿ ನಿದರ್ಶಗಳು ದೊರೆಯುತ್ತವೆ. ವಿಸ್ತಾರವಾದ ಮೂಲ ಸಂಸ್ಕೃತ ಕಾವ್ಯವನ್ನು ಸಂಗ್ರಹಿಸುವಲ್ಲಿ ತನ್ನ ಸೋಪಜ್ಞತೆಯನ್ನು ಮೆರೆದಿದ್ದಾನೆ. ಇಲ್ಲಿ ಬರುವ ಸ್ತ್ರೀ ಪಾತ್ರಗಳ ಚಿತ್ರಣ ರಮಣೀಯವಾದುದು.

ಸತ್ಯಭಾಮೆ, ಜ್ವಾಲೆ, ಪ್ರಭಾವತಿ, ಪ್ರಮೀಳೆ, ಚಿತ್ರಾಂಗದೆ, ವಿಷಯೆ, ಸೀತಾದೇವಿ, ಚಂಡಿ ಈ ಒಂದೊಂದು ಪಾತ್ರಗಳು ಒಂದೊಂದು ಬಗೆಯಾಗಿದ್ದು ಓದುಗರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರುತ್ತವೆ. ಉಪಮೇಗಳು ಜೀವಂತವಾಗಿದ್ದು, ನಿದರ್ಶನವಾಗಿ ಕಟುಕರ ಕೈಯಲ್ಲಿ ಸಿಕ್ಕ ಚಂದ್ರಹಾಸನ ಪರಿಸ್ಥಿತಿಯನ್ನು ಕವಿ 'ಕಾಕಸಂಘಾತದೊಳ್ ಸಿಕ್ಕಿರ್ದ ಕೋಗಿಲೆಯ ಮರಿಯಂತೆ' ಎಂದು, ದು:ಖಿಸುವ ಧರ್ಮರಾಯನ ಸ್ಥಿತಿಯನ್ನು 'ಅನಿಲ ಸಂಚಾರದೊಂದಿನಿತಿಲ್ಲದುರಿವ ಕಡುವೇಸಗೆಯ ಬಿಸಿಲಿಂದೆ ಬಸವಳಿದ ಕೋಮಲ ರಸಾಲದಂತೆ' ಎಂದೂ, ಉದ್ದಾಲಕ ಚಂಡಿಯರ ವಿರಸ ದಾಂಪತ್ಯವನ್ನು ಮುಳ್ಳಿಡಿದ ಮರನೇರಿದಂತೆ ಎಂದೂ

ಲಕ್ಷ್ಮಣನ ಮಾತು ಸೀತಾದೇವಿಯ ಕಿವಿಗೆ ಬಿದ್ದಾಗ ಗರ್ಭಿಣಿಯಾದ ಸೀತೆ ನೆಲಕ್ಕೆ ಬಿದ್ದಳೆಂಬುದನ್ನು 'ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದಿಳೆಗೊರಗುವಂತೆ' ಎಂದು ಹೇಳುವ ಕಲ್ಪನೆಗಳು ಅವನು ಉಪಮಾಲೋಲ ಎಂಬುದಕ್ಕೆ ಸಾಕ್ಷಿಯಾಗಿದೆ. ಬಿಡಿಬಿಡಿಯಾಗಿ ಹೇಳುವ ಕಥೆಯ ಮೂಲ ಉದ್ದೇಶ ಶ್ರೀ ಕೃಷ್ಣ ದರ್ಶನ. ಎಲ್ಲಾ ಪಾತ್ರಗಳು ಶ್ರೀಕೃಷ್ಣನ ದರ್ಶನಕ್ಕೆ ಹಾತೊರೆಯುತ್ತವೆ. ಹಾಗಾಗಿ ಇದನ್ನು ಬಾಗವತ್ ಸಂಪ್ರದಾಯದ ಮಹಾಭಾರತ ಎಂದು ಕರೆಯಬಹುದಾಗಿದೆ.

'ಜಗದೋಳುತ್ತ ಹಾನಿಯಂ ಕಂಡು ಸ್ಮರಿಸುವಂತೆ'

'ಜಗದೊಳುಪಕಾರಿಯಾದವಂ ತನ್ನ ನೋವಂ ನೋಳ್ಪನೆ'

'ಪರಮಯೋಗಿಗೆ ಭವದ ಬಂಧನಮ್ ಬಂದಪುದೆ.

'ಘೋರ ಸಂಸಾರದೊಳ್ ಮಾರುತಿಯು ನಿವಾರಿಸಿ ಮಹಾಯೋಗಿ ಜೀವಪರಮಾತ್ಮರ ವಿಚಾರಿಸುವ ತೆರದಿಂ'. . . . " ಈ ವಾಕ್ಯಗಳು ಮಾಣಿಕ್ಯ ಸದೃಶ್ಯ ಸುಧಾಸುಕ್ತಿಗಳು. ಲಕ್ಷ್ಮೀಶ ಕವಿಯ ಭೂತ ಕಾರುಣ್ಯ ತತ್ವಜ್ಞಾನ, ವಿಶ್ವಬಾಂಧವ್ಯ, ವಾಗ್ವಿಲಾಸ, ದೈವಭಕ್ತಿ, ಕರುಣಾಂಶಹೃದಯ ಇವುಗಳು ಫಲವಾದವು ಎಂದು ತಾವು ಮನಗಾಣಬಹುದು. ಹೀಗೆ ಕವಿ ಲಕ್ಷ್ಮೀಶನು ಆಧ್ಯಾತ್ಮ ದೃಷ್ಟಿಯಿಟ್ಟು ವಿನಯದಿಂದ ಕನ್ನಡ ಜೈಮಿನಿ ಭಾರತ ಓದುವವರಿಗೆ "ಹರಿಚರಣಾರ್ಚನೆಯ ಸಕೃತಂಗಳಾದುವು ಎಂದು ಹೇಳುತ್ತಾನೆ. ಹೀಗೆ ಕಾವ್ಯವು ಆಧ್ಯಾತ್ಮದ ಹಿನ್ನೆಲೆಯಲ್ಲಿ ರಚನೆಯಾಗಿರುವುದರಿಂದ ಈ ಗ್ರಂಥವನ್ನು ಮನಸ್ಸಿಟ್ಟು ಓದುವ ಮೂಲಕ ಮನಸ್ಸಿನ ಮೇಲೆ ಗಂಗಾ ಕಾವೇರಿ, ನೇತ್ರಾವತಿ ಪವಿತ್ರಸ್ನಾನದಿಂದ ಉಂಟಾಗುವ ಚಿತ್ತಪರಿಶುದ್ಧತೆಯ ಅನುಭವವಾಗುತ್ತದೆ"[16]

ಪರಮದೇವ ಕವಿ ರಚಿತ ತುರಂಗಭಾರತ ವ್ಯಾಸ ಕುಮಾರವ್ಯಾಸರ ಕೃತಿಯನ್ನೇ ಅನುಸರಿಸಿ ಬರೆದಿರುವನಾದರೂ ವ್ಯಾಸ ಕುಮಾರವ್ಯಾಸರು ಚಿತ್ರಿಸಿರುವ ಪಾತ್ರಗಳ ಅಂತರಂಗದ ತುಮುಲಗಳನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸಲು ಪರಮಧೇವ ಸೋತಿದ್ದಾನೆ ಎನಿಸುತ್ತದೆ. ಈತ ರಚಿಸಿರುವ ಎರಡು ಸಂಪುಟಗಳನ್ನು ಭಾಷಾಂತರದ ನೆಲೆಯಲ್ಲಿ ಅಧ್ಯಯನ ಮಾಡಿದಾಗ ಕೆಲವು ಬದಲಾವಣೆಗಳು ಕಂಡುಬರುತ್ತವೆ.

"ತುರಂಗಭಾರತದಲ್ಲಿ ದುರ್ಯೋಧನ ಅತಿ ದಾರುಣತೆಯಿಂದ ರಾಜಸೂಯಯಾಗದ ಸಂದರ್ಭದಲ್ಲಿ ನಡೆದ ಪ್ರಸಂಗವನ್ನು ಶಕುನಿಗೆ ಹೇಳುತ್ತಾನೆ. ಈ ಮಾತನ್ನು ಕೇಳುತ್ತಿದ್ದಂತೆ ಶಕುನಿ ತನ್ನ ಮನಸ್ಸಿನಲ್ಲಿ, ಕೌರವನ ಕಾಲವಂ ಕಾಣಿಸಲ್ಕಿದು ಸಮಯವೆಂದಂತರಂಗದೊಳ್ ತಿಳಿದು, ಪಾಂಡವರನ್ನು ಗೆಲ್ಲುವ ಉಪಾಯ ತನಗೆ ತಿಳಿದಿದೆಯೆಂದೂ, ಜೂಜಿನಲ್ಲಿ ಅವರನ್ನು ಸೋಲಿಸಿ,

ಅವರ ರಾಜ್ಯವನ್ನು ದುರ್ಯೋಧನನ ವಶ ಮಾಡುವುದಾಗಿ ಪಾಂಡವರನ್ನು ವನಕ್ಕೆ ಕಳಿಸುವುದಾಗಿ ಭರವಸೆ ಕೊಡುತ್ತಾನೆ. (ಸಭಾ-ಸಂಧಿ 2-ಪದ್ಯ 8-9) ಶಕುನಿಯ ಸಲಹೆಯಂತೆ ದುರ್ಯೋಧನ ದ್ಯೂತದಾಟಕ್ಕೆ ಒಪ್ಪಿಸಲು, ತಂದೆಯ ಬಳಿ ಬಂದು, ರಾಜಸೂಯಯಾಗದ ಸಂದರ್ಭದಲ್ಲಿ ನಡೆದುದನ್ನೆಲ್ಲಾ ಹೇಳಿ- "ಬೊಪ್ಪ, ನೀವಿನ್ನಾ ಯುಧಿಷ್ಠಿರನ ಸೇರಿ ಬದುಕಿರಿ ಆನೊಡಲ ನೀಗುವೆನು ಗಂಗೆಯಲಿ" "ನಾನಿನ್ನು ಜೀವಿಸಲಾರೆ" "ಸುಡು ಸುಡು ನಾನಿದ್ದೇನು ಫಲ" ಎಂದು ದು:ಖಿಸುತ್ತಾನೆ (ಸಭಾ-ಸಂಧಿ 7-ಪದ್ಯ21-23) ಅನಿವಾರ್ಯವಾಗಿ, ಪುತ್ರ ಮೋಹಕ್ಕೆ ಸಿಲುಕಿದ ಧೃತರಾಷ್ಟ್ರ ಪಗಡೆಯಾಟಕ್ಕೆ ಒಪ್ಪುತ್ತಾನೆ."[17] ಈ ಪ್ರಸಂಗಗಳನ್ನು ಗಮನಿಸಿದಾಗ ಪರಮದೇವ ಕವಿಯ ರಚನಾ ಕೌಶಲ ಗೋಚರಿಸುತ್ತದೆ. ಕವಿ ಚಿತ್ರಿಸಿರುವ ರಾಜಸುಯಾಗ ಪ್ರಸಂಗ, ಭೋಜನ ಶಾಲೆ ವ್ಯವಸ್ಥೆ ವಿಶಿಷ್ಟವಾದುದು. ಈ ಭೋಜನ ಶಾಲೆಯ ರಕ್ಷಣೆಗೆ ಪುರುಷಾಂಬೃಗ ಎಂಬ ಶಿವಭಕ್ತನನ್ನು ಕೃಷ್ಣನ ಸಲಹೆಯಂತೆ ನಿಯಮಿಸುವುದು ಈ ಪರಿಕಲ್ಪನೆ ಪರಮದೇವ ಕವಿಯ ವಿಶಿಷ್ಟ ಸೃಷ್ಟಿ. ಈ ಪರಿಕಲ್ಪನೆ ವ್ಯಾಸಭಾರತದಲ್ಲಾಗಲಿ ಕುಮಾರವ್ಯಾಸ ಭಾರತದಲ್ಲಾಗಲಿ ಇಲ್ಲ. ಒಟ್ಟಾರೆ ಭಾಗವತ್ ಸಂಪ್ರದಾಯದ ಕವಿಗಳಲ್ಲಿ ಪರಮದೇವ ರಚಿಸಿರುವ ತುರಂಗಭಾರತ ಕನ್ನಡ ಮಹಾಭಾರತಗಳ ಸಾಲಿನಲ್ಲಿ ಒಂದು ವಿಶಿಷ್ಟ ಭಾಷಾಂತರ ಕೃತಿಯಾಗಿ ಅಧ್ಯಯನ ಮಾಡಬಹುದಾಗಿದೆ.

ಕುಮಾರವ್ಯಾಸನಲ್ಲಿ ಶಕುನಿ ದುರ್ಯೋಧನ ದುಸ್ಥಿತಿಗೆ ಮರುಕಗೊಂಡು ಸಹಾಯ ಮಾಡುವ ದೃಷ್ಟಿಯಿಂದ ಪಾಂಡವರನ್ನು ಪಗಡೆಯಾಟದಲ್ಲಿ ನಿರ್ಗತಿಕರನ್ನಾಗಿ ಮಾಡುವುದಾಗಿ ಹೇಳುವ ಪ್ರಸಂಗವನ್ನು ಪರಮದೇವ ಕವಿ ಬದಲಾಯಿಸಿದ್ದಾನೆ. ಹೇಗೆ ಎಂದರೆ ಶಕುನಿ ಅಸ್ತಿನಾವತಿ ಅರಮನೆಯಲ್ಲಿ ಸಮಯ ದೊರೆತಾಗ ದುರ್ಯೋಧನನ್ನು ನಾಶ ಮಾಡುವ ಉದ್ದೇಶದಿಂದ ನೆಲಸಿದ ಎಂಬುದಾಗಿ ನಿರೂಪಿಸಿದ್ದಾನೆ. ಸಭಾ ಪರ್ವದಲ್ಲಿ ಈ ಉದ್ದೇಶವು ಸಫಲವಾಗುವ ಸಂದರ್ಭವನ್ನು ಕವಿ ಹೇಳುತ್ತಾನೆ. ಹೀಗೆ ಆದ್ಯಂತವಾಗಿ ಬದಲಾವಣೆಯನ್ನು ತಂದಿದ್ದಾನೆ. ತುರಂಗಭಾರತದ ಸಭಾಪರ್ವದ ಹಿರಿಮೆ ಎಂದರೆ ದ್ಯೂತರ ಪ್ರಸಂಗದಲ್ಲಿ ದೃತರಾಷ್ಟ್ರನ ಅಂತರಂಗ ಅನಿಸಿಕೆಯನ್ನು ಹೆಚ್ಚು ಸ್ಪಷ್ಟಗೊಳಿಸಬಹುದು. ಪರಮದೇವ ಕುಮಾರವ್ಯಾಸನನ್ನು ಅನುಸರಿಸಿ ಕೃಷ್ಣಪಾರಮ್ಯವನ್ನು ಹೆಚ್ಚು ನಿರೂಪಿಸಿದ್ದಾನೆ. ವಾರ್ಧಕ ಷಟ್ಪದಿಯಲ್ಲಿ ರಚಿತವಾದ ಈ ಕೃತಿ ಕನ್ನಡ ಭಾಗವತ ಮಹಾಕಾವ್ಯದ ಒಂದು ಗಮನಾರ್ಹ ಪುನರ್ಲೇಖವಾಗಿದೆ.

ಸರಿ ಸುಮಾರು ಇದೇ ಕಾಲದವನೆಂದು ಹೇಳಲಾಗುವ ನಾಗರಸನೆಂಬುವವನು ಹರಿಭಕ್ತಿ ಪರಂಪರೆಯನ್ನು ಮುಂದುವರೆಸಿ 'ಕರ್ನಾಟಕ ಭಗವದ್ಗೀತೆ' ಎಂಬ ಗ್ರಂಥವನ್ನು ರಚಿಸಿದ್ದು, ಇದು

ಪ್ರಧಾನ ಕೃತಿಯಲ್ಲದಿದ್ದರೂ ಭಾಗವತ ಸಂಪ್ರದಾಯದ ಹಿನ್ನೆಲೆಯಲ್ಲಿ ರಚಿತವಾದುದಾಗಿದೆ. ಮಹಾಭಾರತದಲ್ಲಿ ಬರುವ ಒಂದು ಮುಖ್ಯ ಭಾಗವಾದ ಭಗವದ್ಗೀತೆಯನ್ನು ಸಂಸ್ಕೃತದಿಂದ ಕನ್ನಡಕ್ಕೆ ಭಾಷಾಂತರವಾಗಿರುವುದನ್ನು ಕಾಣಬಹುದು. ಪ್ರಸ್ತುತ ಕೃತಿಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿ ವಾಸುದೇವಾಮೃತವ ವಿಶ್ವಾಸದಿಂದ ನೆರೆ ತಿಳಿದು ಸುಖಿಸುವುದು ಆಸೆಯಲ್ಲವ ಬಿಟ್ಟು ಮುನಿಗಳು ಹರಿಪಾರಾಯಣರು ಎಂಬುದು ಇವನ ಭಾಗವತ ತನಕ್ಕೆ ಸಾಕ್ಷಿ. ಭಗವದ್ಗೀತೆ ಎಂದರೆ ಅವನಿಗೆ ವಾಸುದೇವ ಕಥಾಮೃತ. ಕುಮಾರವ್ಯಾಸರಿಂದ ನಾಗರಸನವರೆಗೆ ಬಹುಶ: ಎಲ್ಲ ಭಾಗವತ ಕವಿಗಳು ಹೀಗೆ ಹೇಳುವುದನ್ನು ಲಕ್ಷಿಸಬೇಕು."[೧೮]

ಗೋಪಕವಿ ಚಿತ್ರಭಾರತವೆಂಬ ಕೃತಿಯನ್ನು ಕ್ರಿ.ಶ. ೧೫೦೦ ರ ಸುಮಾರಿಗೆ ರಚಿಸಿದ್ದಾನೆ. ಲಕ್ಷ್ಮೀಶನಂತೆ ಈತನೂ ಸಹ ತನ್ನಲ್ಲಿ ಮದನಗೋಪಾಲನೆ ನಿಂತು ಕಾವ್ಯ ರಚಿಸಿರುವನೆಂದು ಹೇಳಿಕೊಂಡಿರುವನು. ಚಿತ್ರಭಾರತದಲ್ಲಿ ಭಾರತ ಕಥಾಂಶವಿದ್ದು ರಾಜಸುಯಾಗ, ದ್ಯೂತ, ವನವಾಸ ಕಥೆಯನ್ನೊಳಗೊಂಡಿದೆ. ಮಹಾರಾಷ್ಟ್ರ ಭಾಷೆಯಲ್ಲಿ ಪ್ರಚಾರವಾಗಿರುವ ಈ ಕಥೆಯನ್ನು ಕನ್ನಡದಲ್ಲಿ ಪುನರ್ಲೇಖಿಸಿರುವುದಾಗಿ ಅಥವಾ ಮತ್ತೆ ಬರೆದುದಾಗಿ ಹೇಳಿಕೊಂಡಿದ್ದಾನೆ. ಸಾರಮಿದು ಶ್ರೀ ಹರಿಕಥಾಮೃತಂ ಎಂಬಲ್ಲಿ ಅವನ ಭಾಗವತ ದೃಷ್ಟಿ ಪ್ರಕಟವಾಗಿದೆ. ಕುಮಾರವ್ಯಾಸಾದಿಗಳ ಪರಂಪರೆಗೆ ಅನುಗುಣವಾಗಿ ಚಿತ್ರಕವಿತ್ವದ ಚಮತ್ಕೃತಿ ಶಬ್ದಾರ್ಥಗಳಲ್ಲಿ ಹೆಚ್ಚಾಗಿರುವ ಕಾರಣ ಇದಕ್ಕೆ ಚಿತ್ರಭಾರತವೆಂದು ಕರೆಯಲಾಗಿದೆ. ೩೦ ಸಂಧಿಗಳುಳ್ಳ ಸುಮಾರು ಸಾವಿರ ವಾರ್ಧಕ ಷಟ್ಪದಿಗಳ ಈ ಕೃತಿಯಲ್ಲಿ ಭಕ್ತಿ ಇದೆ. ಚಮತ್ಕೃತಿ ಇದೆ. ಮದ್ಯಮ ಕಾವ್ಯದ ಗುಣವಿದೆ. ಆದರೆ ಇದು ಅವನೇ ಹೇಳಿಕೊಂಡಿರುವಂತೆ ಮಹಾಕೃತಿಯಲ್ಲ."[೧೯]

ಗೋಪಕವಿಯ ಸಮಕಾಲೀನ ಕವಿಯಾದ ಚಾಟುವಿಠಲ ಎಂಬುವವನು ಕ್ರಿ.ಶ. ೧೫೨೦ ರಲ್ಲಿ ಜೀವಿಸಿದ್ದು, ಮಹಾಭಾರತದ ಕೆಲ ಭಾಗಗಳನ್ನು ಬರೆದಿರುವುದಾಗಿ ಸಾಹಿತ್ಯ ಚರಿತ್ರೆಕಾರರು ಊಹಿಸುತ್ತಾರೆ. ಮತ್ತು ಇವನು ಭಾಗವತ ಸಂಪ್ರದಾಯದ ಕವಿ ಎಂದು ಹೇಳುತ್ತಾರೆ. ಆನಂತರದ ಶತಮಾನದಲ್ಲಿ ಅಂದರೆ ಕ್ರಿ.ಶ.೧೭೨೩ ರಲ್ಲಿ ಲಕ್ಷ್ಮಣ ಕವಿ ಎಂಬುವವನು ಭಾರತ ಕಥೆಯನ್ನು ಬರೆದಿರುವುದಾಗಿ ಸಾಹಿತ್ಯ ಚರಿತೆಯಲ್ಲಿ ಉಲ್ಲೇಖವಾಗಿದೆ. ಇವನು ಬರೆದ ಕನ್ನಡ ಭಾರತ ವಾರ್ಧಕ ಷಟ್ಪದಿಯಲ್ಲಿದ್ದು ಸುಮಾರು ೯೯ ಸಂಧಿಗಳು ೪ ಸಾವಿರಕ್ಕೂ ಹೆಚ್ಚು ಪದ್ಯಗಳೂ ಇದ್ದು, ಒಂದು ಬೃಹತ್ ಮಹಾಭಾರತವೆನಿಸಿದೆ. ಕನ್ನಡದಲ್ಲಿ ಈ ಕೃತಿಯನ್ನು ೧೪ನೇ ಮಹಾಭಾರತವೆಂದು ಗುರುತಿಸುತ್ತಾರೆ. ಈ ಕವಿಯ ದೃಷ್ಟಿಯಲ್ಲಿ ಭಾರತ ಕಥೆ ಸಕಲವೇದ ಶಾಸ್ತ್ರ ಪುಣ್ಯ ನದಿಗಳಿಗೆ ಹೋಲಿಸಿದ್ದಾನೆ.[೨೦]

ಕುಮಾರವ್ಯಾಸನ ನಂತರ ಬೃಹತ್ ಕನ್ನಡ ಮಹಾಭಾರತವೆಂದರೆ ಲಕ್ಷ್ಮಣ ಕವಿಯ ಭಾರತ. ಆದರೆ ಪಂಪ ರನ್ನ ಕುಮಾರವ್ಯಾಸರ ಕೃತಿಗಳು ಓದುಗರನ್ನು ತಲುಪಿದಂತೆ ಇನ್ನುಳಿದ

ಮಹಾಭಾರತವನ್ನು ತಲುಪದಿರುವುದು ವಿಷಾಧನೀಯವಾದರೂ ಸಹಜವಾದುದು. ಏಕೆಂದರೆ ಆ ಕವಿಗಳ ಕಾವ್ಯದೃಷ್ಟಿಯು ಸಾಂಪ್ರದಾಯಿಕ ಮನೋಭಾವವುಳ್ಳದ್ದಾಗಿರಬಹುದು. ಲೌಕಿಕ ಕಾವ್ಯಗಳು ಜನರನ್ನು ತಲುಪಿದಂತೆ ಸಾಂಪ್ರದಾಯಿಕ ಅಥವಾ ಧಾರ್ಮಿಕ ಕಾವ್ಯಗಳು ಕುಮಾರವ್ಯಾಸ ಭಾರತದ ಹೊರತಾಗಿ ಜನರನ್ನು ತಲುಪಲಿಲ್ಲವೆಂದು ಈ ಮೇಲಿನ ಕೆಲವು ಅಧ್ಯಯನಗಳಿಂದ ತಿಳಿಯುತ್ತದೆ.

ಕ್ರಿ.ಶ. ೧೫೭೦ ರಲ್ಲಿ ಮಧ್ವಾಚಾರ್ಯರ ಮಹಾಭಾರತ ತಾತ್ಪರ್ಯ ನಿರ್ಣಯಕ್ಕೆ ವಾದಿರಾಜರು ಕನ್ನಡದಲ್ಲಿ ಟೀಕೆ ಬರೆದಿದ್ದಾರೆ. ಇಂತಹ ಬರವಣಿಗೆಯನ್ನು ಪುನರ್ಲೇಖ ಪ್ರಕ್ರಿಯೆಯಾಗಿ ಅಧ್ಯಯನ ಮಾಡಿದಾಗ ಅಲ್ಲಿರುವ ಬದಲಾವಣೆಯನ್ನು ಗುರುತಿಸಬಹುದು. ಸರಿ ಸುಮಾರು ಇದೇ ವೇಳೆಗೆ ಕನಕದಾಸರು ಭಾಮಿನಿ ಷಟ್ಪದಿಯಲ್ಲಿ ಮಹಾಭಾರತದಲ್ಲಿ ಉಕ್ತವಾಗಿರುವ ನಳೋಪಾಖ್ಯಾನವನ್ನು ಬರೆದಿದ್ದು, ಇದರಲ್ಲಿ ೯ ಸಂಧಿಗಳು ೪೮೦ ಪದ್ಯಗಳು ಇವೆ. ಕಾವ್ಯದ ದೃಷ್ಟಿಯಿಂದ ಕನಕದಾಸರು ಇಲ್ಲಿ ಮನಕರಗುವಂತೆ ನಿರೂಪಿಸಿದ್ದಾರೆ. ಕಾವ್ಯ ಚಿಕ್ಕದಾಗಿದ್ದರೂ ಚೊಕ್ಕದಾಗಿದ್ದು, ರಾಜನಾದರೂ ವಿಧಿಯ ಕೈವಾಡಕ್ಕೆ ಸಿಕ್ಕು ಬಗೆಬಗೆಯ ಕೋಟಲೆಗಳನ್ನು ಅನುಭವಿಸಿ ಕಡೆಗೆ ಮಂಗಳದಲ್ಲಿ ಪರ್ಯಾವಸಾನವಾಗುವ ನಳನ ಕಥೆ ಕನಕದಾಸರ ಕೈಯಲ್ಲಿ ಸಿಕ್ಕು ಉಜ್ವಲವಾದ ಕಾಂತಿ ಹೊಂದಿದೆ. ನಳದಮಂತಿಯರ ನಿರಂತರ ಪ್ರೇಮದ ಚಿತ್ರಣ ಕಾವ್ಯದ ಜೀವಾಳವಾಗಿದೆ. ಸುಲಭ ಶೈಲಿ ಘನವಾದ ವಸ್ತು ಹೃದಯಸ್ಪರ್ಶಿಯಾದ ಚಿತ್ರಣಗಳಿಂದ ಈ ಕಾವ್ಯ ಕನ್ನಡಕ್ಕೆ ಅಪೂರ್ವವಾದ ಕೊಡುಗೆಯಾಗಿದೆ."[೨೧] ಇದು ಒಂದು ಖಂಡಕಾವ್ಯವಾದರೂ ಮೂಲ ಮಹಾಭಾರತದ ಪ್ರಸಂಗವನ್ನು ವಿಷಯವಾಗಿಟ್ಟುಕೊಂಡು ಮರುರೂಪಿಸಿರುವ ಕಾರಣದಿಂದ ಕಾವ್ಯಾಭ್ಯಾಸಿಗಳು ಪುನರ್ಲೇಖ ಪ್ರಕ್ರಿಯೆ ಹಿನ್ನೆಲೆಯಲ್ಲಿ ಇದರಲ್ಲಿ ಆಗಿರುವ ಬದಲಾವಣೆಯನ್ನು ಗುರುತಿಸಬಹುದು.

೩.೩ ಜೈನ ಭಾರತ ಪುನರ್ಲೇಖ:

ಕನ್ನಡ ಸಾಹಿತ್ಯಕ್ಕೆ ಜೈನರ ಕೊಡುಗೆ ಅಪಾರ. ಹಾಗೆಯೇ ಹಲವಾರು ಭಾಷಾಂತರದ ಮಾದರಿಗಳೂ ಅವರಿಂದಲೇ ರೂಪಿತವಾದವು. ಜೈನ ರಾಮಾಯಣ, ಜೈನ ಮಹಾಭಾರತಗಳೆಂದು ಮೂಲ ಕೃತಿಗಳನ್ನು ಬದಲಾಯಿಸಿ ರಚಿತಗೊಂಡ ಸಾಹಿತ್ಯ ಅಪಾರವಾಗಿದೆ. ಭಾಷಾಂತರದ ನೆಲೆಯಲ್ಲಿ ಈ ಕೃತಿಗಳನ್ನು ವಿವೇಚಿಸಿದಾಗ ಅವರ ಬದಲಾವಣೆಗಳ ಪ್ರಕ್ರಿಯೆಗಳು ಗೋಚರವಾಗುತ್ತವೆ. ಪ್ರಸ್ತುತ ಅಧ್ಯಯನದಲ್ಲಿ ಜೈನರು ವೈದಿಕ ಧರ್ಮದ ಮಹಾಕಾವ್ಯವಾದ ಮಹಾಭಾರತವನ್ನು ಹೇಗೆ ತಮ್ಮ ಧರ್ಮಕ್ಕೆ ತಕ್ಕಂತೆ ಬದಲಾಯಿಸಿ ಪುನರ್ ರೂಪಿಸುತ್ತಾರೆ ಎಂಬುದನ್ನು ಇಲ್ಲಿ ಮನಗಾಣಬಹುದು. ಭಾಷಾಂತರದ ಮೂಲ ನಿಷ್ಠತೆಗೆ ತದ್ವಿರುದ್ಧವಾದ ಒಂದು ಸಂಪ್ರದಾಯವನ್ನೇ ಜೈನ ಕವಿಗಳು ಕನ್ನಡ ಸಾಹಿತ್ಯದಲ್ಲಿ ತಂದಿದ್ದಾರೆ. ಈ

ದಿಸೆಯಲ್ಲಿ ಸುಮಾರು ೧೧-೧೨ನೇ ಶತಮಾನದಲ್ಲಿ ಜೀವಿಸಿದ್ದ ನೇಮಿಚಂದ್ರನ ನೇಮಿನಾಥ ಪುರಾಣ ಗಮನಾರ್ಹವಾದ ಜೈನ ಮಹಾಭಾರತಗಳ ಸಾಲಿಗೆ ಸೇರುವಂತಹದ್ದು.

ನೇಮಿಚಂದ್ರ, ನೇಮಿನಾಥಪುರಾಣ, ಜೈನ ಧಾರ್ಮಿಕ ಕಾವ್ಯವಾಗಿದ್ದು, ಈ ಪುರಾಣದಲ್ಲಿ ಹರಿವಂಶ ಕುರುವಂಶ ಕಥೆಗಳ ಜೊತೆಗೆ ಕೃಷ್ಣ ಚರಿತೆಯು ಅಂತರ್ಗತವಾಗಿದೆ. ಪ್ರಸ್ತುತ ಅರ್ಧನೇಮಿ ಪುರಾಣವು ಪೂರ್ವ ಭವಾವಳಿ ಹಾಗೂ ಕಂಸವಧೆಯೊಳಗೆ ೮ ಆಶ್ವಾಸಗಳಲ್ಲಿ ಕೃತಿ ಮುಕ್ತಾಯವಾಗುತ್ತದೆ. ರಚನೆ ಅರ್ಧದಲ್ಲಿ ನಿಂತು ಹೋಗಿರುವುದರಿಂದ ಇದಕ್ಕೆ ಅರ್ಧ ನೇಮಿ ಪುರಾಣವೆಂದು ಕರೆಯಲಾಗಿದೆ. ನವರಸಗಳಿಂದ ತುಂಬಿರುವ ನೇಮಿನಾಥ ಪುರಾಣವನ್ನು ಕುರಿತಂತೆ ಕವಿಯೇ ಹೇಳಿರುವ ಹೆಗ್ಗಳಿಕೆ :

ರಸಮೊ ರಸಾಯನಮೋ ಶ್ರುತಿ
ವಸಂತಮೋಕವಿಗಳಮೃತವೋ ನೇಮಿಯವಾಕ್
ಪ್ರಸರ ಮದರಿಸಕದಿಂನಿ
ಪ್ಪುಸತಾದುದು ಜಗಕೆ ನೇಮಿನಾಥ ಪ್ಮರಾಣಂ (ನೇ.ಪು.೧-೨೮)

ಕವಿಯ ಈ ಪ್ರಶಂಸೆ ಈ ಕಾವ್ಯದಲ್ಲಿ ದಿಟವೆಂದು ತೋರುತ್ತದೆ. .ಜೈನ ಪುರಾಣಗಳಿಗೆ ಅನಿವಾರ್ಯವಾದ ಭವಾವಳಿಯ ಕಥೆಗಳು ಸುಂದರವಾಗಿವೆ. ಭಾಷಾಂತರದ ಹಿನ್ನಲೆಯಲ್ಲಿ ಹಾಗೂ ಭಾಷಾಂತರದ ಬೇರೆ ಬೇರೆ ಮಾದರಿಗಳಲ್ಲಿ ಈ ಭವವಳಿಯ ಕಥೆಗಳನ್ನು ನೋಡಿದರೆ ಕವಿ ಮಾಡಿಕೊಂಡಿರುವ ಬದಲಾವಣೆಗಳು ಗೋಚರವಾಗುತ್ತದೆ. ನಿದರ್ಶನಕ್ಕೆ ವಾಮನ ಅವತಾರ ವಟುವಾಗಿ ಬಲಿಯಲ್ಲಿಗೆ ಬಂದ ವಾಮನ ಮೂರು ಅಡಿ ನೆಲವನ್ನು ಕೇಳಲಾಗಿ "ಕಿರಿದಂ ಬೇಡಿದರೆ ಕೊಟ್ಟೆನ್ ಅಳೆದುಕೊಳ್ಳೆಮ್ಮೆನೇ ವಾಮನ ತ್ರಿವಿಕ್ರಮನಾಗಿ ಬೆಳೆಯುವ ದೃಶ್ಯ ಕವಿಯ ಕಲ್ಪನಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಇದೇರೀತಿ ಶೈಲಿಯಲ್ಲಿ ಬದಲಾವಣೆಯನ್ನು ನೇಮಿನಾಥ ತರುತ್ತಾನೆ. ಮನೋಜ್ಞವಾದ ಉಪಮೇಗಳಿಂದ ಹಾಗೂ ದಿನಬಳಕೆಯ ಗಾದೆಗಳಿಂದ ಸಾಣೆ ಹಿಡಿದಂತಾಗಿ ಅವನ ಶೈಲಿಯಲ್ಲಿ ಹೊಸ ಹೊಳಪು ಕಾಣಿಸುತ್ತದೆ. ಉದಾಹರಣೆಗೆ

'ಗಾಜಿನ ಮಣಿಯಂ ಮಾರುವ ವೋಲ'

'ಮಾರಿಯುರಿದಾಡಿದಂತೆ'

'ಸೂರ್ಯಂ ಕಳ್ತಲೆಯಂ ಮದ್ದಿಂಗಮವಿಸಿ ಕಂಡೆಡೆಯುಂಟೇ'

'ಕನಸಿನ ಬತ್ತಕ್ಕೆ ಗೋಣೆಯಾಂಪರೆ'

ಇದೇ ರೀತಿ ಕೆಲವು ಗಾದೆ ಮಾತುಗಳು

ಲೋಕಕ್ಕುಪಕರಿಸುವನೊಳ್ ದೋಷಮುಂಸ್ತುತ್ಯಮಲ್ತೆ

"ಇಲಿಯುಲಿಪುಗೇಳ್ವ ಬೆಕ್ಕಿನಂತೆ"

ಮುಂತಾದ ಗಾದೆಗಳಲ್ಲಿ ಕವಿಯ ಲೋಕಾನುಭವ ಸಂಪತ್ತು ಅಭಿವ್ಯಕ್ತವಾಗುತ್ತದೆ. ಒಟ್ಟಾರೆ ಜೈನ ಭಾರತಗಳನ್ನು ರಚಿಸಿದವರ ಪರಂಪರೆಯಲ್ಲಿ ಹಾಗೂ ವ್ಯಾಸ ಭಾರತದ ಕಥೆಯನ್ನು ಪುನರ್‌ಲೇಖಿಸುವುದರ ಜೊತೆಗೆ ತಮ್ಮ ಧರ್ಮಕ್ಕನುಸಾರವಾಗಿ ಬದಲಾವಣೆಗಳನ್ನು ಮಾಡಿಕೊಂಡು ಜೈನಭಾರತವಾಗಿ ರೂಪಿಸಿದ್ದಾನೆ.

"ನೇಮಿಚಂದ್ರನ ನೇಮಿನಾಥ ಪುರಾಣದ ಆಯ್ಕೆ ಆತನ ಕಾಲದ ಮನೋಧರ್ಮಕ್ಕೆ ಪೂರಕವಾಗಿದೆ. ಅರ್ಧ ನೇಮಿಪುರಾಣವೆಂದು ಕರೆಯಲಾಗುವ ಈಗ ದೊರೆತಿರುವ ಕಾವ್ಯಭಾಗವನ್ನು ಗಮನಿಸಿದಾಗ ಭಾರತ ಮತ್ತು ಹರಿವಂಶದ ಜನಪ್ರೀಯತೆ ಮತ್ತು ಅದಕ್ಕೆ ಪೂರಕವಾದ ರಮ್ಯ ಪ್ರಸಂಗಗಳು ನೇಮಿನಾಥ ಪುರಾಣದ ಜನಸಮ್ಮುಖತೆಗೆ ಕಾರಣವಾಗಿವೆ. ಈ ಕಾವ್ಯದಲ್ಲಿ ಶಾಸ್ತ್ರಜ್ಞಾನ ಪ್ರಧಾನವಾಗಿದ್ದರೂ ನವರಸಗಳ ಅಭಿವ್ಯಕ್ತಿಗೆ ಅಪರಿಮಿತವಾದ ಅವಕಾಶ ದೊರೆತಿದೆ"[೨೨] ಎಂಬ ವಿವೇಕರೈ ಅವರ ಮಾತುಗಳು ಭಾಷಾಂತರದ ಹಿನ್ನೆಲೆಯಲ್ಲಿ ಮಹತ್ವ ಪಡೆದುಕೊಳ್ಳುತ್ತವೆ.

ವಾಸುದೇವನ ಕಥೆಯಲ್ಲಿಯೂ ಈ ಕವಿ ಸ್ವಾರಸ್ಯವಾದ ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾನೆ. ವಾಸುದೇವನ ಬಂಧನವಾದಾಗ ನಿಪುಣಮತಿ ಎಂಬ ಲೆಂಕ ಬಂಧನದ ವಿಷಯವನ್ನು ನೇರವಾಗಿ ಅವನಿಗೆ ತಿಳಿಸಿದನೆಂದು ಉತ್ತರಪುರಾಣ, ಚಾವುಂಡರಾಯ ಪುರಾಣಗಳು ತಿಳಿಸುತ್ತವೆ. ಒಂದು ದಿನ ಉದ್ಯಾನದಲ್ಲಿದ್ದ ವಾಸುದೇವ ಕಸ್ತೂರಿ ಮೊದಲಾದ ದ್ರವ್ಯಗಳನ್ನು ಅಂತಃಪುರಕ್ಕೆ ಕೊಂಡೊಯ್ಯುತ್ತಿದ್ದ ಚೇಟಿಯನ್ನು ಹಿಡಿದುಕೊಂಡಾಗ "ಸೆರೆಯೊಳಿರ್ದುಂ ವಿಕಾರತನಮನೊಂದಂ ಕೋಡಗಂಗಳೊಳ್ಕಂಡೆನೊಂದಂ ನಿನ್ನೊಳ್ಕಂಡೆನ್" ಎನ್ನುತ್ತಾಳೆ. ಆಗ ವಸುದೇವ ಅವಳ ಮಾತಿನ ಅರ್ಥವೇನೆಂದು ತಿಳಿಯಲು ಅಂಗಲಾಚುತ್ತಾನೆ, ಬೆದರಿಸುತ್ತಾನೆ. ಪುರಜನರ ಪುಕಾರಿನಿಂದಾಗಿ, ಅವರು ಬಂಧನದಲ್ಲಿರಬೇಕಾಯಿತೆಂದು ಅವಳು ತಿಳಿಸುತ್ತಾಳೆ. ಕವಿಯ ಸೋಪಜ್ಞತೆಗೆ ಹಾಗೂ ಕಲ್ಪನಾ ಪ್ರತಿಭೆಗೆ ಈ ಪ್ರಸಂಗ ಸುಂದರ ನಿದರ್ಶನವಾಗಿದೆ."[23]

ಸಾಳ್ವ ಭಾರತ (ನೇಮಿನಾಥ ಚರಿತೆ)

ಕ್ರಿ.ಶ. ಸು.ಗಳಲಜ ರಲ್ಲಿ ಸಾಳ್ವಮಲ್ಲನ ಆಸ್ಥಾನ ಕವಿಯಾಗಿದ್ದ ಸಾಳ್ವ ಕವಿಯು ಪ್ರಾಕೃತ ಗ್ರಂಥಗಳಲ್ಲಿ ಪ್ರಾಸಂಗಿಕವಾಗಿ ಬರುವ ನೇಮಿತೀರ್ಥಂಕರ ಕಥೆಯನ್ನು ಆಧರಿಸಿ ತನ್ನ ಕೃತಿಯನ್ನು ಬರೆದಿದ್ದಾನೆ. "ಭಾರತ ಕಥೆ ಮತ್ತು ಭಾಗವತ ಕಥೆಯ ಮಿಶ್ರಣವಿರುವ ಶ್ರೀಕೃಷ್ಣ ಕೇಂದ್ರಿತ ಹರಿಕತೆಯ

ಪ್ರಧಾನ ಆಶಯವುಳ್ಳ ಈ ಕಥಾವಸ್ತು ಜೈನ ಧರ್ಮದ ಪರಿವೇಶದಲ್ಲಿ ನೇಮಿಜಿನನ ಕಥನವಾಗಿ ಜನಪ್ರೀಯವಾಗಿದೆ."[೨೪]

"ಕ್ರಿ.ಶ.೭೮೪ ರಲ್ಲಿದ್ದ ಮುನ್ನಾಟ ಸಂಘದ ಜಿನಸೇನಾಚಾರ್ಯನ ಹರಿವಂಶವು ಸಂಸ್ಕೃತದಲ್ಲಿ ಬಂದ ನೇಮಿತೀರ್ಥಂಕರನನ್ನು ಕುರಿತ ಸಂಸ್ಕೃತ ರೂಪದ ಕಾವ್ಯ ಈ ಹರಿವಂಶ ಕಾವ್ಯ ಮತ್ತು ಗುಣಭದ್ರಾಚಾರ್ಯನ ಉತ್ತರ ಪುರಾಣದಲ್ಲಿ ಅಂತರ್ಗತವಾಗಿರುವ ನೇಮಿನಾಥಪುರಾಣ ಇವರೆಡು ಮುಂದೆ ಕನ್ನಡದಲ್ಲಿ ರಚನೆಗೊಂಡ ನೇಮಿನಾಥ ಪುರಾಣಗಳಿಗೆ ಮೂಲ ಆಕರಗ್ರಂಥಗಳಾಗಿವೆ."[೨೫]

ನೇಮಿನಾಥನನ್ನು ಕುರಿತ ದೇಶಿ ಛಂದಸ್ಸಿನಲ್ಲಿ ಸಾಳ್ವ ಕವಿಯ ನೇಮಿನಾಥ ಚರಿತ್ರೆಯೇ (ಸಾಳ್ವಭಾರತ) ಮೊದಲನೆಯದು. ಅನಂತರ ಮೂರನೇ ಮಂಗರಸನು ಸಾಂಗತ್ಯದಲ್ಲಿ ನೇಮಿಜಿನೇಶನ ಚರಿತ್ರೆಯನ್ನು ರಚಿಸಿದ್ದಾನೆ. ಮತ್ತು ಭಾಮಿನಿ ಷಟ್ಪದಿಯಲ್ಲಿ ಬ್ರಹ್ಮಣಾಂಕನೆಂಬ ಕವಿಯು ಸು.ಕ್ರಿ.ಶ.೧೮೦೦ ರಲ್ಲಿ ಜಿನಭಾರತವನ್ನು ಬರೆದಿದ್ದಾನೆ. ಅವುಗಳ ಪರಿಚಯವನ್ನು ಮುಂದೆ ಮಾಡಿಕೊಡಲಾಗುವುದು. ಭಾಷಾಂತರದ ಪ್ರಕ್ರಿಯೆಯಲ್ಲಿ ಸಾಳ್ವಭಾರತವನ್ನು ನೋಡಿದಾಗ ಹಲವಾರು ಬದಲಾವಣೆಗಳು ಕಂಡುಬರುತ್ತವೆ. ಸಾಳ್ವ ಕವಿ ತನ್ನ ಭಾರತದಲ್ಲಿ ವಾರ್ಧಕ ಷಟ್ಪದಿ, ಪರಿವರ್ಧಿನಿ ಷಟ್ಪದಿ ಮತ್ತು ಕಂದ ಪದ್ಯ ಹಾಗೂ ಗದ್ಯ ಹೀಗೆ ವೈವಿಧ್ಯಮಯ ಛಂದಸ್ಸನ್ನು ಪ್ರಯೋಗಿಸಿದ್ದಾನೆ. ಈ ಪ್ರಯೋಗಶೀಲತೆಯಲ್ಲಿಯೇ ಅವನ ಭಾಷಾಂತರ ಪ್ರಕ್ರಿಯೆಯನ್ನು ಮತ್ತು ಬದಲಾವಣೆಯ ಕ್ರಿಯೆಯನ್ನು ಗುರುತಿಸಬಹುದು. ಸಾಳ್ವನ ಶಬ್ದಬಂಡಾರವನ್ನು ಡಾ: ಹಂಪಾ ನಾಗರಾಜಯ್ಯನವರು ಸಂಗ್ರಹಿಸಿ ವಿದ್ವಾಂಸರ ಗಮನವನ್ನು ಸೆಳೆದಿದ್ದಾರೆ. ಅಂತಹ ಕೆಲವು ಶಬ್ದಗಳು ಸಾಳ್ವ ಭಾರತದಲ್ಲಿ ಹೀಗಿವೆ. ಪ್ರಾಕೃತದ ವಡಪ್ಪಂ ನಿಂದ ಬಂದಿರುವ ಬಡಹ ಅಂದರೆ ನಿರಂತರ ಮಳೆ, ಕಿರುಳೆ= ಹಸುಳೆ, ಬೆರಟೆ= ಬೆರಣಿ, ಹೀರ=ಹೀರಕ, ವಜ್ರ, ಪಟೀರ=ಶ್ರೀಗಂಧ, ಮನ್ಮಥ, ಪ್ರೆರಜೆ=ಹೊರಜೆ, ಹಗ್ಗ, ಮಾಸರಿಕೆ= ಮಾಧುರ್ಯ, ಇತ್ಯಾದಿ., ಈ ಶಬ್ದಗಳನ್ನು ಭಾಷಾಂತರ ದೃಷ್ಟಿಯಿಂದ ನೋಡಿದಾಗ ಶಬ್ದಗಳು ಕಾಲಕಾಲಕ್ಕೆ ಹೇಗೆ ಬದಲಾವಣೆ ಮತ್ತು ಬೇರೆ ಬೇರೆ ಅರ್ಥ ಹೊಂದುತ್ತವೆ ಎಂದು ಗುರುತಿಸಬಹುದು.

ಮಹಾಭಾರತದಲ್ಲಿ ದುರ್ಯೋಧನ ಸರೋವರದಲ್ಲಿ ಬಚ್ಚಿಟ್ಟುಕೊಳ್ಳುವ ಪ್ರಸಂಗವೊಂದು ವಿಶಿಷ್ಟ ಘಟನೆ. ರನ್ನ ಪಂಪರು ಚಿತ್ರಿಸಿರುವ ಪ್ರಸಂಗವನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗುವುದು. ಆದರೆ ಇಲ್ಲಿ ಸಾಳ್ವ ಚಿತ್ರಿಸಿರುವ ಬಗೆ ಸರೋವರವನ್ನು ಪ್ರವೇಶಿಸಿದ ಕೌರವರನ್ನು ಹೊರಕ್ಕೆ ಎಬ್ಬಿಸಲು ಭೀಮನು ಅಬ್ಬರಿಸುವ ಮಾತುಗಳು ಸಾಳ್ವ ಭಾರತದಲ್ಲಿ ಸಾಳ್ವ ಕವಿ ಸೊಗಸಾಗಿ ಚಿತ್ರಿಸಿದ್ದಾನೆ.

ಮುಳಿದು ಬಂದೊಡೆ ಕೊಲುವೆ, ಕೈದುವ।
ನಿಳುಹಿ ಬಂದೊಡೆ ಕಾವನಗ್ರಜ।
ನಿಳೆಯ ನಿತ್ತಪೆನೆಂದೊಡಗ್ರಜನೆಂದು ವಂದಿಸುವೆ॥

ತಳೆದವ್ಕೆ ಜಿನದೀಕ್ಷೆಯುಮನೆನ।

ಲೊಲಿದು ಬಂದು ನಮೋಸ್ತು ಮಾಡುವೆ।

ನುಳಿದ ಕಾರ್ಯವನರಿಯೆನಿವರೊಳಗೊಂದ ಹಿಡಿಯೆಂದ॥(೫೮-೧೦)

ಇಲ್ಲಿ ಭೀಮನ ಬಹುಮುಖ ವ್ಯಕ್ತಿತ್ವ ಪರಿಚಯವಾಗುತ್ತದೆ. ವ್ಯಾಸ ಭಾರತದಲ್ಲಿ ಭೀಮನ ವ್ಯಕ್ತಿತ್ವ ಗಡುಸಾದುದು. ಆದರೆ ಇಲ್ಲಿ ಧೀಕ್ಷಿತನಾದರೆ ನಮೋಸ್ತು ಮಾಡುವೆ ಎಂಬ ಭಾವ ಜೈನ ಮಹಾಭಾರತದ ಭೀಮನಿಗೆ ಮಾತ್ರ ಸಾಧ್ಯವಾಗುವಂತಹುದು. ಇದು ಸಾಳ್ವನ ಭಾಷಾಂತರ ಪ್ರಕ್ರಿಯೆ ಎಂದು ನೋಡಬಹುದು. ಅಂದರೆ ಧಾರ್ಮಿಕ ಹಿನ್ನೆಲೆಯಲ್ಲಿ ಭೀಮನ ಸ್ವಭಾವವನ್ನು ಬದಲಿಸಿರುವುದು. ಇಂತಹ ಬದಲಾದ ನಿದರ್ಶನಗಳು ಸಾಳ್ವ ಭಾರತದಲ್ಲಿ ಹಲವಾರು ಕಾಣಸಿಗುತ್ತವೆ. ನಿದರ್ಶನವಾಗಿ

"ನೇಮಿನಾಥ ಚರಿತೆಯಲ್ಲಿ ವಿಂಧ್ಯಕ-ವಾಗುರೆಯ, ನಂದಿಯ, ಸೂರದತ್ತ-ಸುದತ್ತ ವರ್ತಕರ, ಚಾರುದತ್ತನ, ಕಾಮನ ಹಾಗೂ ಕೌರವ ಪಾಂಡವರ ಕಥೆಗಳು ಬರುತ್ತವೆ. ಇಲ್ಲಿ ಬರುವ ಕೃಷ್ಣ-ಜರಾಸಂಧರ (ನಾರಾಯಣ- ಪ್ರತಿನಾರಾಯಣರ) ಮಹಾಯುದ್ಧದಲ್ಲಿ ಕೌರವ ಪಾಂಡವರ ಯುದ್ಧವೂ ಸೇರಿ ಹೋಗಿದೆ. ಇದೊಂದು ಮಧ್ಯಮ ವರ್ಗದ ಕಾವ್ಯ. ಈ ಕಾವ್ಯದ ಉದ್ದಕ್ಕೂ ಗಾದೆ ಮಾತುಗಳು, ಜಾಣ್ನುಡಿಗಳು, ಜೀವನ ಮೌಲ್ಯವನ್ನು ಪ್ರತಿವಾದಿಸುವ ಸೂಕ್ತಿಗಳು ಹೇರಳವಾಗಿ ಲಭಿಸುತ್ತವೆ. ಅಂಥ ಕೆಲವು ಸೂಕ್ತಿಗಳು ಹೀಗಿವೆ-

"ಕಾಲ ಲಬ್ಧಿಯ ಮಹಿಮೆ ಕಡು ಬಡವೆ?, ಕೋಪದಿ ಕೆಡದವರಾರ್? .ಧರ್ಮವನು ನಂಬಿದವಗೆ ಕೇಡುಂಟೆ, ಪವಿತ್ರ ದಾನದಿನೇನು ಸಮನಿಸದೊ?, ಭೂಪರ ಮಾತು ಸಕ್ಕರೆ ಮನವು ಕತ್ತರಿ, ಮುನಿಸು ಮುನಿಗಪಮಾನ, ಯಾರು ಮಾರಾಧಿಸದೆ ಸೌಖ್ಯವು ಬಯಸಿದಡೆಬಹುದೆ? ವಿಷವಮೃತವಾಗದೆ ಶುಭೋದಯದಿ?, ಧರೆಯೊಳಾರ್ ಒಳಕೊಂಬರ್ಕೈ ದುರ್ನಯ ವಿದಗ್ಧರನು, ಮುಂಗೈಯ ಕಂಕಣಕೇಕೆ ಕನ್ನಡಿ?"[೨೬] .

ಒಟ್ಟಾರೆ ಜೈನ ಭಾರತದಲ್ಲಿ ಸಾಳ್ವ ಕವಿಯ ಭಾರತ ವೈದಿಕ ಧರ್ಮದ ಪಾತ್ರಗಳನ್ನು ಜೈನ ಧಾರ್ಮಿಕ ದೃಷ್ಟಿಕೋನದಲ್ಲಿ ಬದಲಾಯಿಸಿ ಚಿತ್ರಿಸುವುದರ ಮೂಲಕ ಭಾಷಾಂತರ ಮಾಡಿರುತ್ತಾರೆ. ಸಾಳ್ವನ ಭಾಷಾಂತರ ಕ್ರಮವನ್ನು ಅನುಸರಣೆ ಮಾದರಿಯ ಭಾಷಾಂತರ ಎಂಬ ಶೀರ್ಷಿಕೆಯ ಅಡಿಯಲ್ಲಿ ಅವನ ಕೃತಿಯನ್ನು ಗುರುತಿಸಬಹುದು.

ನೇಮಿಜಿನೇಶ ಸಂಗತಿ.(ಮೂರನೇ ಮಂಗರಸ)

೨೨ನೇ ತೀರ್ಥಂಕರರಾದ ನೇಮಿನಾಥನ ಕಥೆಯನ್ನು ಸಾಂಗತ್ಯದಲ್ಲಿ ಬರೆದಿರುವ ಬೃಹತ್ ಕಾವ್ಯ ಇದಾಗಿದೆ. ಚಂಪೂ ಶೈಲಿಯಲ್ಲಿದ್ದ ನೇಮಿಚಂದ್ರನ ಕಾವ್ಯ ಮಂಗರಸನಲ್ಲಿ ಸಾಂಗತ್ಯ ರೂಪ ಪಡೆದಿರುವದರಲ್ಲಿಯೇ ಭಾಷಾಂತರದ ನೆಲೆಯೊಂದು ಗೋಚರವಾಗುತ್ತದೆ. "ಕನ್ನಡದಲ್ಲಿ ಅನೇಕರು

ರಚಿಸಿರುವ ನೇಮಿನಾಥ ಪುರಾಣಗಳ ಸಾಲಿಗೆ ಸೇರುವ ಮಂಗರಸನ ಕಾವ್ಯವು ಹರಿವಂಶ, ಕುರುವಂಶಗಳ ವೃತ್ತಾಂತದಿಂದ ತೊಡಗಿ ನೇಮಿನಾಥನ ಕಥೆಯ ವರೆಗೆ ವಿಸ್ತಾರವಾಗಿ ಹರಡಿರುವ ಜೈನ ಮಹಾಭಾರತ ಕಥಾ ವಸ್ತುವಿನ ವಿಸ್ತಾರ ಹಾಗೂ ಅಧಿಕ ವರ್ಣನೆಗಳಿಂದಾಗಿ ಕೃತಿ ಮಹತ್ವವನ್ನು ಪಡೆದುಕೊಳ್ಳುವಲ್ಲಿ ವಿಫಲವಾಗಿದೆ.

ಕವಿ ಮಂಗರಸ ವ್ಯಾಸರ ಮಹಾಭಾರತದ ಕಥೆಯನ್ನು ಬಹಳ ಮಟ್ಟಿಗೆ ಅನುಸರಿಸಿದರೂ ಜೈನ ಧರ್ಮದ ಹಿನ್ನೆಲೆಯಲ್ಲಿ ಅಲ್ಲಲ್ಲಿ ಕೆಲವು ಮಾರ್ಪಾಡುಗಳನ್ನು ತನ್ನ ಆಶೋತ್ತರಕ್ಕೆ ತಕ್ಕಂತೆ ಬದಲಾಯಿಸಿ ಜೈನಧರ್ಮದ ದೀಕ್ಷೆಯನ್ನು ನೀಡಿದ್ದಾನೆ.

ನೇಮಿಜಿನೇಶನ ಸಂಗತಿಯಲ್ಲಿ ಕವಿ ಮಾಡಿಕೊಂಡ ಮಾರ್ಪಾಡುಗಳು, ಭಾಷಾಂತರದ ನೆಲೆಯಲ್ಲಿ ನೋಡಿದಾಗ ಬದಲಾವಣೆಯ ಮಹತ್ವ ತಿಳಿಯುತ್ತದೆ. ಅಂತಹ ಕೆಲವು ನಿದರ್ಶನಗಳು ಈ ಕೆಳಗಿನಂತಿವೆ.

೧) ಧರ್ಮರಾಯನಿಗೆ ಕುಸುಮ ಮಾಲಾ ಎಂಬ ಹೆಂಡತಿ ಇರುವುದು.

೨) ಎಲ್ಲ ಜೈನ ಮಹಾಭಾರತಗಳಂತೆ ಇಲ್ಲಿಯೂ ದ್ರೌಪದಿ ಅರ್ಜುನನಿಗೆ ಮಾತ್ರ ಹೆಂಡತಿ.

೩) ದುರ್ಯೋಧನ ಚಕ್ರವರ್ತಿ ಅಲ್ಲ ಒಬ್ಬ ಸಾಮಂತ.

೪) ಕುಂತಿ ಒಬ್ಬ ಮುನಿಯಿಂದ ಕರ್ಣನ ತನ್ನ ಮಗನೆಂದು ತಿಳಿಯುವಳು.

೫) ಅರ್ಜುನ ಸಾರಥಿ ಶ್ರೀ ಕೃಷ್ಣನಲ್ಲ ಕೃಷ್ಣ ಎಂಬ ಪರಾಕ್ರಮಿ.

೬) ದ್ರೌಪದಿ ವಸ್ತ್ರಾಪಹರಣ ಇಲ್ಲ.

೭) ಬಹಳ ಸ್ವಾರಸ್ಯವಾದ ಮೂಲ ಭಾರತ ಕಥೆಗಳಿಂದ ಭಿನ್ನಾವಾದ ಅಂಶವೆಂದರೆ ದ್ರೌಪದಿ ಅಜ್ಞಾತವಾಸದಲ್ಲಿ ತವರು ಮನೆಯಲ್ಲಿ ಇರುವಳು.

೮) ವ್ಯಾಸಭಾರತದ ಕೀಚಕ ಸೈರೇಂದ್ರಿ ಪ್ರಕರಣ ಇಲ್ಲ.

ಇಂತಹ ಹಲವು ಹತ್ತು ಬದಲಾವಣೆಗಳನ್ನು ಮಂಗರಸ ತಂದಿದ್ದಾನೆ. "ಇವನ ವಿಶೇಷತೆ ಇರುವುದು ಅವನು ಬಳುಸುವ ಹಾಡು ನೀಡಿ ಗಾದೆ ಮಾತುಗಳು ಪ್ರಯೋಗದಿಂದ ಅಂತಹ ಕೇಲವು ಪ್ರಯೋಗಗಳಿಂದರೆ.

೧) ಹಸೆಯೊಳು ಹಾವು ಹರಿಯಿತೆಂಬ ನಾಣ್ನುಡಿ ಹಸನಾಯಿತು. ೩-೫೩

೨) ಹದದ ನೆಲೆದ ಮೂಲಂಗಿಯ ಕೀಳ್ವಂತೆ ದರ ಕೊಂಬನು ಕಿಳ್ತು ೧೬-೧೦೮

೩) ಹಸುವಿನ ಬಸಿರ ಬಂದಾ ಕರು ಬಲಿದಾ ಹಸುವಿನ ಮೇಲ್ವಾಯ್ವಂತೆ ೧೯-೧೦೨

ಹೀಗೆ ಇಂತಹ ಹಲವು ಗಾದೆ ಮಾತುಗಳು ಅಲಂಕಾರಗಳು ವ್ಯಾಸಭಾರತದಲ್ಲಿ ಕಾಣುವುದಿಲ್ಲಾ. ಇವು ಎಲ್ಲಾ ಮಂಗರಸನ ಸ್ವಂತ ಸೃಷ್ಟಿಗಳು . ಮೂಲ ಭಾರತದ ಬದಲಾವಣೆಯ ಪ್ರಕ್ರಿಯನ್ನು ಇಲ್ಲೆಲ್ಲಾ ಗುರುತಿಸಬಹುದು. ಹಾಗೆ ಬೇರೆ ಬೇರೆ ಕವಿಗಳಿಂದ ಸಂದರ್ಭಗಳನ್ನು ಪುನರ್ಲೇಖ ದೃಷ್ಟಿಯಿಂದ ಗುರುತಿಸಬಹುದು. ಉದಾ: ದ್ರೌಪದಿಯ ಸ್ವಯಂವರ ಸಂದರ್ಭದಲ್ಲಿ ಬಿಲ್ಲಹೆದೆಯೇರಿಸಿರಲು ಎದ್ದ ಅರ್ಜುನನನ್ನು ಬ್ರಾಹ್ಮಣರೇ ವಿಡಂಬಿಸುವ ರೀತಿ ಕುಮಾರವ್ಯಾಸನಲ್ಲಿಯಂತೆಯೇ ಇದೆ.[೨೭]

ಅಲ್ಲದೆ ಪಂಪ ರನ್ನ ಮೊದಲಾದವರ ಹಲವು ಕಾವ್ಯಭಾಗಗಳನ್ನು ಮಂಗರಸ ತನ್ನ ಕಾವ್ಯದಲ್ಲಿ ವಿಶೇಷವಾಗಿ ಸಂದರ್ಭೋಚಿತವಾಗಿ ಬಳಸಿಕೊಂಡಿದ್ದಾನೆ.

ಉದಾ:

ಧುರಮೊಳಗವರು ನೂರ್ವರು ನಾವೈವರು।
ಪರಬಾಧೆಯಾರಿಗೆಸಗಲು
ನಿರುತದಿ ನಾವು ನೂರ್ಕೈವದರಿನಿದ
ಪರಿಹರಿಪುದು ಮತ॥ ನೇಮಿಜಿನೇಶ ಸಂಗತಿ ೨೪-೧೨೬೮

ಎಂದು ಹೇಳುವಲ್ಲಿ, ಎನಗೆ ನೀವೀರ್ವರೆರಡು ಕಣ್ಗಳ್ (ನೇಮಿಜಿಸಂ೨೯-೧೬೯) ಎನ್ನುವಲ್ಲಿ ಕುಂತಿ ಕರ್ಣನಿಗೆ ಪ್ರೀತಿಯಿಂದೋಲೈಸಿಕೊಂಡಿರುವ ನಿನ್ನುಜಾತಕರ ಎಂದಾಗ ಕರ್ಣ 'ಜನನಿ ಬಿನ್ನಪ ಕೌವೇಶನ ಬಿಡುವುದು ಕನಸುಮನಸಿನೊಳಗಿಲ್ಲ' ಎನ್ನುವಲ್ಲಿ (ನೇಮಿಜಿಸನೇಸ ಸಂಗತಿ, ೨೫,೧೮೪-೧೮೨) ಪಂಪನ ಮಾತಿನ ವರಸೆ ಕಂಡು ಬರುತ್ತದೆ.

ಭಾಷಾಂತರ ನೆಲೆಯಲ್ಲಿ ಎಲ್ಲಾ ಪ್ರಸಂಗಗಳು ಗಮನಾರ್ಹವಾದವು ಮಂಗರಸನ ಭಾಷಾಂತರ ಕ್ರಮವನ್ನು ರೂಪಾಂತರ ಮಾದರಿಯ ಕ್ರಮವೆಂದು ಗುರುತಿಸಬಹುದು. ಒಟ್ಟಾರೇ ಮಂಗರಸನ ಕೃತಿಗಳಲ್ಲಿ ಕನ್ನಡ ಭಾಷೆಯ ಸರಳತೆ ಕನ್ನಡ ಸಂಸ್ಕೃತಗಳ ಹದವರಿತ ಜೋಡಣೆ ದೇಸಿ ಸೊಗಡು ಮುಂತಾದವುಗಳನ್ನು ಕಾಣಬಹುದು.

ಬಂಧುವರ್ಮನ ಹರಿವಂಶಾಭ್ಯುದಯಂ

ಈಗ ದೊರೆತಿರುವ ಕನ್ನಡ ನೇಮಿನಾಥ ಪುರಾಣಗಳಲ್ಲಿ ಬಂಧುವರ್ಮನ ಹರಿವಂಶಾಭ್ಯುದಯಂ ಎಂಬ ಚಂಪೂ ಕಾವ್ಯ ಕನ್ನಡ ಭಾರತಗಳ ಸಾಲಿನಲ್ಲಿ ಸೇರುವ ವಿಶಿಷ್ಟ ಕೃತಿ. ನೇಮಿನಾಥನು ಹರಿವಂಶೋದ್ಭವನಾದುದರಿಂದ ಈ ಕೃತಿಗೆ ಹರಿವಂಶಾಭ್ಯುದಯಂ ಎಂದು

ಬಂಧುವರ್ಮ ಹೆಸರಿಟ್ಟಿದ್ದಾನೆ. ಇಲ್ಲಿ ಬರುವ ನೇಮಿನಾಥ ಕಥಾಭಾಗ ಸ್ವಲ್ಪವಾದರೂ ಹರಿವಂಶ ಕುರುವಂಶ ಹಾಗೂ ಚಾರುದತ್ತ ಪ್ರಕರಣದ ನಿರೂಪಣೆಯನ್ನೊಳಗೊಂಡ ವಿಶಿಷ್ಟ ಕೃತಿಯಾಗಿದೆ.

ಬಂಧುವರ್ಮನು ಕರ್ಣಪಾರ್ಯನ ಕಥೆಯನ್ನು ಅನುಸರಿಸಿ ಆತನ ಪದಪ್ರಯೋಗಗಳನ್ನು ವರ್ಣನೆಗಳನ್ನು ಬಳಸಿ ತನ್ನ ಕಾವ್ಯರಚನೆ ಮಾಡಿದರೂ ಸ್ವ ಪ್ರತಿಭೆಯಿಂದ ನಿರ್ಮಿಸಿರುವ ರಸಸನ್ನಿವೇಶಗಳಿಂದ ವಿಶಿಷ್ಟವಾಗಿದೆ.

ಪಂಪನ ಕೃತಿಯನ್ನು ರನ್ನ ಪುನರ್ಲೇಖ ಮಾಡಿದಂತೆ ಕರ್ಣಪಾರ್ಯನ ಕೃತಿಯನ್ನು ಬಂಧುವರ್ಮ ಪುನರ್ಲೇಖಿಸಿದ್ದಾನೆ. ಒಟ್ಟಾರೆ ಈ ಕೃತಿ ವೈದಿಕ ಪರಂಪರೆಯ ಭಾರತ ಹಾಗೂ ಭಾಗವತ ಕಥೆಗಳಿಗೆ ಜೈನೀಕರಣವನ್ನು ಮಾಡಿದ ಪುರಾಣಕಾವ್ಯ. ವೈದಿಕ ಮತ್ತು ಜೈನ ಮುಖಾಮುಖಿಯಾಗಿ ಹೊಸತೊಂದು ಪುರಾಣವನ್ನು ಕಟ್ಟುವ ವಿಶಿಷ್ಟ ಮಾದರಿಯೊಂದನ್ನು ಹರಿವಂಶಾಭ್ಯುದಯಂ ಕಾವ್ಯದಲ್ಲಿ ನಾವು ಕಾಣಬಹುದು”[೨೮] ಎಂಬ ವಿವೇಕರೈ ರವರು ಹೇಳಿರುವ ಬಂಧುವರ್ಮನ ಕೃತಿಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಗಮನಾರ್ಹವಾಗಿದೆ.

ಈ ಮೇಲೆ ಗುರುತಿಸಿದ ಪ್ರಮುಖ ನಾಲ್ಕು ಜೈನ ಮಹಾಭಾರತಗಳಲ್ಲದೇ ಕರ್ಣಪಾರ್ಯನ ನೇಮಿನಾಥ ಪುರಾಣ (ಕ್ರಿ.ಶ. ೧೧೪೦), ಮಾಹಬಲ ನೇಮಿನಾಥ ಪುರಾಣ (ಕ್ರಿ.ಶ.೧೨೫೪), ಬ್ರಹ್ಮಣಾಂಕನ ಜೀನಭಾರತ(ಕ್ರಿ.ಶ. ೧೦೦೮.)

ಇವು ಇಷ್ಟು ಜೈನ ಧಾರ್ಮಿಕ ಹಿನ್ನೆಲೆಯಲ್ಲಿ ರಚಿತಗೊಂಡ ಜೈನ ಮಹಾಭಾರತಗಳು. ಈ ಎಲ್ಲವು ವ್ಯಾಸಭಾರತದ ಹಾಗೂ ಜೈನ ಪುರಾಣದ ಮಿಶ್ರಗೊಂಡ ಪುನರ್ಲೇಖಗಳಾಗಿವೆ.

ಇದೂವರೆಗೆ ಆಧುನಿಕಪೂರ್ವದಲ್ಲಿ ವ್ಯಾಸಮಹಾಭಾರತವನ್ನು ಆಧಾರವಾಗಿಟ್ಟುಕೊಂಡು ಕನ್ನಡದಲ್ಲಿ ರಚಿತವಾದ ಅಂದರೆ ಭಾಷಾಂತರ ಪ್ರಕ್ರಿಯೆಯಲ್ಲಿ ಒಂದಾದ ಪುನರ್ಲೇಖ ಪರಿಕಲ್ಪನೆಯ ಹಿನ್ನೆಲೆಯಲ್ಲಿ ರಚಿತವಾದ ಮಹಾಭಾರತಗಳ ಸ್ಥೂಲ ಪರಿಚಯವನ್ನು ಮಾಡಿಕೊಳ್ಳುವುದರ ಜೊತೆಗೆ ಅವು ಪುನರ್ಭವಗೊಂಡು ಹೇಗೆ ಬದಲಾವಣೆಯನ್ನು ಹೊಂದಿವೆ ಎಂದು ಅವಲೋಕಿಸಲಾಗಿದೆ.

ಆಧುನಿಕ ಕಾಲದಲ್ಲೂ ಮಹಾಭಾರತವನ್ನು ಕುರಿತಂತೆ ಪುನರ್ಲೇಖ ಪರಿಕಲ್ಪನೆಯನ್ನು ಹೊಂದಿ ಟೀಕು ಟಿಪ್ಪಣಿಗಳು ಗದ್ಯಾನುವಾದಗಳು, ಭಾವಾನುವಾದ ಹಿನ್ನೆಲೆಯಲ್ಲಿ ಚಿಕ್ಕದೇವರಾಜರು ಬರೆದ ಟೀಕು, ಎ.ಆರ್.ಕೃಷ್ಣಶಾಸ್ತ್ರಿಗಳು ಬರೆದ ವಚನಭಾರತ, ಸಂ.ಗೋ.ಬಿಂದುರಾಯರು ಕುಮಾರವ್ಯಾಸ ಭಾರತಕ್ಕೆ ಬರೆದ ಗದ್ಯಾನುವಾದ ಭಾರತ ಸಾರೋದ್ಧಾರ, ಎಸ್.ಎಲ್.ಬೈರಪ್ಪನವರ ಪರ್ವ ಕಾದಂಬರಿಯನ್ನು ಮುಂತಾದವುಗಳನ್ನು ಪುನಲೇಖ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬಹುದಾಗಿದೆ.

ಸಂಸ್ಕೃತದಲ್ಲಿ ರಚನೆಗೊಂಡ ವ್ಯಾಸರ ಭಾರತವನ್ನು ಕನ್ನಡ ಕವಿಗಳು ಪುನರ್ಲೇಖಿಸಿದ ಕೆಲವು ಭಾರತಗಳ ಸ್ಥೂಲ ಪರಿಚಯವನ್ನು ಈ ಅಧ್ಯಾಯದಲ್ಲಿ ಕಟ್ಟಿ ಕೊಡಲಾಗಿದೆ.ಈ ಸಮೀಕ್ಷೆಯಿಂದ ನಮಗೆ

ತಿಳಿದು ಬರುವುದೇನೆಂದರೆ 'ಕನ್ನಡ ಕವಿಗಳು ಕಥಾನಕವನ್ನು ಯಾವ ಮೂಲದಿಂದಲೇ ತೆಗೆದುಕೊಂಡಿರಲಿ ಅದನ್ನು ಹೇಳುವ ಕ್ರಮದಲ್ಲಿ, ಅದಕ್ಕೊಂದು ಸಂಕಥನವನ್ನು ರೂಪಿಸುವಲ್ಲಿ ಮಾತ್ರ ಕನ್ನಡದ್ದೇ ಆದ ಬಗೆಯೊಂದನ್ನು ರೂಪಿಸಿಕೊಳ್ಳುತ್ತಿದ್ದರು. ನಮ್ಮ ಆಧುನಿಕ ಪೂರ್ವದ ಕವಿಗಳಲ್ಲಿ ಇದೇ ವಿಧಾನ ಕಂಡು ಬರುತ್ತದೆ. ನಿರೂಪಣೆಯಲ್ಲಿ ಕನ್ನಡದ ಆಂಗಿಕಗಳನ್ನು ಕಥನದ ಭಾಗವನ್ನಾಗಿ ಮಾಡುವುದು ಈ ವಿಧಾನದ ಮುಖ್ಯ ಲಕ್ಷಣ.' ಎಂಬ ಕೆ.ವಿ. ನಾರಾಯಣ ಮಾತುಗಳ ಭಾಷಾಂತರದ ದೃಷ್ಟಿಯನ್ನು ಪರಿಚಯಿಸುತ್ತದೆ. ಮುಂದುವರಿದು ಅವರೇ ಹೇಳುವಂತೆ 'ಪಂಪನ ವಿಕ್ರಾಮಾರ್ಜುವ ವಿಜಯ'ದ ಮೊದಲ ವೃತ್ತದಲ್ಲಿ ಬರುವ ಮಾತಿದು. ನರಾಯಣನನ್ನು ಮತ್ತು ತನ್ನ ಆಶ್ರಯದಾತ ಅರಿಕೇಸರಿಯನ್ನು ಸಮನ್ವಯಗೊಳಿಸುವ ಉದ್ದೇಶ ಅವನಿಗೆ ಇರುವುದಷ್ಟೇ ಮೊದಲ ಪದ್ಯದಲ್ಲಿ ಈ ಕೆಲಸ ಆರಂಭಿಸುತ್ತಾನೆ. ನಮಗಿಲ್ಲಿ ಮುಖ್ಯವಾದುದು ಕವಿ ಬಳಸಿದ 'ಜೀಯನೆ' ಎಂಬ ಪ್ರಯೋಗದ ಹಿಂದೆ ಇರುವ ಆಂಗಿಕ ಕಥನದಲ್ಲಿ ಭಾಷಿಕವಾಗಿ ಹೀಗೆ ಆಂಗಿಕಗಳನ್ನು ಹಿಡಿದಿಡುವ ಕೆಲಸವನ್ನು ಕನ್ನಡ ಕವಿಗಳು ಮಾಡುತ್ತಾರೆ. ಇವು ಮೂಲದಲ್ಲಿ ಇರುವುದಿಲ್ಲ. ಕನ್ನಡ ಕಾವ್ಯ ಭಾಷೆಯ ಲಕ್ಷಣವೇ ಪರೋಕ್ಷವಾಗಿ ಭಾಷಾಂತರ ಭಾಷೆಯಾಗಿ ಕನ್ನಡದ ಲಕ್ಷಣವೂ ಆಗಿದೆ. ಏಕೆಂದರೆ ಪ್ರಬಲ ಸಾಹಿತ್ಯ ಸಂಸ್ಕೃತಿಯ ಎದುರಿನಲ್ಲಿ ತನ್ನ ಲಕ್ಷಣಗಳನ್ನು ನಿರ್ವಚಿಸಿಕೊಳ್ಳುವ ಜಬಾಬ್ದಾರಿ ಕನ್ನಡಕ್ಕೆ ಇದ್ದಿತು.

ಈ ಮೇಲೆ ಅವಲೋಕಿಸಿದ ಮಹಾಭಾರತಕ್ಕಿಂತ ಪ್ರಾಚೀನ ಕಾಲದಲ್ಲಿ ಜಾನಪದ ಮಹಾಭಾರತ ಪರಂಪರೆಯೊಂದು ಮೌಖಿಕವಾಗಿ ಇದ್ದು, ಇಂದೂ ಜೀವಂತವಾಗಿರುವ ನಿದರ್ಶನಗಳು ದೊರೆಯುತ್ತವೆ. ಉದಾಹರಣೆಗೆ ಗ್ರಾಮೀಣ ಪ್ರದೇಶದಲ್ಲಿ ಪ್ರಾದೇಶಿಕ ಭಿನ್ನತೆಯನ್ನು ಹೊಂದಿ ಹಾಡುವ ಅರ್ಜುನನ ಕಥೆ ಧರ್ಮರಾಯನ ಕಥೆ, ಶ್ರೀಕೃಷ್ಣನ ಕಥೆ, ಮುಂತಾದ ಮಹಾಭಾರತ ಪ್ರಸಂಗಗಳು ಕಾಣಸಿಗುತ್ತವೆ. ಅಲ್ಲದೇ ತುರಂಗ ಭಾರತ ಬಿಲ್ಲಭಾರತ ಎಂಬ ಜಾನಪದ ಕಥೆಗಳು ಸಾಕಷ್ಟು ಬದಲಾವಣೆಯೊಂದಿಗೆ, ಪ್ರಾದೇಶಿಕ ಭಿನ್ನತೆಯೊಂದಿಗೆ ಮತ್ತು ಇಂದು ನಾವು ವ್ಯಾಸಭಾರತ ಕಥೆಯಲ್ಲಿರುವುದಕ್ಕಿಂತ ಭಿನ್ನವಾದಂತ ಧೋರಣೆಯುಳ್ಳ ಕಥಾತಂತ್ರವೊಂದನ್ನು ಈ ಜಾನಪದ ಮಹಾಭಾರತಗಳಲ್ಲಿ ಕಾಣುತ್ತೇವೆ. ಒಟ್ಟಾರೆಯಾಗಿ ಮಹಾಭಾರತ ಕಥೆಯು ಕಾಲದಿಂದ ಕಾಲಕ್ಕೆ ಬೇರೆ ಬೇರೆ ಕವಿಗಳು ಆಯಾ ಕಾಲದ ಆಶೋತ್ತರಗಳಿಗೆ ತಕ್ಕಂತೆ ಕಾಲಮಾನದ ಭಿನ್ನತೆಗಳಿಗನುಸಾರವಾಗಿ ಧಾರ್ಮಿಕ ಮತ್ತು ಲೌಕಿಕ ದೃಷ್ಟಿಕೋನಗಳನ್ನು ಅಳವಡಿಸಿಕೊಂಡು ವೈವಿಧ್ಯಮಯವಾಗಿ ರಚನೆಗೊಂಡಿರುವುದು ಕಂಡುಬರುತ್ತದೆ. ಇದೆಲ್ಲವನ್ನು ನಾವು ಪುನರ್ಲೇಖ ಪ್ರಕ್ರಿಯೆಗಳೆಂದು ಹೇಳಬಹುದು.

ಅಡಿಟಿಪ್ಪಣಿಗಳು

೧. ಮುಗಳಿ ರಂ.ಶ್ರೀ., ೧೯೯೦, ಕ.ಸಾ.ಚರಿತ್ರೆ, ಪು.ಸಂ.೩೯

೨. ಅದೇ ಪುಟ

೩. ವೆಂಕಟಾಚಲಶಾಸ್ತ್ರಿ ಟಿ.ವಿ.., ೨೦೦೬, ಪಂಪಸಂಪುಟ,ಪುಟ XLV

೪. ಅದೇ ಪುಟ ೪೭

೫. ಅದೇ ಪುಟ XLVII

೬. ನಾಗಭೂಷಣ ಸ್ವಾಮಿ ಓ.ಎಲ್. ೧೯೯೯. ಭಾಷಾಂತರ ಸಾಂಸ್ಕೃತಿಕ ನೆಲೆಗಳು, ಪುಟ ೩೫

೭. ರಾಜರತ್ನಂ ಜಿ.ಪಿ., ೧೯೪೯, ಶ್ರೀ ಕವಿರತ್ನ, ಪುಟ ೨೬

೮. ವಿವೇಕರೈ ೨೦೦೬, ರನ್ನಸಂಪುಟ, ಸಂ. ಹಂಪಾ ನಾಗರಾಜಯ್ಯ, ಪುಟ XI

೯. ಸುಬ್ಬರಾಯಭಟ್. ಪಿ., ೨೦೦೧, ಗದಾಯುದ್ಧ ದರ್ಪಣಂ, ಪುಟ ೧೨.

೧೦. ಹಂಪಾನಾ, 2006, ರನ್ನ ಸಂಪುಟ ಸಂಪಾದನೆ, ಪುಟ XII

೧೧. ಕುವೆಂಪು, ೧೯೭೪, ಕರ್ನಾಟಕ ಭಾರತ ಕಥಾಮಂಜರಿ, ಪುಟ ೪.

೧೨. ಶಿವಾರಡ್ಡಿ ಕೆ.ಸಿ., ೧೯೯೯, ಭಾಷಾಂತರ ಸಾಂಸ್ಕೃತಿಕ ನೆಲೆಗಳು, ಪುಟ ೪೮.

೧೩. ಕುರ್ತಕೋಟಿ ಕೀರ್ತಿನಾಥ, ೨೦೦೪, ಕುಮಾರವ್ಯಾಸ ಭಾರತ ಸಾಂಸ್ಕೃತಿಕ ಮುಖಾಮುಖಿ,ಪುಟ ೯

೧೪. ಕನ್ನಡ ಸಾಹಿತ್ಯ ಪರಿಷತ್ತು ೨೦೦೩, ಕರ್ನಾಟ ಕೃಷ್ಣರಾಯ ಭಾರತ, ಪುಟ XII

೧೫. ಸೀತಾರಾಮಯ್ಯ ವಿ, ೧೯೮೦, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಮಠ ಪೀಠಿಕೆ ೩೦

೧೬. ರಾಜಗೋಪಾಲ ಬಿ. ೧೯೯೨, ಜೈಮಿನಿಭಾರತ ಕಥಾಮೃತ(ಸಂ) ಪುಟ ೧೪

೧೭. ಜಗನ್ನಾಥಶಾಸ್ತ್ರಿ ಕೂಡಲಿ, ೨೦೦೬, ತುರಂಗಭಾರತ, ಪೀಠಿಕೆ ಪುಟ XIV

೧೮. ಮುಗಳಿ. ರಂ.ಶ್ರೀ. ೧೯೯೦, ಕನ್ನಡ ಸಾಹಿತ್ಯ ಚರಿತ್ರೆ, ಕಿರಿಯ ಆವೃತ್ತಿ, ಪುಟ ೧೬೨

೧೯. ಅದೇ ಪುಟ.

೨೦. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ೧೯೭೯, ಪುಟ ೧೩೮

೨೧. ಅದೇ ಪುಟ. ೧೩೯

೨೨. ವಿವೇಕರೈ ೨೦೦೬, ನೇಮಿಚಂದ್ರ ಸಂಪುಟ, ಸಂ.ಜವರೇಗೌಡ, ಪುಟ XXII

೨೩. ಅದೇ ಪುಟ XXVII

೨೪. ಜಯಚಂದ್ರ ಎಂ.ಎ. ೨೦೦೬, ಸಾಳ್ವ ಸಂಪುಟ. ಪುಟ XXII

೨೫. ಅದೇ ಪುಟ XIX

೨೬. ಅದೇ ಪುಟ.

೨೭. ಶಿರೂರ ಬಿ.ವಿ. ೨೦೦೭, ಮೂರನೆಯ ಮಂಗರಸ ಸಂಪುಟ(ಸಂ) ಪುಟ ३ಆ

೨೮. ವಿವೇಕರೈ, ೨೦೦೬, ಬಂಧುವರ್ಮ ಸಂಪುಟ, ಪುಟ XII

ಅಧ್ಯಾಯ-೪

ರನ್ನನ ಸಾಹಸ ಭೀಮ ವಿಜಯಂ ಒಂದು ಪುನರ್ಲೇಖ

ಅಧ್ಯಾಯ-4.

ರನ್ನನ 'ಸಾಹಸ ಭೀಮ ವಿಜಯಂ' ಒಂದು ಪುನರ್ಲೇಖ.

ರನ್ನನು ಕಾವ್ಯ ರಚನೆ ಮಾಡುವ ಕಾಲಕ್ಕೆ ಪಂಪನು ಮಹಾಭಾರತವನ್ನು ಭಾಷಾಂತರ ಮಾಡಿ ಯಶಸ್ವಿಯಾಗಿದ್ದನು. ಹೆಚ್ಚುಕಡಿಮೆ ಅದೇ ಕಾಲದಲ್ಲಿ ವಡ್ಡಾರಾಧನೆ ಎಂಬ ಗದ್ಯಕೃತಿ ಜೈನಧರ್ಮದ ಹಿನ್ನೆಲೆಯಲ್ಲಿ ರಚನೆಗೊಂಡಿತ್ತು. ಹೀಗೆ ರನ್ನ ಶಿವಕೋಟ್ಯಾಚಾರ್ಯ ಮತ್ತು ಪಂಪರ ಮಹಾಕೃತಿಗಳನ್ನು ಮೀರಿ ಮೆರೆಯಬೇಕಾಗಿದೆ. ಈ ಇಬ್ಬರ ವಿಶಿಷ್ಟ ಕಾವ್ಯಗಳನ್ನು ಮೀರಿಸುವಷ್ಟು ಶಕ್ತಿಶಾಲಿಯಾಗಿ ಬರೆಯುವುದು ಸಾಹಸವೇ ಸರಿ. ಕೊನೆಯ ಪಕ್ಷ ಪಂಡಿತರು ಮೆಚ್ಚುವಷ್ಟು ಪ್ರೌಢತೆಯಿಂದ ರನ್ನ ಬರೆಯಬೇಕಾಗಿತ್ತು. ಆದ್ದರಿಂದ ಅವನು ತನ್ನ ಕಾವ್ಯ ರಚನೆಯಲ್ಲಿ ಒಂದು ವಿಶಿಷ್ಟ ತಂತ್ರವನ್ನು ತರುವುದರ ಮೂಲಕ ತನ್ನ ಹೊಸ ಮಾರ್ಗವನ್ನು ಕಂಡುಕೊಳ್ಳುತ್ತಾನೆ. ಅದೇ ಸಿಂಹಾವಲೋಕನ ಕ್ರಮ. ಈ ಕ್ರಮವೇ ಅವನ ಕಾವ್ಯ ವಿದ್ವತ್ ವಲಯದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಯಿತು.

"ರನ್ನ ಆಯ್ದುಕೊಂಡ ಅಭಿವ್ಯಕ್ತಿ ಮಾರ್ಗ ಪಂಪ ಬೆಳೆಸಿದ ಚಂಪೂವೇ ಕಥಾ ನಾಯಕನನ್ನು ಅಂದಿನ ಪ್ರಭುವಿಗೆ ಹೋಲಿಸಿದ ರೀತಿಯೇ ಕಾವ್ಯದ ಈ ಚೌಕಟ್ಟಿನಲ್ಲಿ ಮಾತ್ರವಲ್ಲ ಬಳಸಿದ ವಸ್ತುವಿನ ನಿರ್ವಹಣೆಯಲ್ಲಿ ಸಹ ಅವನು ಬಹುಮಟ್ಟಿಗೆ ಪಂಪನನ್ನೇ ಅನುಸರಿಸಿದ. ಇದು ಎಷ್ಟರ ಮಟ್ಟಿಗೆ ಎಂದರೆ ಗದಾಯುದ್ಧಕ್ಕೆ ಬಳಸಿದ ಕಥಾವಿನ್ಯಾಸದ ತಳಹದಿ ಎನ್ನುವುದಕ್ಕಿಂತ ಪಂಪನದು ಎನ್ನುವುದೇ ಉಚಿತ. ಪಂಪನಿಗೆ ಮಹಾಭಾರತವೇ ಮೂಲವಾದರೂ ಅದರ ಕಥೆಯು ಪಂಪನದಕ್ಕೂ ಅಲ್ಲಲ್ಲಿ ಕೆಲವು ವ್ಯತ್ಯಾಸಗಳಿವೆ. ವೈಶಂಪಾಯನ ಸರೋವರದಲ್ಲಿ ಮರೆಸಿಕೊಳ್ಳುವಂತೆ ಭೀಷ್ಮರಾದೇಶ, ಮರುಳ್‌ಗಳ ಪ್ರಸಂಗ, ಬಂಧುಮಿತ್ರರ ಕಳೆಬರಹಗಳೆದುರು ದುಃಖಿಸುವ ಸನ್ನಿವೇಶ, ಅಶ್ವತ್ಥಾಮನ ಲಕ್ಷ್ಮೀಗರ್ಹಣೆ ಇವು ಅಂಥ ಕೆಲವು ಮುಖ್ಯ ವ್ಯತ್ಯಾಸಗಳು. ಇಲ್ಲೆಲ್ಲ ರನ್ನ ಪಂಪನ ಹಿಂದೆ ನಿಂತಿದ್ದಾನೆ. ಗದಾಯುದ್ಧದ ಕಥಾಭಾಗವು ಸ್ವಲ್ಪ ಅದರಲ್ಲಿನ ಮುಕ್ಕಾಲು ಪಾಲು ಮಹಾಭಾರತದಲ್ಲಿ ಇಲ್ಲವೆಂದೇ ಹೇಳಬೇಕು. ಗದಾಯುದ್ಧದಲ್ಲಿ ಬರುವ ಹೃದಯ ವಿದ್ರಾವಕವಾದ ಪ್ರಲಾಪಗಳು ಸ್ವಾರಸ್ಯವುಳ್ಳ ಸನ್ನಿವೇಶಗಳಿಗೂ ಸೂಚನೆಯನ್ನು ನಾವು ಪಂಪಭಾರತದಲ್ಲಿಯೇ ಕಾಣಬಹುದು."[1]

ಇದುವರೆವಿಗೂ ರನ್ನನ ಗದಾಯುದ್ಧ ಕುರುತು ಸಾಕಷ್ಟು ಅಧ್ಯಯನಗಳು ನಡೆದಿವೆ. ಈ ಅಧ್ಯಯನಗಳಲ್ಲಿ ಪಂಪ ಮತ್ತು ರನ್ನರ ಕಾವ್ಯಗಳ ತೌಲನಿಕ ಅಧ್ಯಯನಗಳು ಮುಖ್ಯವಾದವುಗಳಾಗಿವೆ. ಆದರೆ ಇಲ್ಲಿ ಭಾಷಾಂತರ ಮಾದರಿಗಳಲ್ಲಿ ಒಂದಾದ 'ಪುನರ್ಲೇಖ'

ಪ್ರಕ್ರಿಯೆಯ ಹಿನ್ನೆಲೆಯಲ್ಲಿ ರನ್ನನ ಗದಾಯುದ್ಧ ಹೇಗೆ ಪುನರ್ಲೇಖಗೊಂಡಿದೆ ಎಂದು ಇಲ್ಲಿ ನೋಡಲಾಗುವುದು. ಇದಕ್ಕೆ ಹಿನ್ನೆಲೆಯಾಗಿ ಪಂಪನ ವಿಕ್ರಮಾರ್ಜುನ ವಿಜಯದ ಪ್ರಭಾವ ಎಷ್ಟು ಮತ್ತು ಹೇಗೆ ಆಗಿದೆ ಎಂಬುದನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಹಾಗೂ ತಾನು ಮಾಡಿಕೊಂಡ ಕಥಾವಸ್ತುವಿನ ಬದಲಾವಣೆ, ಸಂಗ್ರಹ, ವಿಸ್ತರಣೆ, ಭಾವದ ಸಂಗ್ರಹ-ವಿಸ್ತರಣೆ, ಸ್ಥಾನಪಲ್ಲಟ, ಶೈಲಿಯಲ್ಲಿ ಬದಲಾವಣೆ ಹಾಗೂ ರನ್ನನ ಸ್ವಂತಿಕೆಯ ವರ್ಣನೆಗಳನ್ನು ಇಲ್ಲಿ ಅಧ್ಯಯನ ಮಾಡಲಾಗುವುದು.

.ರನ್ನನ ಗದಾಯುದ್ಧ ಪ್ರಾರಂಭವಾಗುವುದು ಪಂಪನ ಕಾವ್ಯದ ಕೊನೆಯ ಆಶ್ವಾಸದ ಗಧಾಯುದ್ಧ ಕಥಾ ಪ್ರಸಂಗದಿಂದ ರನ್ನನೇ ಹೇಳಿಕೊಂಡಿರುವಂತೆ ಅವನದು ಸಿಂಹಾವಲೋಕನ ಕ್ರಮ. ಪಂಪ ಹಿರಿದಾದ ವ್ಯಾಸ ಭಾರತ ಕಥೆಯನ್ನು ಮೈಗೆಡಲೀಯದೆ ಸಂಗ್ರಹಿಸಿ ಅದರಲ್ಲಿಯೇ ಹಿರಿದಾದ ಅರ್ಥವನ್ನು ಪ್ರಕಟಿಸಲು ಪ್ರಯತ್ನಿಸಿದರೆ- ರನ್ನ ಚಿಕ್ಕದಾಗಿರುವುದನ್ನು ವಿಸ್ತರಿಸುತ್ತಾನೆ. ಹಾಗೂ ಪಂಪ ವಿಸ್ತರಿಸಿರುವುದನ್ನು ಅಗತ್ಯಕ್ಕನುಗುಣವಾಗಿ ಸಂಗ್ರಹಿಸಿದ್ದಾನೆ. ಪಂಪನಲ್ಲಿ ಕೊನೆಯ ಎರಡು ಆಶ್ವಾಸಗಳಲ್ಲಿ ಅಡಗಿರುವದನ್ನು ರನ್ನ ಹತ್ತು ಆಶ್ವಾಸಗಳಲ್ಲಿ ವಿಸ್ತರಿಸಿದ್ದಾನೆ. ವಿಸ್ತರಿಸುವುದು ರನ್ನನ ಪ್ರತಿಭೆಯ ಲಕ್ಷಣ. ಆಗ ಸಹಜವಾಗಿಯೇ ವಾಗ್ದೇವಿಯ ಭಂಡಾರ ಮುದ್ರೆಯನ್ನು ಒಡೆಯಬೇಕಾಗುತ್ತದೆ. 'ಗೂಢಾರದ ಕವಿಯಂತೆ ಮುಚ್ಚಿಹೋದ ಕವಿಯುಂ ಕವಿಯೇ' ಎಂದು ಹಾಸ್ಯ ಮಾಡುತ್ತಾನೆ.

ರನ್ನನಲ್ಲಿ ಮುಚ್ಚುಮರೆಯಿಲ್ಲ. ವರ್ಣನೆಗೆ ಸದಾಸಿದ್ಧ. ಇದಕ್ಕೆ ಕೊಡಬಹುದಾದ ನಿದರ್ಶನವೆಂದರೆ ಪಂಪ ತನ್ನ ವಿಕ್ರಮಾರ್ಜುನ ವಿಜಯದ 13ನೇ ಆಶ್ವಾಸದಲ್ಲಿ 3-4 ಪದ್ಯಗಳಲ್ಲಿ ವರ್ಣಿಸಿರುವ ದುರ್ಯೋಧನನ ಪ್ರಲಾಪವನ್ನು ರನ್ನ ಸುಮಾರು 16 ಕಂದಪದ್ಯಗಳಲ್ಲಿ ವಿಸ್ತರಿಸಿದ್ದಾನೆ. ಈ ಪ್ರಸಂಗದ ಸಂಗ್ರಹ ರೂಪವನ್ನು ಇಲ್ಲಿ ಮಾದರಿಗಾಗಿ ವಿವರಿಸಲಾಗಿದೆ. ಈ ಪ್ರಸಂಗವನ್ನು ರನ್ನ ಪಂಪನಿಂದ ಕೃತಿಚೌರ್ಯ ಮಾಡಿದ್ದಾನೆಂದು ಭಾವಿಸಬೇಕಾಗಿಲ್ಲ. ಭಾಷಾಂತರದ ಹಲವು ಮಾದರಿಗಳಲ್ಲಿ ಒಂದಾದ ಪುನರ್ಲೇಖ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಹೇಗೆ ಹೊಸ ಭಾವನೆಗಳನ್ನು ಸೇರಿಸಿ ಕಥೆಯನ್ನು ಬೆಳೆಸಿದ್ದಾನೆಂದು ಕಂಡುಕೊಳ್ಳಬಹುದು. ಪಂಪನ ವಿಕ್ರಮರ್ಜುನ ವಿಜಯ ಕಾವ್ಯದಿಂದ ರನ್ನ ಪುನರ್ಲೇಖ ಮಾಡುವದರ ಮೂಲಕ ಹೇಗೆ ಬದಲಾವಣೆಗಳನ್ನು ತಂದಿದ್ದಾನೆಂದು ಕೆಳಗಿನ ನಿರ್ದೇಶನ ಮೂಲಕ ವಿವರಿಸಿ ರನ್ನನ ಪುನರ್ಲೇಖ ಮಾದರಿಯನ್ನು ಭಾಷಾಂತರ ನೆಲೆಯಲ್ಲಿ ಕಂಡುಕೊಳ್ಳಬಹುದು.

4:1 ರನ್ನನ ಪುನರ್ಲೇಖ ಕ್ರಿಯೆಗಳು:

ರಣರಂಗದಲ್ಲಿ ಸಂಜಯನೊಡನೆ ನಡೆಯುತ್ತಿರುವಾಗ ದುರ್ಯೋಧನ ಕರ್ಣನ ಶವವನ್ನು ನೋಡುತ್ತಿದ್ದ ಹಾಗೆ ಮೂರ್ಛೆ ಹೋಗುತ್ತಾನೆ. ನಂತರ ಎಚ್ಚೆತ್ತು ಕರ್ಣನ ಕಳೇಬರವನ್ನು ಮುಂದಿಟ್ಟುಕೊಂಡು ಗೋಳಾಡುವ ಪ್ರಸಂಗ ಪಂಪ ರನ್ನರ ಕಾವ್ಯದಲ್ಲಿ ಅದ್ಭುತ ಶೋಕ ಸನ್ನಿವೇಶವಾಗಿದೆ. ಅಂತ ಸನ್ನಿವೇಶದ ಒಂದು ನಿದರ್ಶನವನ್ನು ಹಾಗೂ ಇತರೆ ಘಟನೆಗಳ ಬದಲಾವಣೆಗಳನ್ನು ಮುಂದೆ ವಿವರಿಸಲಾಗಿದೆ.

ಮ॥ ಅರಿಯಂ ಸೋದರನೆಂದು ಧರ್ಮತನಯಂ ನಿರ್ವ್ಯಾಜದಿಂ ನಿನ್ನನಾ
ನರಿವೆಂ ಮುನ್ನರೆದಿರ್ದುಮೆನ್ನರಸನಾನೇಕಿತ್ತೆನಿಲ್ಲೇಕೆ ಪೇ
ಳರಿ ಪಲ್ಗೊಲ್ದೆನುಮಿಲ್ಲ ಕಾರ್ಯವಶದಿಂ ಕೂರ್ಪಂತೆವೋಲ್ ನಿನ್ನನಾಂ
ನೆರಿ ಕೊಂದೆಂ ಮುಳಿಸಿಂದಮಂಗನೃಪತೀ ಕೌಂತೇಯರೇಂ ಕೊಂದರೇ॥ ಪಂ.ಭಾ.13-5

ಒಡವುಟ್ಟಿದನೆಂದರೆದೊಡೆ/
ಕುಡುಗುಂ ರಾಜ್ಯಮನೆ ಧರ್ಮತನಯಂ ನಿನಗಾಂ
ಕುಡಲಾರ್ತೆನಿಲ್ಲ ರಾಜ್ಯ/
ಕ್ಕೊಡೆಯನನರಿಯುತ್ತುಮಿರ್ದೆನಂಗಾಧಿಪತೀ। ಗ.ಯು. 5-19

ಭಾಷಾಂತರ ನೆಲೆಯಲ್ಲಿ ಈ ಮೇಲಿನ ಸನ್ನಿವೇಶವನ್ನು ಗಮನಿಸಿದಾಗ ರನ್ನ ಹೇಗೆ ಬದಲಾವಣೆಗಳನ್ನು ತರುತ್ತಾನೆಂದು ತಿಳಿಯಬಹುದು. ಎಂದರೆ ದುರ್ಯೋಧನನು ಕರ್ಣನ ಕಳೇಬರದ ಎದರು ಕರ್ಣ ನೀನು ಧರ್ಮರಾಯನಿಗೆ ತಮ್ಮನೆಂದು ಗೊತ್ತಾಗಿದ್ದರೆ ಅವನು ನಿಜವಾಗಿಯೂ ನಿನಗೆ ರಾಜ್ಯವನ್ನು ಒಪ್ಪಿಸುತ್ತಿದ್ದನು. ಆದರೆ ನಾನು ನಿನ್ನ ಜನ್ಮ ವೃತ್ತಾಂತವನ್ನು ತಿಳಿದೂ ನನ್ನ ಸ್ವಾರ್ಥದ ಸಾಧನೆಯಿಂದಾಗಿ ಕೊಡಲಾರದೆ ನಿನ್ನ ಸಾವಿಗೆ ಕಾರಣನಾದೆ ನಾನೆಂತಹ ನೀಚ ಎಂಬುದು ಮೇಲಿನ ಎರಡು ಪದ್ಯಗಳಿರುವ ಭಾವ. ಮೊದಲನೇದಾಗಿ ರನ್ನ ಹೇಳುವ ರೀತಿಯಲ್ಲಿ ಅಂದರೆ ಪಂಪನ ಛಂದಿಸ್ಸಿಗಿಂತ ಬೇರೆ ಛಂದಿಸ್ಸಿನಲ್ಲಿ ಹೇಳಿರುವುದು. ಅಂದರೆ ವೃತ್ತದಲ್ಲಿ ಇರುವದನ್ನು ರನ್ನ ಕಂದ ಪದ್ಯಕ್ಕೆ ಬದಲಾಯಿಸಿದ್ದಾನೆ. ಈ ಮೇಲಿನ ಎರಡು ಪದ್ಯಗಳಲ್ಲಿನ ಪ್ರಸಂಗದಲ್ಲಿ ರನ್ನ ದುರ್ಯೋಧನ ಕರ್ಣರ ಸಂಬಂಧ ಚಿತ್ರಣದಲ್ಲಿ ರನ್ನ ಧುರ್ಯೋಧನ ಭಾಯಿಯಲ್ಲಿ ಕರ್ಣನನ್ನು ಅಂಗಾಧಿಪತಿ ಎಂದು ಕರೆಯುವಲ್ಲಿ ಕರ್ಣನ ಬಗೆಗೆ ಧೋರಣೆ ಎಂತಹದ್ದೆಂದು ಅರುವಿಗೆ ಬರುತ್ತದೆ. ಪಂಪನ ದೃಷ್ಟಿಯಲ್ಲಿ ದುರ್ಯೋಧನಿಗೆ ಕರ್ಣ

ಒಬ್ಬ ಗೆಳೆಯ ಮಾತ್ರ ಆದರೆ ರನ್ನ ಚಿತ್ರಿಸುವ ದುರ್ಯೋಧನನಿಗೆ ಅವನು ಒಬ್ಬ ಅಂಗರಾಜ ಅಂದರೆ ರಾಜ್ಯದ ಒಡೆಯತನ ಒಂದು ಭಾಗವೆಂಬ ಭಾವ. ಇಡಿ ಕಾವ್ಯದಲ್ಲಿ ರನ್ನ ಅಂಗಾಧಿಪತಿ ಎಂದು ಕರೆಯುತ್ತಾನೆ. ಆದರೆ ಪಂಪ ಒಂದು ಕಡೇ ಮಾತ್ರ ಅಂಗವಲ್ಲಬ ಎಂದಿದ್ದಾನೆ. ಇಲ್ಲಿ ಗಮನಿಸಬೇಕಾದ ಅಂಶ ಎಂದರೆ ಭಾಷಾಂತರ ನೆಲೆಯಲ್ಲಿ ಒಂದೇ ಸನ್ನಿವೇಶವನ್ನು ಮತ್ತೊಬ್ಬ ಕವಿ ಗ್ರಹಿಕೆಯಲ್ಲಿ ಹೇಗೆ ಬದಲಾವಣೆಗಳು ಆಗುತ್ತವೆ. ಎಂಬುದನ್ನು ಕಂಡುಕೊಳ್ಳಬಹುದು. ಅಲ್ಲದೇ ಅರ್ಥ ವ್ಯತ್ಯಾಸವನ್ನು ಮನಗಾಣಬಹುದು.

ಹೀಗೆ ರನ್ನ ಹಲವು ಹತ್ತು ಪದ್ಯಗಳಲ್ಲಿ ದುರ್ಯೋಧನನ ಪ್ರಲಾಪವನ್ನು ವಿಸ್ತರಿಸಿದ್ದಾನೆ. ಇಡೀ ಕನ್ನಡ ಸಾಹಿತ್ಯದಲ್ಲಿಯೇ ಪಂಪ ರನ್ನರು ಚಿತ್ರಿಸಿರುವ ಈ ಪ್ರಸಂಗ ಅದ್ಭುತ ಶೋಕ ಪ್ರಸಂಗಗಳಾಗಿವೆ. ಇಲ್ಲಿ ರನ್ನನ ಮೇಲೆ ಪಂಪನ ಪ್ರಭಾವವನ್ನು ಮನಗಾಣಬಹುದು.

ರನ್ನ ಈ ಪ್ರಸಂಗವನ್ನು ಪಂಪನಿಂದ ಪ್ರೇರಿತನಾಗಿ ಮತ್ತೆ ಬರೆದುದರಿಂದ ಒಂದು ಲೌಕಿಕ ಸಂವೇದನಾಶೀಲ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾನೆ. ವ್ಯಾಸ ಭಾರತದಲ್ಲಿ ದುರ್ಯೋಧನನ ಪಾತ್ರ ನೀಚತನದ ಅಪರಾವತಾರವಾದರೆ ಪಂಪನ ದುರ್ಯೋಧನ ಸ್ವಲ್ಪ ಸಭ್ಯ ಮತ್ತು ಉದಾರಿಯಾಗಿ ಕಾಣುತ್ತಾನೆ. ಅವನ ವ್ಯಕ್ತಿತ್ವವನ್ನು ಏನ್‌ಭಿಮಾನಧನಂ ಸುಯೋಧನಂ ಎಂದು ಉದ್ಧಾರವೆತ್ತಿದ್ದಾನೆ.

ಈ ಮೇಲಿನ ನಿದರ್ಶನದಲ್ಲಿ ಪಂಪ ರನ್ನರ ಧುರ್ಯೋಧನ ಬಗ್ಗೆ ಹೊಂದಿರುವ ಧೋರಣೆ ಎಂಥ ಎಂದು ಕಂಡು ಕೊಳ್ಳಬಹುದು ಇಂತಹ ಹಲವಾರು ನಿದರ್ಶನಗಳು ರನ್ನ ಕಾವ್ಯದಲ್ಲಿ ದೊರೆಯುತ್ತವೆ. ಈ ಮುಂದಿನ ಕೇಲವು ಪ್ರಸಂಗಳನ್ನು ಭಾಷಾಂತರದ ಒಂದು ಮಾದರಿಯಾದ ಪುನಲೇಖ ಪ್ರಕ್ರಿಯ ಹಿನ್ನೆಯಲ್ಲಿ ವಿಶ್ಲೇಷಣೆಗೆ ಆಯ್ಕೆ ಮಾಡಿಕೊಂಡು ವಿವರಿಸಲಾಗುವುದು. ಅಲ್ಲದೇ ಈಗಾಗಲೇ ಪಂಪನ ರನ್ನರ ಬಗೆಗೆ ತೌಲನಿಕ ಅಧ್ಯಯದಲ್ಲಿ ಹಲುವಾರು ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಆದರೆ ಇಲ್ಲಿ ಅದನ್ನು ಭಾಷಾಂತರದ ನೆಲೆಯ ಹಿನ್ನೆಲೆಯಲ್ಲಿ ವಿಶ್ಲೇಶಿಸುರುವದರಿಂದ ರನ್ನನ ಬರವಣೆಗೆ ಯಾವು ಶ್ರೇಣಿಯದ್ದೆಂದು ಕಂಡುಕೊಳ್ಳಬಹುದು.

ಪುನರ್ಲೇಖದ ಮಹತ್ವವನ್ನು ಹೆಚ್ಚು ಸ್ಪಷ್ಟಪಡಿಸಿಕೊಳ್ಳಲು ಪಂಪ ರನ್ನರ ಈ ಕೆಳಗಿನ ನಿದರ್ಶನವನ್ನು ನೋಡಬಹುದು. ಪಂಪನಲ್ಲಿ ಕರ್ಣಾರ್ಜುನರ ಯುದ್ಧ ಸಂದರ್ಭದಲ್ಲಿ ಇಬ್ಬರಲ್ಲೂ ವಾಕ್‌ಸಮರ ನಡೆಯುತ್ತಿರುವಾಗ ಕರ್ಣ ಹೇಳುವ ಈ ಮಾತು

ಒಡಲುಂ ಪ್ರಾಣಮುಮೆಂಬಿವು
ಕಿಡಲಾದುವು ಜಸಮದೊಂದೆ ಕಿಡದದನಾಂಬ

ಲ್ವಿಡಿವಿಡಿದು ನೆಗಳ್ದನು ಳಿದಳಿ

ವಡೆಮಾತಂ ಮಾಡಿ ನೀನೇ ಕೊಮ್ಮನೆ ನುಡಿವೈ (ಪಂಪ ವಿ.ವಿ.12-181)

ಅಂದರೆ ಶರೀರ ಪ್ರಾಣವೆಂಬಿವು ನಾಶವಾಗತಕ್ಕವು. ಆದರೆ ಯಶಸ್ಸು ಕೀತಿ ಯಾವತ್ತೂ ಕೆಡದೇ ಇರುವಂತಹವು. ಅಂತಹವನ್ನು ನಂಬಿ ಕರ್ಣ ಸುಪ್ರಸಿದ್ಧನಾಗಿದ್ದಾನೆ. ಈ ಮಾತು ರನ್ನರಲ್ಲಿ ಬೇರೆ ಸಂದರ್ಭದಲ್ಲಿ ಅಂದರೆ ದ್ರೌಪದಿಯ ಬಾಯಲ್ಲಿ ಭೀಮನನ್ನು ಪ್ರಶಂಸಿಸುವ ಸಂದರ್ಭದಲ್ಲಿ ಹೇಳಿಸಿ ಮಹತ್ವ ಸಾಧಿಸಿದ್ದಾನೆ.

ಒಡಲೊಡಮೆಯೆಂಬಿವೆರಡುಂ

ಕೆಡಲಿರ್ಪುವು ಕಿಡದ ಕಸವರಂ ಜಸಮದರಿಂ

ಕೆಡುವೊಡಲೊಡಮೆಯನೆಂದುಂ

ಕೆಡದೊಡಮೆಗೆ ಮರುಗುಡುವುದಿರಿವ ಬೆಡಂಗಾ। ಗದಾಯುದ್ಧ 2-4

ರನ್ನ ಬರೆದಿರುವ ಈ ಪದ್ಯ ಪಂಪನ ಪುನರ್ಲೇಖ ಎಂಬುದು ಸ್ಪಷ್ಟವಾಗಿ ಗೋಚರಿಸುವುದರ ಜೊತೆಗೆ ಬೇರೆ ಪಾತ್ರದ ಮೂಲಕ ಅಂದರೆ ಕರ್ಣನ ಬಾಯಲ್ಲಿ ಬರುವ ಮಾತುಗಳು ದ್ರೌಪದಿಯ ಬಾಯಲ್ಲಿ ಬರುವ ಕ್ರಿಯೆ ಭಾಷಾಂತರ ಪ್ರಕ್ರಿಯೆಯನ್ನು ಸೂಚಿಸುತ್ತದೆ. ಆದ್ದರಿಂದ ಇದೆಲ್ಲವೂ ಇಲ್ಲಿನ ಮಹತ್ವವೆಂದು ಹೇಳಬಹುದು.

ರಣರಂಗದಲ್ಲಿ ಧೃತರಾಷ್ಟ್ರ ಗಾಂಧಾರಿಯರು ದುರ್ಯೋಧನನ್ನು ಭೇಟಿಯಾಗುವ ಸನ್ನಿವೇಶವನ್ನು ಇಬ್ಬರು ಕವಿಗಳು ವರ್ಣಿಸಿದ್ದಾರೆ. ಪಂಪನ ಪ್ರಕಾರ 'ದುಶ್ಯಾಸನನ ಸಾವಂ ನೆನೆದು ತಾಯ್ತಂದೆಯ ಮೊಗಮಂ ನೋಡಲ್ ನಾಣ್ಚಿ'

ಆನುಂ ದುಶ್ಯಾಸನನುಂ/

ಕಾನೀನನುಮೊಡನೆ ಪೋಗಿ ಬೀಳ್ಕೊಂಡು ರಣ।

ಸ್ಥಾನಕ್ಕೆ ಪೋದೆವಿಮ್ಮುಗು/

ರ್ದೇನೆಂದಾಂ ನಾಣ್ಚದಿವರ ಮೊಗಮಂ ನೋಳ್ಪೆಂ॥ ಪಂ.ಭಾ.(13-7)

ನಾನು ದುಶ್ಯಾಸನನೂ ತಂದೆತಾಯಿಗಳ ಆಶೀರ್ವಾದವನ್ನು ಪಡೆದು ಒಟ್ಟಿಗೆ ಯುದ್ಧರಂಗಕ್ಕೆ ಹೋಗಿದ್ದೆವು. ಈಗ ನಿನ್ನ ತಮ್ಮನೆಲ್ಲಿ ಎಂದು ಕೇಳಿದರೆ ಈ ನಾಚಿಕೆಯಿಲ್ಲದ ನನ್ನ ಮುಖವನ್ನು ಹೇಗೆ ತೋರಿಸಿಕೊಳ್ಳಲಿ ಎಂದು ಮನನೊಂದುಕೊಳ್ಳುತ್ತಿರಲು ಧೃತರಾಷ್ಟ್ರ ದುರ್ಯೋಧನನಿಗೆ ಹೀಗೆ ಹೇಳುತ್ತಾನೆ.

ನೀನುಳ್ಳೊಡೆಲ್ಲರೊಳರೆಮ/

ಗೇನುಮಳಲ್ ಮನದೊಳಿಲ್ಲದೆಂತನೆ ಮಗನೇ।

ಭಾನುವೆ ಸಾಲದೆ ಪಗಲೆನಿ/

ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ॥ ಪಂ.ಭಾ.(13-11)

ಎಂದ ನಂತರ ಗಾಂಧಾರಿ ಈ ರೀತಿ ಹೇಳುತ್ತಾಳೆ.

ಚಂ॥ ಕುರುಕುಳ ನಂದನಂ ಪವನ ನಂದನನೆಂಬ ಮದಾಂಧ ಗಂಧ ಸಿಂ

ಧುರಮೆ ಕರುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ।

ರ್ಮರನುಳಿವಂತೆ ನೀನುಳಿದೆಯಿನ್ನಿರೆವನ್ನರುಮಿಲ್ಲ ಮುತ್ತರುಂ

ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್॥ಪಂ.ಭಾ.(13-12)

ಎಂದು ತಂದೆ ತಾಯಿಗಳು ಗೋಳಿಡಲು ಅಭಿಮಾನಧನನಾದ ದುರ್ಯೋಧನನು ಹೀಗೆಂದು ಹೇಳುವನು. ದುಶ್ಯಾಸನನ ರಕ್ತಪಾನದಿಂದ ಸೊಕ್ಕಿರುವ ಪಾಪಿಯಾದ ಭೀಮನನ್ನು ಕೊಲ್ಲದೇ ಹೊರತು ಪೃಥೆಯ ಮಕ್ಕಳಲ್ಲಿ ಕೂಡಿ ಬಾಳುವುದಿಲ್ಲ ಎಂದು ನಿರ್ದಾಕ್ಷಿಣ್ಯವಾಗಿ ಹೇಳುತ್ತಾನೆ. ಅಲ್ಲದೆ 'ಕರ್ಣನುಗ್ರ ರಥಮಂ ಮುಂ ನುಂಗಿದೀ ದ್ರೋಹಿಯೊಳ್। ನೆಲದೊಳ್ ಪಂಬಲೆ ಮತ್ತಮೆನ್ನ ಮುಳಿಸಿಂಗಾಂ ಕಾದುವೆಂ ಪೇಸಿದೆಂ ನೆಲಗಂಡಂತೆ ನೆಲಕ್ಕೆ ಗೆಲ್ದೊಡವ್ವದಂ ಚಿಃ ಮತ್ತಮಾನಾಳ್ವೆನೇ॥' ಎಂದು ಮುಂತಾಗಿ ಧೃತರಾಷ್ಟ್ರ ದುರ್ಯೋಧನನ ಸಂಭಾಷಣೆಯನ್ನು ಪಂಪ ಚಿತ್ರಿಸಿದ್ದಾನೆ. ಈ ಪ್ರಸಂಗವನ್ನು ರನ್ನ ಹೇಗೆ ಚಿತ್ರಿಸಿದ್ದಾನೆಂದು ಇಲ್ಲಿ ನೋಡಬಹುದು. ರಣರಂಗದಲ್ಲಿ ದುರ್ಯೋಧನನನ್ನು ಅರಸುತ್ತ ಬರುವ ತಂದೆತಾಯಿಗಳನ್ನು ನೋಡಿ ವಜ್ರಾಘಾತಕ್ಕೆ ಒಳಗಾದ ಕುಲಪರ್ವತದಂತೆ ಕುಸಿದು ನಾಚಿಕೆಯಿಂದ ತಲೆತಗ್ಗಿಸಿ:

ಕಂದ ನಿಜಾನುಜರೆಲ್ಲಿದ

ರೆಂದೆನ್ನಂ ಜನನಿ ಬಂದು ಬೆಸಗೊಂಡೊಡದೇ।

ನೆಂದು ಮುರುಮಾತುಗುಡುವೆಂ/

ಕೊಂದರ್ ಕೌಂತೇಯರೆಂದು ಬಿನ್ನೈಸುವೆನೋ॥ ಗ.ಯು. (3-76)

ಎಂದು ಕಳವಳಗೊಳ್ಳುತ್ತಾನೆ. ಇಲ್ಲಿ ಕಂದ, ಜನನಿ, ಕೌಂತೇಯರ್ ಮೊದಲಾದ ವಿಶಿಷ್ಟ ಪದಗಳಿಂದ ಕವಿ ಧ್ವನಿಪೂರ್ಣತೆಯನ್ನು ಸಾಧಿಸಿದ್ದಾನೆ. ಪುನರ್ಲೇಖದ ಅರ್ಥವಾದ More suitable way ಇಲ್ಲಿ ಕಂಡು ಬರುತ್ತದೆ. ರನ್ನ ತನ್ನ ಕಾವ್ಯದುದ್ದಕ್ಕೂ ಅದನ್ನು ಸಾಧಿಸಿದ್ದಾನೆ. ತಾಯಿ ಗಾಂಧಾರಿ ನನ್ನ ಬಳಿ ಬಂದು ಮಗನೇ ನಿನ್ನ ತಮ್ಮಂದಿರು ಎಲ್ಲಿದ್ದಾರೆ ಎಂದು ಪ್ರಶ್ನಿಸಿದರೆ ಅವರಿಗೆ ನಾನು ಏನೆಂದು ಉತ್ತರವನ್ನು ಕೊಡಲಿ ಕುಂತಿಯ ಮಕ್ಕಳು ಕೊಂದರೆಂದು ಯಾವ ಬಾಯಲ್ಲಿ ಹೇಳಲಿ. ಹೇಳಲಾರೆನೆಂಬ ಭಾವ ಇಲ್ಲಿದೆ. ಗಾಂಧಾರಿಯ ಬಾಯಿಂದ ಕಂದ

ಎಂಬ ಸಂಬೋಧನೆ ಈ ಸನ್ನಿವೇಶದಲ್ಲಿ ದುರ್ಯೋಧನನ ಕರುಳನ್ನು ಕತ್ತರಿಸುವಂತಹದ್ದು. ಮಾತೃ ಹೃದಯದ ವೇದನೆಯನ್ನು ದುರ್ಯೋಧನ ಚೆನ್ನಾಗಿ ಅರಿತಿದ್ದನೆಂಬುದು ವೇದ್ಯವಾಗುತ್ತದೆ.

ನಂತರ ಧೃತರಾಷ್ಟ್ರನು

ಎಮಗಂಧಯಷ್ಟಿಯಾಗಿ/
ರ್ದೆ ಮಗನೆ ನೀನುಳ್ದೊಡೆಲ್ಲಮೊಳವೆಂದಿರೆ ನಿ
ನ್ನುಮನಿರಿಸದೆ ಕುರುವಂಶಾ/
ನಿಮಿತ್ತರಿಮು ಪಾಶಪಾಣಿ ಸವಿನೋಡಿದನೇ ಗ.ಯು. (3-79)

ವೃದ್ಧರೂ ಕುರುಡರೂ ಆದ ನಮಗೆ ಆಶ್ರಯನಾಗಿದ್ದ ನೀನು ಬದುಕಿದ್ದರೆ ಎಲ್ಲರೂ ಬದುಕಿದ್ದಂತೆ ಎಂದು ಗಾಂಧಾರಿ ಶೋಕಿಸುತ್ತಾಳೆ. ಹೀಗೆ ಒಂದು ಶೋಕ ಸನ್ನಿವೇಶವನ್ನು ರನ್ನ ಇನ್ನು ಹಲವು ಪದ್ಯಗಳಲ್ಲಿ ವಿಸ್ತರಿಸಿದ್ದಾನೆ. ಇಬ್ಬರು ಕವಿಗಳು ಚಿತ್ರಿಸಿರುವ ಈ ಪ್ರಸಂಗ ಇಡೀ ಕನ್ನಡ ಸಾಹಿತ್ಯದಲ್ಲಿ ಅಪರೂಪದ ಶೋಕ ಪ್ರಸಂಗವಾಗಿದೆ. ಮೊದಲು ಪಂಪ ಬರೆದುದನ್ನು ರನ್ನ ಮತ್ತೆ ಬರೆದಿದ್ದರೂ ಹೆಚ್ಚು ಮನಮಿಡಿಯುವಂತೆ ರನ್ನನ ಬರವಣಿಗೆ ಇದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಲೌಕಿಕ ಜೀವನದ ಒಂದು ಸಂವೇದನಶೀಲವಾದ ಘಟನೆಯನ್ನು ಮತ್ತೆ ಮತ್ತೆ ಬರೆದರೂ ಅದು ತನ್ನ ಶ್ರೇಷ್ಠತೆಯನ್ನು ಕಳೆದುಕೊಳ್ಳದೇ ರಸಾನುಭವವನ್ನು ತಂದುಕೊಡುತ್ತದೆ.

ಪಂಪನ ಪದ್ಯಗಳಿಗೆ ಪ್ರತಿಬಿಂಬಗಳಂತಿರುವ ಕೆಲವು ಪದ್ಯಗಳು ಗದಾಯುದ್ಧದಲ್ಲಿ ಅಯಾ ಸಂದರ್ಭಗಳಲ್ಲಿಯೇ ಸಿಕ್ಕುತ್ತವೆ. ಇದಕ್ಕೆ ಒಂದೆರಡು ನಿದರ್ಶನಗಳನ್ನು ಇಲ್ಲಿ ಕೊಡಬಹುದು. ಪಂಪಭಾರತದಲ್ಲಿ ಕರ್ಣನನ್ನು ಕುರಿತು ದುಃಖಿಸುತ್ತಾ ದುರ್ಯೋಧನನು ಅವನ ಉಪಕಾರವನ್ನೂ ತನ್ನ ಕೃತಜ್ಞತೆಯನ್ನೂ ಹೀಗೆ ನೆನೆಯುವನು :

ನೆಲನಂ ಕೊಟ್ಟನಿನಾತ್ಮಜಾತನೆನಗಾಂ ತಕ್ಕೂರ್ಮೆಯಿಂದಂ ಜಳಾಂ ।
ಜಳಿಯಂ ಕೊಟ್ಟನುಮಿಲ್ಲ ಸೂರ್ಯತನಯಂ ತೇಜೋಗ್ನಿಯಿಂದಂ ದ್ವಿಷ॥
ದ್ಬಲಮಂ ಸುಟ್ಟನುದಾತ್ತ ಪುಣ್ಯನವನಂ ಚೆನ್ನಾಗ್ನಿಯಂ ಸುಟ್ಟೆನಿ ।
ಲ್ಲೊಲವಿಂದಿಂತೆರ್ದೆ ಮುಟ್ಟೆ ಕೂರ್ತನೊಳನೇ ಕರ್ಣಂಗೆ ಧುರ್ಯೋಧನಂ ॥

ಪಂ.ಭಾ(13-60)

ಎಂದು ನೊಂದು ನುಡಿದ ದುರ್ಯೋಧನನಿಗೆ

ಕೊಟ್ಟೆ ಕೀರ್ಚನುದಗ್ರ ಶೋಕ ಶಿಖಿಯಂ ಕಣ್ಣೀರ್ಗಳಿಂದೆಯ್ದೆ ನೀ ।
ಗೊರ್ಟ್ಟೆ ಸೂರ್ಯ ಸುತಂಗೆ ಲೌಕಿಕಮನೇನೀಂ ದಾಂಟಿದ್ಯೆ ಮೋಟ್ಟು ಸೀ ॥

ಳ್ದೊಟ್ಟಂ ವೈರಿಯೊಡ್ಡಿ ತತ್ಶಿಶಿತದಿಂದಾತನಂಗೆ ನೀಂ ಕೂರ್ಪೊಡೇ ।
ಗ್ಗಟ್ಟುತ್ತಿನ್ನಡೆ ಮಾಡು ತದ್ದ್ವಿಜ ಗಣಕ್ಕಾಹಾರಮಂ ಭೂಪತೀ ॥ ಪಂ.ಭಾ. (13-61)

ಎಂದು ಸಂಜಯನು ಹೇಳಿ 'ಪೆರ್ಚಿದ ಶೋಕರಸಮಂ ಕೋಪರಸದ ಮೇಲಿಕ್ಕುವನು'
.ರನ್ನ ಇದೇ ನಿರೂಪಣೆಯನ್ನೇ ಹೇಗೆ ಪುನರ್ಲೇಕಿಸಿದ್ದಾನೆಂಬುದನ್ನು ನೋಡಬಹುದು.
ರನ್ನನಲ್ಲಿ :

ಕೆಳಯಂಗಾಯ್ತು ಸುಮೋಕ್ಷಮಾಗದೆನಗಂ ಬಾಷ್ಪಾಂಬು ಮೋಕ್ಷಂ ಧರಾ ।
ತಳಯಂ ಕೊಟ್ಟನಿವಂ ಜಳಾಂವಳಿಯುಮಂ ನಾಂ ಕೊಟ್ಟೆನಿಲ್ಲನ್ಯಮಂ ॥
ಡಳಮಂ ಸುಟ್ಟನಿವಂ ಪ್ರತಾಪ ಶಿಖಿಯಿಂದಾನೀತನಂ ಸತ್ಕ್ರಿಯಾ ।
ನಳಿನಿಂ ಸುಟ್ಟೆನುಮಿಲ್ಲ ಮತ್ಪ್ರಿಯತಮಂ ಕರ್ಣಂಗಿದೇಂ ಕೂರ್ತನೋ ॥
ಗ.ಯು. (5-31)

ಎನ್ನಲು ಸಂಜಯ ದೇವಾ ನಿಮಿಂತೇಕೆ ಪಳಿಯಿಸುವಿರೆಂದು

.ಜಲದಾನಕ್ರಿಯೆಯಿಂ ವಾ ।
ಗ್ವಲದಿಂ ಕೋಪಾಗ್ನಿಯಿಂದೆ ದಹನಕ್ರಿಯೆಯಂ ॥
ಕೆಳಯಂಗೆ ಮಾಡಿದಯ್ ಕುರು ।
ಕುಲದರ್ಪಣ ಮರೆವುದಿನ್ನಹರ್ಪತಿಸುತನಂ ॥ ಗ.ಯು. (5-32)

ಎಂದು ಮೊದಲಾಗಿ ಸಂಜಯನು ಹೇಳಲು ದುರ್ಯೋಧನನು ಅರ್ಜುನನಿಗೆ ಮುಳಿದು 'ಶೋಕರಸಮಂ ಕ್ರೋಧರಸದ ಮೇಲಿಕ್ಕುವನು'.
ಪ್ರಸ್ತುತ ಭಾವವನ್ನು ನೋಡಿದಾಗ ಪಂಪನ ಪ್ರಭಾವ ದಟ್ಟವಾಗಿ ರನ್ನನ ಮೇಲೆ ಆಗಿರುವುದು ಗೋಚರವಾಗುತ್ತದೆ. ಇಲ್ಲಿ ರನ್ನ ಈ ಪ್ರಸಂಗಕ್ಕೆ ಒಂದು ಆದ್ಯಾತ್ಮಿಕ ಮೆರಗನ್ನು ತಂದು ಕೊಟ್ಟಂತೆ ಭಾಸವಾಗುತ್ತದೆ. ರನ್ನ ತಗೆದುಕೊಂಡಿರುವ ಪ್ರೇರಣೆಗಳಲ್ಲಿ ವೈಶಂಪಾಯನ ಪ್ರಸಂಗ ಪುನರ್‌ಲೇಖ ಪರಿಕಲ್ಪನೆ ದೃಷ್ಟಿಯಿಂದ ಗಮನಾರ್ಹವಾದದ್ದು.

ಅದಟಿನ ವಿಕ್ರಮಾರ್ಜುನನ ಸಾಹಸ ಭೀಮನ ಕೋಪ ಪಾವಕಂ ।
ಪುದಿದರ್ಳುರ್ದರ್ಪ್ಪಿ ಕೊಳ್ಳದಿರದಿಲ್ಲಯುಮೆಮ್ಮುಮನಿಲ್ಲಿ ಬಾಳ್ವಿರಂ ॥
ಕದಡದಿರಿತ್ತ ಬಾರದಿರು ಸಾರದಿರೆಂಬವೊಲಾದುದೆತ್ತಮು ।
ನ್ಮದ ಕಳಹಂಸ ಕೋಕ ನಿಕರ ಧ್ವನಿ ರುಂದ್ರ ಫಣೀಂದ್ರ ಕೇತುವಂ ॥(ಪಂ.ಭಾ.1373)

ಕುರುಪತಿ ನಿನ್ನ ಪೊಕ್ಕ ತೊರೆಗಳ್ ಮೊದಲಾಗಿರೆ ಬತ್ತುತಿರ್ಪುವೀ ।
.ದೊರೆಯ ದುರಾತ್ಮನು ಖಳನನಾನೊಳಕೊಂಡೊಡೆ ಭೀಮನೀ ಸರೋ ॥
ವರಮುಮನೆಮ್ಮಮಂ ಕದಡುಗಂ ಪುಗದಿರ್ ತೊಲಗೆಂದು ಬಗ್ಗಿಪಂ ।
.ತಿರೆ ನೆಗದತ್ತನೇಕಬಕಕೊಂಕಮರಾಳವಿಗಂಹಮಸ್ವನಂ ।(ಗದಾಯುದ್ಧ 6-12)

ಈ ಪ್ರಸಂಗವನ್ನು ನೋಡಿದರೆ ರನ್ನ ಪಂಪನನ್ನು ಅನುಸರಿಸಿರುವುದು ಕಂಡು ಬರುತ್ತದೆ. ಇದಲ್ಲದೇ ಪಂಪನ ಕೆಲವು ವ್ಯಾಖ್ಯೆಗಳನ್ನು ಮಾರ್ಪಡಿಸಿಕೊಂಡು ರನ್ನ ಮತ್ತೆ ಬರೆದು ಆದರ ಮಹತ್ವವನ್ನು ಹೆಚ್ಚಿಸಿದ್ದಾನೆ.

ಉದಾ: ಸರೋವರದಲ್ಲಿ ಇದ್ದ ದುರ್ಯೋಧನನಿಗೆ ಧರ್ಮರಾಯನು ಸಂಧಿಗೆ ಒಡಂಬಡು ಕೊಳದಲ್ಲೇಕಡಗಿರುವೆ ? ಎಂದ ನುಡಿಗೆ ಭೀಮನು 'ಈ ಭೂತೆನ್ನ ಸರಂಗೇಳ್ದಿಡಲ್ಲದೆ ಪೊರಮಡುವನ್ನಲ್ಲಂ ಇವಂಗಾನೆ ಸಾಲ್ವೆಂ' ಎಂಬ ರತ್ನ ಮಾತು ಪಂಪನಲ್ಲಿ 'ಎನ್ನ ರಸಂಗೇಳ್ದದೀಬೂತು ಪೊರುಮಡುವನಲ್ಲಂ ಈತಂಗಾನೆ ಬಲ್ಲೇ ಉಸಿರದಿರಿಂ' ಎಂದು ಸಿಂಹನಾದಮಾಡಿ ಮೂದಲಿಸುವನು. ಇಂತಹ ಅನೇಕ ಮಾತುಗಳು ರನ್ನನಲ್ಲಿ ಪುನರ್ಲೇಖಗೊಂಡಿವೆ.

ಮಹಾಭಾರತದಲ್ಲಿ ದ್ರೌಪದಿಯ ಮುಡಿ ಬಿಚ್ಚುವ ಮತ್ತು ಕಟ್ಟುವ ಪ್ರಸಂಗವೊಂದು ವಿಶಿಷ್ಟ ಘಟನೆ ಈ ಘಟನೆಯನ್ನು ಇಬ್ಬರು ಕವಿಗಳು ವರ್ಣಿಸಿದ್ದು, ವಿಶಿಷ್ಟ ಮತ್ತು ಗಂಭೀರ ಪ್ರಸಂಗವಾಗಿದೆ. ಪಂಪ ಮಹಾಸ್ರಗ್ಧರಾ ವೃತ್ತದಲ್ಲಿ ದ್ರೌಪದಿಯ ಕೇಶವರ್ಣನೆಯನ್ನು ಭೀಮನ ಬಾಯಲ್ಲಿ ಭವ್ಯವಾಗಿ ವರ್ಣಸಿದ್ದಾನೆ. ಆ ಪ್ರಸಂಗ ಪಂಪನಲ್ಲಿ 'ಇದರೋಳ್ ಶ್ವೇತಾತ ಪತ್ರದಲ್ಲಿ ಸ್ಥಗಿತಿ ದಶದಿಶಾ ಮಂಡಳಂ ರಾಜ ಚಕ್ರಂ ಪುದಿಯ ಅಳ್ಕಾಡಿತ್ತು ಅಡಗಿತ್ತು: ಈ ರಚನೆ ರನ್ನನ ಪ್ರತಿಭೆಯಲ್ಲಿ ಪುನರ್ಲೇಖಗೊಂಡಾಗ 'ಕಂದ'ದ ಬಂಧದಲ್ಲಿ ಈ ರೀತಿ ರಚಿಸಿದ್ದಾನೆ ಅವನ ಸಂಗ್ರಹ ಗುಣಕ್ಕೆ ಒಂದು ನಿದರ್ಶನ.

ಕುರುಕುಲಜೀವಾಕರ್ಷಣ
ಪರಿಣತಮಿದು ಕಾಳಹಸ್ತಮಲ್ಲದೆ ಪರಮೇ
ಶ್ವರಿ ಕೇಹಸ್ತಮಕ್ಕುಮೆ.
ಪರಾಭವಜ್ವಲನಧೂಮಕೃಷ್ಣ ಕೃಷ್ಣೇ. (ಗ.ಯು. (1-67)

ಇಲ್ಲಿ ರನ್ನ ಅನುಸರಿಸುವ ಕ್ರಮ ಪಂಪನಗಿಂತ ಭಿನ್ನ ಮತ್ತು ಮಹತ್ವದ್ದೆನಿಸುತ್ತದೆ. ಹೇಗೆಂದರೆ ಗದಾಯುದ್ಧದ ನಂತರ ದ್ರೌಪದಿಯ ಕೇಶವರ್ಣನೆ ಮಾಡುತ್ತಾ ಅದೇ ಆಶಯದ ಪ್ರಸಂಗವನ್ನು

ರನ್ನನ ಕಾವ್ಯದ ಪ್ರಥಮಾಶ್ವಾಸದಲ್ಲಿ ದ್ರೌಪದಿ ಬಿಚ್ಚಿದ ಮುಡಿಯನ್ನು ತೋರಿಸುತ್ತಾ ಭೀಮನ ಬಾಯಲ್ಲಿ ಹೇಳಿಸುತ್ತಾನೆ. ಹಾಗೂ 8ನೇ ಆಶ್ವಾಸದಲ್ಲಿಯ ಬಿಚ್ಚದ ಮುಡಿಯನ್ನು ಕಟ್ಟುವ ಚಿತ್ರವು ಅದ್ಭುತವಾದುದು, ಇಲ್ಲಿ ಪಂಪನ ಪ್ರಭಾವದ ಜೊತೆಗೆ ಭಾಸನ ವೇಣಿಸಂಹಾರ ನಾಟಕದ ಪ್ರಭಾವನ್ನು ಗುರುತಿಸಬಹುದು.

ಇದರೋಳ್ ಬಾಹಾಬಲಾಗ್ರ್ಯರ್ ಮಣಿಮಕುಟಧರರ್ ಕೃಷ್ಣೆ ಮೂರ್ಧಾಭಿಷಿಕ್ತರ್
ಕದನ ಪ್ರೋಚ್ಚಂದಂಡಕ್ರಮ ವಿಜಿತರಿಪು ಕ್ಷತ್ರಿಯರ್ ವೀರಲಕ್ಷ್ಮಿ
ಸದನರ್ ಸೋಮಾಮೃತಾಸ್ವಾದನ ಶುಭವಚನರ್ ಮಜನ್ನಮರ್ಯೋಡಿದರ್ ನೋಡಿದು.
ನಿನ್ನೀ ಕೇಶಪಾಶಂ ಕುರುಕುಲಪರಿಗಾಯ್ತುಲ್ತೆ ಕೀನಾಶಪಾಶಂ ॥49॥ ಗ.ಯು. (8-49)

ಇದು ರನ್ನನ ಪುನರ್ಲೇಖ ಹಾಗೂ ಒಂದು ವಿಷಯವನ್ನು ಸ್ಥಾನಪಲ್ಲಟಿಸಿದ ಕ್ರಮವನ್ನು ಇಲ್ಲಿ ಗುರುತಿಸಬಹುದು. ಭೀಮನ ದ್ರೌಪದಿಯ ಸಿರಿ ಮುಡಿಯನ್ನು ತೋರಿಸುತ್ತಾ ನಿನ್ನೀ ಕೇಶ ಪಾಶದಲ್ಲಿ ಕೀರ್ತಿವಂತರಾದ ರಾಜಧಿ ರಾಜರು ಬಾಹು ಬಲಉಳ್ಳುವರು, ಶತ್ರುಗಳನ್ನು ಗೆದ್ದವರು ಸುಂದರರು, ಸರ್ವರೂ ನಿರ್ನಾಮವಾದರು. ನಿನ್ನೀ ಕೇಶಪಾಶ ಕೌರವನಿಗೆ ಯಮ ಪಾಶವಾಯಿತೆಂಬ ಭಾವ.

ಶೈಲಿಯ ದೃಷ್ಟಿಯಿಂದ ತೀವ್ರವಾದ ಓಜಃಪೂರ್ಣವಾದ ಶೈಲಿ ಇದ್ದು ಭೀಮನ ಭಾವನೆಗಳನ್ನು ಸೊಗಸಾಗಿ ಬಿಂಬಿಸುತ್ತದೆ. ಪಂಪನ ಪದ್ಯದಲ್ಲಿರುವ ಅರ್ಥಗಳು ಇದಕ್ಕಿಲ್ಲದಿದ್ದರೂ ನಿನ್ನೀ ಕೇಶಪಾಶಂ ಕುರುಕುಲಪತಿಗಾಯ್ತುಲೆ ಕೀನಾಶಪಾಶಂ ಎಂಬಲ್ಲಿ ರನ್ನನ ಅದ್ಭುತ ಪ್ರತಿಭೆಯನ್ನು ಕಾಣಬಹುದು. ಪಂಪಭಾರತದಲ್ಲಿ ದುಶ್ಯಾಸನನ ವಧೆಯಾದೊಡನೆ ಭೀಮನು ದ್ರೌಪದಿಯ ಮುಡಿಯನ್ನು ಕಟ್ಟುತ್ತಾನೆ. ಇಲ್ಲಿ ತನ್ನ ಪ್ರತಿಷ್ಟೆಗಳನ್ನೆಲ್ಲ ಪೂರೈಸಿದ ಬಳಿಕ ವಿಜಯಕ್ಕ ಕಳಸವಿಟ್ಟಂತೆ ಭೀಮನು ವೇಣಿ ಸಂಹಾರವನ್ನು ಮಾಡುತ್ತಾನೆ. ರಸೌಚಿತ್ಯಗಳ ದೃಷ್ಟಿಯಿಂದ ಇದು ಉಚಿತವೇ ಸರಿ"

.ರನ್ನ ಈ ಪ್ರಸಂಗವನ್ನು ಪಂಪನಿಂದ ಪ್ರೇರಿತನಾಗಿ ಚಿತ್ರಿಸಿರುವನೆಂದು ಯಾರಿಗಾದರೂ ತಿಳಿಯದಿರದು. ಆದರೂ ರನ್ನನ ಸಂಭಾಷಣೆಯ ಶೈಲಿ ಭಾವದ ತೀರ್ವತೆ ಇವುಗಳಿಗೆ ಹೆಚ್ಚು ಇಂಬು ದೊರೆತಿದೆ.

ಶೇಕ್ಸಪೀಯರ್ ನಾಟಕಗಳಲ್ಲಿ ಜೂಲಿಯಸ್ ಸೀಜರ್ ಮ್ಯಾಕಬೆತ್‌ಗಳ ಪಾತ್ರವನ್ನು ಅನಾವರಣ ಮಾಡುವ ಸಂದರ್ಭದಲ್ಲಿ ಭೂತಪ್ರೇತಗಳ ಪ್ರಸಂಗವೊಂದು ಕಾಣಸಿಗುತ್ತದೆ. .ರಂ.ಶ್ರೀ.ಮುಗುಳಿ ಹೇಳುವಂತೆ ಪಂಪನು ನಿರ್ಮಿಸಿದ ಈ ಪ್ರಸಂಗದಲ್ಲಿ ನೇರವಾದ ಕಟಕಿ,

ನಿಶಿತಬುದ್ಧಿಯ ಶಬ್ದವಿದ್ದರೆ ಅದನ್ನು ಪುನರ್‌ನಿರ್ಮಿಸಿದ ರನ್ನನ ಕೃತಿಯಲ್ಲಿ ನಾಟ್ಯಗುಣ ಹಾಗೂ ದುರಂತ ಧ್ವನಿ ಇವುಗಳನ್ನೊಳಗೊಂಡ ವಿಡಂಬನೆ ಉತ್ಕಟ ಶೈಲಿಯಲ್ಲಿ ತಲೆದೋರುತ್ತದೆ. ಇಷ್ಟೇಯಲ್ಲದೆ 'ಮರುಳುಗಳು ಭೀಮ ಕೋಪದೆ ನಿನಗೂರು ಭಂಗವಾಗದೆ ಪೋಕುಮೆ' ಎಂದು ಪ್ರಶ್ನಿಸಿಸುವುದು ಆತನ ಹೃದಯದಲ್ಲಿ ಅವಮಾನ ಅಸಹಾಯಕತೆಯನ್ನು ಹುಟ್ಟುಹಾಕುತ್ತದೆ.

ಅರಗಿನ ಮಾಡದೊಳ್ ವಿಷದ ಲಡ್ಡಗೆಯೊಳ್ ಕೊಲಲೆಂದು ಬಂಧುಮ
ತ್ಸರದೊಳೆ ವೈರಮಂ ಪಡೆದು ಭೀಮನನಿನ್ನಿನಿತರ್ಕೆ ತಂದ ನೀಂ
ಮರುಳಯೊ ಭೂತಕೋಟಿವೆರಸಾಹವರಂಗದೊಳಾಡುತಿರ್ಪ ತಾಂ
ಮರುಳೆನೊ ನೋಳ್ಪುಮಿರ್ವರ ಮರುಳ್ತನಮಂ ಫಣಿರಾಜಕೇತನಾ (ಗ.ಯು. (4-45)

ಎಂಬುದಕ್ಕೆ ಮರುಳ್ ಮಾತಿಗೆ ಪುರುಳಿಲ್ಲೆಂದು ದುರ್ಯೋಧನ ಮುಂದೆ ನಡೆಯಲು ಅನುವಾದರೆ ಮೀರಿ ಪೋದಡೆ ಶಿವನಾಣೆ, ಕಲಿಭೀಮನಾಣೆ ಎಂದಾಗಲೇ ದುರ್ಯೋಧನನಿಗೆ ಎಷ್ಟು ಕೋಪ ಬಂದಿರಲಿಕ್ಕಿಲ್ಲ. ರನ್ನನ ಸಂವೇದನಾಶೀಲ ಬರವಣಿಗೆ ಮುಂದುವರೆಯುತ್ತದೆ... ದೂರ್ಜಟೆಯಾಣೆ ಎಂದಾಗ ಭೀಮ 'ಮುಳಿದಟ್ಟಿ ಕುಟ್ಟಲರಸಂ ಗದೆಗೊಂಡನ್' ಎಂಬುದು ರನ್ನನ ಮಾತು. ಸ್ವಾಭಿಮಾನಿ ದುರ್ಯೋಧನ ಸುಪ್ತ ಪ್ರಜ್ಞೆಯಲ್ಲಿ ಬೆಳಕು ಚೆಲ್ಲುವ ಈ ಪ್ರಸಂಗ ಮನೋವೈಜ್ಞಾನಿಕ ಸತ್ಯಮಾತ್ರವಲ್ಲದೇ ನಾಟಕೀಯ ವ್ಯಂಗ್ಯವಾಗಿಯೂ(Dramatic Irany) ಪಡೆ ಮೂಡಿರುವುದು ರನ್ನನ ಸ್ವಂತಿಕೆಗೆ ಸಾಕ್ಷಿಯಾಗಿದೆ. ಅಂತೂ ಭೂತ ಪ್ರೇತಗಳ ಬಗೆಗಿನ ಜಾನಪದ ನಂಬಿಕೆಯೊಂದನ್ನು ರನ್ನ ತನ್ನ ಕಾವ್ಯರೂಪದಲ್ಲಿ ಧ್ವನಿಯುಕ್ತವಾಗಿ ಬಳಸಿಕೊಂಡಿದ್ದಾನೆನ್ನಬಹುದು."[2] ರನ್ನ ಇಂತಹ ಪ್ರಸಂಗಗಳಿಗೆ ಅರ್ಥಪೂರ್ಣವಾಗಿ ಇಂಬುಕೊಡುವ ಕ್ರಮ ಅವನ ಔಚಿತ್ಯಪ್ರಜ್ಞೆಗೆ ಸಾಕ್ಷಿಯಾಗಿದೆ. ಇಂತಹ ಕ್ರಮವನ್ನೆಲ್ಲ ನಾವು ಪುನರ್ಲೇಖ ಪ್ರಕ್ರಿಯೆಯ ತಾತ್ವಿಕ ವಿಧಾನವೆಂದು ಗುರುತಿಸಬಹುದು.

ಪಂಪನ ಪ್ರಕಾರ ದುರ್ಯೋಧನನಿಗೆ ವೈಶಂಪಾಯನ ಸರೋವರ ಕಂಡಿದ್ದು ಹೀಗೆ

"ಇದು ಪಾತಾಳ ಬಿಲಕ್ಕೆ ಬಾಗಿಲಿದು ದಲ್ ಘೋರಾಂಧಕಾರಕ್ಕೆ ಮಾ
ಡಿದ ಕೂಪಂ ಪೆರತಲ್ತಿದುಗ್ರ ಲಯ ಕಾಳಾಂಭೋಧರಚ್ಛಾಯೆ ತಾ।
ನೆ ದಲೆಂಬಂತಿರೆ ಕಾಚ ಮೇಚಕ ಚಯಚ್ಛಾಯಾಂಬುವಿಂ ಗುಣ್ಪಿನಿಂ
ಪುದಿದಿರ್ದತ್ತು ಸರೋವರಂ ಬಕ ಬಳಾಕಾನೀಕ ರಾವಾಕುಳಂ। ಪಂ.ಭಾ.(13-72)

ಈ ಪ್ರಸಂಗವು ರನ್ನನಲ್ಲಿ ವಿಸ್ತಾರಗೊಂಡಿದೆ. ಮತ್ತು ಕೆಲವು ಹೊಸ ಪರಿಕಲ್ಪನೆಗಳು ಇವೆ. ಭೀಷ್ಮರಿಂದ ಬೀಳ್ಕೊಂಡು ಒಬ್ಬಂಟಿಯಾಗಿ ಹೊರಹೋದ ದುರ್ಯೋಧನನನ್ನು ಶತೃಗಳನ್ನು ವಂಚಿಸಲೆಂದು ಒಂದೆರೆಡು ವೃತ್ತರಂತರದಿಂ ಹಿಂದು ಮುಂದಾಗಿ ವೈಶಂಪಾಯನ ಸರೋವರವನ್ನು ಹೊಕ್ಕನು. ಆಗ 'ರಾಜ್ಯಲಕ್ಷ್ಮಿ ಧೀಃ ಎಂದವನಂ ರಾಜಲಕ್ಷ್ಮಿ ಬಿಸುಟಳ್' ಸರೋವರದಿಂದ ಹೊರಹೊರಟ ಹೆಜ್ಜೆ ಸಾಲಿನ ಜೊತೆಗೆ ಹೊಕ್ಕ ಹೆಜ್ಜೆಯ ಗುರುತುಗಳು ಇಲ್ಲದಿದ್ದರೆ ನೋಡುವವರಿಗೆ ಸಂದೇಹವುಂಟಾದೀತೆಂಬುದು ದುರ್ಯೋಧನನ ಸೂಕ್ಷ್ಮ ಪ್ರಜ್ಞೆಗೆ ಏಕೆ ತೋರಲಿಲ್ಲವೋ! ಈ ತಂತ್ರವನ್ನು ಬಳಸಲು ಭೀಷ್ಮರು ಹೇಳಿಲ್ಲ. ರನ್ನ ಮತ್ತೇಕೆ ಈ ತಂತ್ರ ಕೈಗೊಂಡ? ಎಂಬುದು ವಿಚಾರಣೀಯ.

"ದುರ್ಯೋಧನನು ವೈಶಂಪಾಯನ ಸರೋವರವನ್ನು ಹಿಂದು ಹಿಂದಾಗಿ ಪ್ರವೇಶಿಸದೆಂಬುದಕ್ಕೆ ವ್ಯಾಸ ಪಂಪರಲ್ಲಿ ಯಾವ ಆಧಾರವೂ ಇಲ್ಲ. ಎಂದ ಬಳಿಕ ಪಂಪ ಭಾರತವನ್ನು ಆಧಾರವಾಗಿಟ್ಟುಕೊಂಡು ರಚಿಸಿದ ಗದಾಯುದ್ಧದಲ್ಲಿ ಈ ಮಾರ್ಪಾಡು ಎಲ್ಲಿಂದ ಬಂದಿತು. ರನ್ನನು ಸ್ವತಂತ್ರವಾಗಿ ಈ ಬದಲಾವಣೆಯನ್ನು ಮಾಡಿರಬಹುದೇ? ಎಂಬುದು ಸಂದೇಹ. ಆದರೆ ವೇಣೀ ಸಂಹಾರ ನಾಟಕದ 6ನೇ ಅಂಕದಲ್ಲಿ ಪುರುಷನೊಬ್ಬನು ಭೀಮನೊಡನೆ ಆಡುವ ಮಾತಿನಲ್ಲಿ ಎರಡು ಹೆಜ್ಜೆಯ ಸಾಲುಗಳು ಸರೋವರಕ್ಕೆ ಇಳಿದಂತೆಯೂ ಅವುಗಳಲ್ಲಿ ಒಂದು ಸಾಲು ಮಾತ್ರ ನೀರನ್ನು ಬಿಟ್ಟು ಹಿಂದುರುಗಿದಂತೆಯೂ ತೋರುತ್ತಿದ್ದವು."[3] ಎಂದು ಹೇಳಲಾಗಿದೆ ಇದರ ಆಧಾರದಿಂದ ರನ್ನನು ಈ ತಂತ್ರವನ್ನು ಸೃಷ್ಟಿಸಿರಬೇಕು.

ದುರ್ಯೋಧನನು ವೈಶಂಪಾಯನ ಸರೋವರದಿಂದ ಎದ್ದು ಬರುತ್ತಿದ್ದಂತೆಯೇ 'ಎಲ್ಲಿದಂ ಭೀಮಂ' ಎಂದು ಆರ್ಭಟಿಸುತ್ತಾನೆ. ಮೂದಲಿಕೆಗಳಿಂದ ಭೀಮ ದುರ್ಯೋಧನರಿಗೆ ಬಿರುಸಾದ ವಾಕ್ ಯುದ್ಧವೇ ನಡೆಯುತ್ತದೆ. ರನ್ನನು ತಂದಿರುವ ಈ ವಾಗ್ಯುದ್ಧ ಪಂಪನಲ್ಲಿ ಇಲ್ಲ. ಭೀಮನನ್ನು ಮೂದಲಿಸುವ ದುರ್ಯೋಧನನ ಮಾತುಗಳು ಕಾವ್ಯ ದೃಷ್ಟಿಯಿಂದ ಸಮರ್ಥವೂ ಶಕ್ತಿಯುತವಾಗಿ ಮೂಡಿದ್ದು, ರಸಪೂರ್ಣತೆಯಿಂದ ಕೂಡಿದೆ.

"ವೈಶಂಪಾಯನ ಸರೋವರವನ್ನು ಆಕಾಶ ಭೂಮಿ ನಾಗಲೋಕಗಳಿಗೆ ಹೋಲಿಸಿ ಕೊನೆಯಲ್ಲಿ ದಿಗ್ಗಜಗಳು ಒಂದಾಗಿ ಮೀಯುವುದಕ್ಕಾಗಿ ಬ್ರಹ್ಮನು ನಿರ್ಮಿಸಿದ ಜಲಾಶಯವೋ ಎಂದು ವರ್ಣಿಸಿರುವುದರಿಂದ ಸರೋವರ ದಿಗಂತ ವ್ಯಾಪ್ತಿಯಾಗಿತ್ತೆಂಬ ಭಾವ ಮೂಡುತ್ತದೆ. ಇಲ್ಲಿ ರನ್ನನು ವೈಶಂಪಾಯನ ಸರೋವರದ ಬೃಹತ್ ರೂಪವನ್ನು ಕಂಡಂತಿದೆ. ಆದರೆ ಪಂಪನು ಆ ಸರೋವರದ ಬೃಹತ್ ಮಹತ್ತುಗಳನ್ನು ಕಂಡರಸಿದ್ದಾನೆ. ಎಂಬ ಶ್ರೀ

ಕುವೆಂಪುರವರ ಈ ಮಾತುಗಳು ಸರೋವರದ ಉದ್ದಗಲಗಳನ್ನು ಸ್ಪರ್ಷಿಸಿದ ಅನುಭವವಾಗುತ್ತದೆ.[4]

ಅದಟಿನ ವಿಕ್ರಮಾರ್ಜುನನ ಸಾಹಸ ಭೀಮನ ಕೋಪ ಪಾವಕಂ
ಪುದಿದಳುರ್ದಳ್ವೆ ಕೊಳ್ಳದಿರದಿಲ್ಲಿಯುಮೆಮ್ಮುಮನಿಲ್ಲಿ ಬಾಳ್ವಿರಂ।
ಕದಡದಿರಿತ್ತ ಬಾರದಿರು ಸಾರದಿರೆಂಬವೊಲಾದುದೆತ್ತಮು
ನ್ಮದ ಕಳಹಂಸ ಕೋಕ ನಿಕರ ಧ್ವನಿ ರುಂದ್ರ ಫಣೀಂದ್ರ ಕೇತುವಂ॥ ಪಂ.ಭಾ(13-73)

ಎಂಬ ವರ್ಣನೆಯನ್ನು ರನ್ನ ಪುನರ್ಲೇಖಿಸುವ ಕ್ರಮ ಅವನ ಪ್ರಕಾರ

ಕುರುಪತಿ ನಿನ್ನ ಪೊಕ್ಕ ತೊರೆಗಳ್ ಮೊದಲಾಗಿಯೆ ಬತ್ತುತಿರ್ಪುವೀ
ದೊರೆಯ ದುರಾತ್ಮನಂ ಖಳನನಾನೊಳಕಂಡೊಡೆ ಭೀಮನೀ ಸರೋ
ವರಮುಮನೆಮ್ಮುಮಂ ಕದಡುಗುಂ ಪುಗದಿರ್ ತೊಲಗೆಂದು ಬಗ್ಗಿಪಂ
ತಿರೆ ನೆಗೆದತ್ತನೇಕಬಕ ಕೋಕ ಮರಾಳ ವಿಹಂಗಮಸ್ವನಂ

ಎಂಬ ಪದ್ಯ ರನ್ನನ ಸೋಪಜ್ಞತೆಗೆ ಸಾಕ್ಷಿಯಾಗಿದೆ. ಕೆಲವು ಕಡೆ ಪಂಪ ಬರೆದ ವಾಕ್ಯ ಕಂಡ ಶಬ್ದ ಸಮುದಾಯಗಳನ್ನು ರನ್ನ ಮತ್ತೆ ಬಳಸಿಕೊಂಡು ಅರ್ಥಪೂರ್ಣವಾಗಿ ವಿವರಿಸಿದ್ದಾನೆ. ಕೊಳದಲ್ಲಿ ಬಚ್ಚಿಟ್ಟುಕೊಂಡ ದುರ್ಯೋಧನನಿಗೆ ಧರ್ಮರಾಯನು ಸಂಧಿಗೆ ಒಡಂಬಡು ಕೊಳದಲ್ಲಿ ಏಕೆ ಅಡಗಿರುವೆ ಎಂದು ಸಾಂತ್ವಾನದ ಮಾತುಗಳನ್ನಾಡಿದಾಗ ಭೀಮ 'ಈ ಭೂತೆನ್ನ ಸರಂಗೇಳ್ದೊಡಲ್ಲದೆ ಪೊರಮಡುವನಲ್ಲಂ ಇವಂಗಾನೆ ಸಾಲ್ವೆಂ' ಎಂದು ಭೀಮ ಮೂದಲಿಸುವ ಪ್ರಸಂಗ ಗದಾಯುದ್ಧದಲ್ಲಿದೆ. ಪಂಪನಲ್ಲಿ 'ಎನ್ನ ಸರಂಗೇಳ್ದಲ್ಲದೀ ಬೂತು ಪೊರಮಡುವನಲ್ಲಂ ಈತಂಗಾನೆ ಬಲ್ಲೆಂ ಉಸಿರದಿರಂ' ಎಂದು ಸಿಂಹನಾದ ಮಾಡಿದನು. ಆ ನಾದ ಹೇಗಿತ್ತೆಂಬುದನ್ನು ರನ್ನ ಈ ರೀತಿ ಹೇಳುತ್ತಾನೆ.

ಆ ರವಮಂ ನಿರ್ಜಿತ ಕಂ/
ಠೀರವರವಮಂ ನಿರಸ್ತಘನರವಮಂ ಕೋ
ಪಾರುಣನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರುಗಪತಾಕಂ ಗ.ಯು. (7-22)

ರನ್ನನದು ಮೂಲತ: ಸಿಂಹಾವಲೋಕ ಕ್ರಮ. ಹಿಂತಿರುಗಿ ನೋಡಿದಾಗ ಕೊನೆಯದು ಮೊದಲಾಗಿರುತ್ತದೆ. ಮೊದಲಿನದು ಕೊನೆಯದಾಗಿ ಕಾಣಿಸುತ್ತದೆ. ಹಾಗಾಗಿ ಪಂಪನ ಕೊನೆಯ ಆಶ್ವಾಸದ ಗದಾಯುದ್ಧ ಪ್ರಸಂಗ ರನ್ನನ ಕೃತಿಯ ಮೊದಲಿಗೆ ಪಲ್ಲಟವಾಗುತ್ತದೆ. 'ಜೈನನಾದ ರನ್ನನಲ್ಲಿ ತನ್ನ ಮನದಾಳದ ಧಾರ್ಮಿಕ ಪ್ರಜ್ಞೆ ಇಲ್ಲಿ ಕೆಲಸ ಮಾಡಿರಬಹುದು. ಅಂದರೆ ಜೈನ

ಯತಿಗಳು ಸಿದ್ಧಿ ಪಡೆಯುವಾಗ ಅವರ ಕೊನೆಯ ವ್ರತವಾದ ಸಲ್ಲೇಖನ ವ್ರತ ಸಾಕ್ಷಾತ್ಕಾರದ ಹಿನ್ನೆಲೆಯಲ್ಲಿ ಮುಖ್ಯವಾದುದು ಹಾಗೂ ಪವಿತ್ರವಾದುದು. ಹಾಗಾಗಿ ದುರ್ಯೋಧನನ ಕೊನೆಯ ದಿನಗಳನ್ನು ಈ ಹಿನ್ನೆಲೆಯಲ್ಲಿ ಹೇಳುವ ತಂತ್ರವಿರಬಹುದೇ ಎಂಬುದನ್ನು ವಿಚಾರಣೀಯ ವಾದುದು-

ಒಟ್ಟಾರೆ ರನ್ನ ತನ್ನ ಕಥೆಗೆ ಪೂರಕವಾಗಿ ಬದಲಾವಣೆಗಳನ್ನು ಆದ್ಯಂತವಾಗಿ ತನ್ನ ಕೃತಿಯಲ್ಲಿ ತರುವುದರ ಮೂಲಕ ಕೃತಿಯ ಮಹತ್ವವನ್ನು ಹೆಚ್ಚಿಸಿಕೊಂಡಿದ್ದಾನೆ.

.ರನ್ನ ತನ್ನ ಗದಾಯುದ್ಧಕ್ಕೆ ಪಂಪನ ಆದಿಪುರಾಣದಿಂದಲೂ ಎರವಲು ಪಡೆದಿದ್ದಾನೆ. ಅಂತಹ ಒಂದು ನಿದರ್ಶನ ಆದಿಪುರಾಣದಲ್ಲಿ ಬರುವ ಲಲಿತಾಂಗನ ಸಾವಿನಿಂದ ಸ್ವಯಂ ಪ್ರಭೆ ಪರಿತಪಿಸುವ ಪ್ರಸಂಗವೊಂದು ಈ ರೀತಿಯಿದೆ.

ಮದನನ ಕೈದುವೆಲ್ಲಿದನನಂಗನ ಕೈಮೊಡೆಯೆಲ್ಲಿದಂ ವಿಳಾ
ಸದ ಕಣೆಯೆಲ್ಲಿದಂ ಚದುರ ಪುಟ್ಟಿದನೆಲ್ಲಿದನೆಲ್ಲಿದಂ ವಿನೋ
ದದ ಮೊದಲೆಲ್ಲಿದಂ ಸೊಬಗಿನಾಗರಮೆಲ್ಲಿದನಿಚ್ಚೆಯಾಣ್ಮನೆ
ಲ್ಲಿದನೆರ್ದೆಯಾಣನೆನ್ಮರಸನೆಲ್ಲಿದನೋ ಲಲಿತಾಂಗವಲ್ಲಭ। (ಆ.ಪು.3-15)

ಮನ್ಮಥನ ಆಯುಧವಾದ ಲಲಿತಾಂಗನೆಲ್ಲಿ? ಅನಂಗನ ಬಾಣಪುಂಖವೆಲ್ಲಿ? ವಿಲಾಸದ ಖನಿಯೆಲ್ಲಿ? ಆ ಚತುರನು ಎಲ್ಲಿ? ವಿನೋದಾಗ್ರಣಿಯು ಸೊಬಗಿನ ಆಗರನೂ ಎಲ್ಲಿ? ನನ್ನ ಇಚ್ಛೆಯಾಣ್ಮನೆಲ್ಲಿ? ನನ್ನ ಹೃದಯೇಶನೆಲ್ಲಿ? ಲಲಿತಾಂಗವಲ್ಲಭನೆಲ್ಲಿ? ಎಂದು ಹಲುಬಿದಳು.

ಪಂಪನ ಈ ಪದ್ಯವನ್ನು ರನ್ನ ದುರ್ಯೋಧನನು ರಣರಂಗದಲ್ಲಿ ಮಡಿದಾಗ ಅವನ ಪತ್ನಿಯರು ಈ ಘಟನೆಯನ್ನು ಕೇಳಿ ಶೋಕಿತರಾಗಿ ಗಾಂಧಾರಿ ಧೃತರಾಷ್ಟ್ರರ ಕಾಲ ಮೇಲೆ ಬಿದ್ದು, ಗೋಳಾಡುವ ಪ್ರಸಂಗದಲ್ಲಿ ರನ್ನ ಪುನರ್ ರೂಪಿಸಿದ್ದಾನೆ.

ಎಲ್ಲಿದನೆಲ್ಲಿದಂ ಕುರುಮಹೀಪತಿಯೆಲ್ಲಿದನೆಲ್ಲಿದಂ ಮಹೀ।
ವಲ್ಲಭನಿಂದುವಂಶತಿಲಕಾಹ್ವಯನೆಲ್ಲಿದನೆಲ್ಲಿದಂ ಲಸ।
ತ್ಪಲ್ಲವಕೀರ್ತಿ ಚಾರುತರ ಮೂರ್ತಿ ಫಣೀಂದ್ರಪತಾಕನೆಲ್ಲಿ ತಾ।
ನೆಲ್ಲಿದನೆಲ್ಲಿದಂ ಗಡ ಮನಃಪ್ರಿಯನೆಲ್ಲಿದನೋ ಸುಯೋದಾ॥ ಗ.ಯು.(10-16)

ಎಲ್ಲಿದ್ದಾನೆ? ಎಲ್ಲಿದ್ದಾನೆ? ಎಂದು ಪುನಃ ಪುನಃ ಕೇಳುವ ಪ್ರಶ್ನೆಗಳಲ್ಲಿ ದುರ್ಯೋಧನ ಪತ್ನಿಯರ ಮನದಾಳದ ಬೇಗೆ ಯಾವ ರೀತಿಯದೆಂದು ಇಲ್ಲಿ ಚಿತ್ರಿತವಾಗಿದೆ.

ಪಂಪನ ಭಾರತದಿಂದ ರನ್ನನ್ನು ತೆಗೆದುಕೊಂಡಿರುಬಹುದು ಅಂಶವು ಎಷ್ಟೆಂದು ಲೆಕ್ಕ ಮಾಡಿದರೆ. ತಿ.ನಂ.ಶ್ರೀ.ಯವರು ಹೇಳುವಂತೆ ಹದಿನೈದು ಪದ್ಯಗಳಿಂದ ಹೆಚ್ಚಿರುವುದು ಅವನು ಪ್ರಭಾವನ್ನು ಕುರಿತಂತೆ ಶ್ರೀಯವರ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಿದಬಹುದು.

"ರನ್ನನೇನೊ ಪಂಪನ ಕಥೆಯನ್ನೇ ಅನುಸರಿಸಿದ್ದಾನೆ. ಆದರೆ ಅವನು ಬೇರೆ ರೀತಿಯಲ್ಲಿ ಮಾಡಲು ಸಾಧ್ಯವಿರಲಿಲ್ಲಾ, ಗದಾಯುದ್ಧದ ಕಥೆಯು ಬಹು ಸಲ್ಪ ಅದರ ಪ್ರಾರಂಭಕ್ಕೆ ಮೊದಲೇ ಕರ್ಣ ಶಲ್ಯಾದಿಗಳ ವಧೆಯು ನಡೆದು ಹೋಗಿರುತ್ತದೆ. ಮುಂದೆ ಬರುವ ಸಂಗತಿ ಎಲ್ಲಾ ದುರ್ಯೋಧನನ ತಂದೆ ತಾಯಿಗಳನ್ನು ನೋಡುವುದು, ಅವನ ವಿಲಾಪ ಭೀಷ್ಮ ದರ್ಶನ ಕೊಳದಲ್ಲಿ ಮೈಮರೆಯುವುದು ಭೀಮಾದಿಗಳು ಅವನನ್ನು ಹುಡುಕುವುದು. ಇವು ಎಲ್ಲಾ ಅನುಕ್ರಮವಾಗಿ ನಡೆಯುವದರಿಂದ ರನ್ನನ್ನು ಮುಖ್ಯ ವ್ಯತ್ಯಾಸವೇನನ್ನು ತರುವುದುದಕ್ಕೆ ಅವಕಾಶ ಇರಲಿಲ್ಲಾ ಆದರೂ ಪಂಪ ಹೋದ ದಾರಿಯಲ್ಲಿ ಕಣ್ಣು ಮುಚ್ಚಿಕೊಂಡು ಅವನು ಹೋಗಿಲ್ಲ. ಅವನು ಮಾಡಬಹುದಾದ ಮಾರ್ಪಡು ಮಾಡಿಯೇ ಇದ್ದಾನೆ.[5.] ಈ ಮಾತುಗಳು ಭಾಷಾಂತರದ ದೃಷ್ಟಿಯಿಂದ ಹಾಗೂ ಭಾಷಾಂತರದ ಮಾದರಿಗಳಾದ ಪುನರ್ಲೇಖ ಅನುಸರಣೆ ಮುಂತಾದ ಪ್ರಕ್ರಿಯೆಗಳ ದೃಷ್ಠಿಯಿಂದ ಮುಖ್ಯವಾದುವು. ಅಂತಹ ಕೆಲವು ಬದಲಾವಣೆಗಳನ್ನು ಈ ಮುಂದೆ ಚರ್ಚಿಸಲಾಗುವುದು.

4.2 ಕಥೆ: ವಿಸ್ತಾರ- ಸಂಗ್ರಹ.

ರನ್ನನು ಅರ್ಧ ದಿನದ ಗದಾಯುದ್ಧ ಪ್ರಸಂಗವೊಂದನ್ನು ಹತ್ತು ಆಶ್ವಾಸಗಳಲ್ಲಿ ವಿಸ್ತರಿಸಿ ಹೇಳಿ ಒಂದು ಮಹಾಕಾವ್ಯವನ್ನಾಗಿ ಮಾಡಿರುವುದು ಅವನ ವಿಸ್ತಾರ ಗುಣಕ್ಕೆ ಸಾಕ್ಷಿಯಾಗಿದೆ.

ವ್ಯಾಸರ ಮಹಾಭಾರತವನ್ನು ಮೈಗೆಡಲೀಯದೆ ಪಂಪ ಈಗಾಗಲೇ ಸಾಕಷ್ಟು ಸಂಗ್ರಹಿಸಿ ವಿಕ್ರಮಾರ್ಜುನ ವಿಜಯವನ್ನಾಗಿ ರೂಪಿಸಿದ್ದಾನೆ. ಪಂಪನನ್ನೇ ಅನುಸರಿಸಿದ ರನ್ನ, ಪಂಪನ ಕೊನೆಯ ಎರಡು ಆಶ್ವಾಸಗಳ ಗದಾಯುದ್ಧ ಪ್ರಸಂಗವನ್ನು ಆಯ್ಕೆ ಮಾಡಿಕೊಂಡು ತನ್ನ ಅಗತ್ಯಕ್ಕೆ ತಕ್ಕಂತೆ ವಿಸ್ತರಿಸುವ ಮತ್ತು ಸಂಗ್ರಹಿಸುವ ಸಂದರ್ಭದಲ್ಲಿ ಪಂಪನಿಗಿಂತಲೂ ಹೆಚ್ಚು ಸ್ವಂತಿಕೆಯನ್ನು ಮೆರೆದಿದ್ದಾನೆ. ಅಂದರೆ ಸಾಕಷ್ಟು ಬದಲಾವಣೆಗಳನ್ನು ತಂದಿದ್ದಾನೆ. ತನ್ನ ಸಿಂಹಾವಲೋಕನ ಕ್ರಮದಿಂದ ಕಥೆಯನ್ನು ವಿಸ್ತರಿಸಿದ್ದಾನೆ. ಅವನ ಸಂಗ್ರಹ ಗುಣಕ್ಕೆ ಈ ಕೆಳಗಿನ ಒಂದು ಉದಾಹರಣೆಯನ್ನು ಕೊಡಬಹುದು.

ಅನರಿವೆಂ ಪೃಥೆಯರಿವಳ್।
ದಾನವರಿಪುವರಿವನರ್ಕನರಿವಂ ದಿವ್ಯ।

ಜ್ಞಾನಿಸಹದೇವನರಿವಂ।

ನೀನಾರ್ಗಂದಾರುಮರಿಯರಂಗಾಧಿಪತೀ॥ ಗ.ಯು.(5-18)

ರನ್ನನು ಈ ಅಭಿಪ್ರಾಯವನ್ನು ಪಂಪನಿಂದ ಪ್ರೇರಿತನಾಗಿ ಚಿತ್ರಿಸಿದ್ದಾನೆ. ಪಂಪ

ನಿನ್ನುತ್ಪತ್ತಿಯನಿಂತೆಂ। ದೆನ್ನರುಮಣಮ್ಮರೆಯರರೆವೆನಾಂ ಸಹದೇವಂ।

ಪನ್ನಗಕೇತು ದಿನೇಶಂ। ನಿನ್ನಂಬಿಕೆ ಕುಂತಿಯಿಂತಿವರ್ ನೆರ್ ಬಲ್ಲರ್॥

ಅಂದರೆ ಕರ್ಣನ ಜೀವನ ವೃತ್ತಾಂತವನ್ನು ಪಂಪ ರನ್ನರಿಬ್ಬರೂ ವ್ಯಾಸಭಾರತದಲ್ಲಿ ಧೀರ್ಘವಾಗಿ ವರ್ಣಿಸಿರುವ ಕರ್ಣವೃತ್ತಾಂತವನ್ನು ಸಂಗ್ರಹಿಸಿದ್ದಾರೆ.

ಪಂಪನಲ್ಲಿ ವಿಸ್ತಾರಗೊಂಡಿರುವ ಯುದ್ಧ ಚಿತ್ರಗಳು ರನ್ನನಲ್ಲಿ ಸಂಗ್ರಹವಾಗಿ ಚಿತ್ರಿಸಲ್ಪಟ್ಟು ಭೀಮದುರ್ಯೋಧನರ ಭಾರವಾದ ಗಧೆಗಳು ಹೇಗೆ ಶಬ್ದವನ್ನು ಹೊರಸೂಸುತ್ತಾ ಒಬ್ಬರನೊಬ್ಬರು ನುಜ್ಜುಗುಜ್ಜಾಗುವಂತೆ ಹೊಡೆದಾಡಿದರು ಎಂಬ ಒಂದು ವಿಸ್ತಾರವಾದ ಘಟನೆಯನ್ನು ಸಂಗ್ರಹಿಸಿ ಈ ರೀತಿ ವರ್ಣಿಸಿದ್ದಾನೆ.

ಧಪ್ಪರಿಧಟ್ಟುಂ ಪೊಟ್ಟೆನೆ।

ಧೊಪ್ಪಧೊಗಪ್ಪನೆ ದಿಧಿಲ್ ಬುಧಿಲ್ಲನೆ ಗದೆಗಳ್।

ಸೊಪ್ಪುಸೊವಡಪ್ಪಿನಂ ಸೂ।

ಳ್ತಪ್ಪದೆ ಕಡುಕೆಯ್ದು ಪೊಯ್ದ ರೊರ್ವರನೊರ್ವರ್॥ ಗ.ಯು.(8-11)

ಇಲ್ಲಿ ಕೇವಲ ಅನುಕರಣೆ ಶಬ್ದಗಳಿಂದಲೇ ಯುದ್ಧದ ಭೀಕರತೆಯನ್ನು ಕಣ್ಣಿಗೆ ಕಟ್ಟುವಂತೆ ರನ್ನ ಸಂಗ್ರಹಿಸಿದ್ದಾನೆ.

ಈ ಪದ್ಯದಲ್ಲಿ ಅನುಕರಣೆಯ ಶಬ್ದಗಳು ಗದೆಗಳ ಸಂಘಟನೆಯನ್ನು ಸಮರ್ಥವಾಗಿ ಚಿತ್ರಿಸುತ್ತವೆ. ಗದೆಗಳ ಶಬ್ದ ಬಾಷೆಯಲ್ಲಿ ಮೂಡಿ ಬಂದಿರುವುದು ಗಮನಾರ್ಹವಾದುದು. ಇಲ್ಲಿ ವಿಸ್ತಾರವಾದ ಘಟನೆಯೊಂದು ಸಂಗ್ರಹರೂಪದಲ್ಲಿ ರನ್ನ ಚಿತ್ರಿಸಿರುವುದನ್ನು ಗುರುತಿಸಬಹುದು. ಹಾಗೆಯೇ ಪಂಪ ಸಂಗ್ರಹವಾಗಿ ಹೇಳಿರುವುದನ್ನು ವಿಸ್ತಾರವಾಗಿ ವರ್ಣಿಸುವ ಪ್ರಸಂಗಗಳಲ್ಲಿ ಈ ಹಿಂದೆ ನೋಡಿದ ವೈಶಂಪಾಯನ ಸರೋವರ ಮತ್ತು ಮರುಳ್‌ಗಳ ಪ್ರಸಂಗವನ್ನು ಉದಾಹರಿಸಬಹುದು. ರನ್ನ ತನ್ನ ಕಾವ್ಯವನ್ನು ಉತ್ತಮ ಪಡಿಸಿಕೊಳ್ಳುವ ದಿಸೆಯಲ್ಲಿ ಇಂತಹ ಪ್ರಯೋಗಗಳನ್ನು ಮಾಡುತ್ತಾನೆ.

4.3 ಭಾವ ವಿಸ್ತಾರ ಸಂಗ್ರಹ

ರಣರಂಗದಲ್ಲಿ ನಡೆಯುತ್ತಿದ್ದ ದುರ್ಯೋಧನನನ್ನು ಒಂದು ಮರುಳ ಮುಂದೆ ಬಂದು ಹಾಸ್ಯ ಮಾಡಿ ಆಣೆಯಿಕ್ಕುವುದು. ಈ ಸನ್ನಿವೇಶವು ಪಂಪನ ಕಲ್ಪನೆ. ಇದನ್ನು ರನ್ನ ಸಂಭಾಷಣೆಯಿಂದ ಹೆಚ್ಚು ಬೆಳೆಸಿದ್ದಾನೆ. ರನ್ನನ ಕಥಾವಿಸ್ತಾರಕ್ಕೆ ಇದು ಮತ್ತೊಂದು ಸಾಕ್ಷಿ. ಪಂಪನಲ್ಲಿ ಈ ಪ್ರಸಂಗ ಈ ರೀತಿ ಇದೆ.

ಉ॥ ಬೇಡ ವಿರೋಧಮೆಂತುಮರಿಕೇಸರಿಯೊಳ್ ಸಮಸಂದು ಸಂಧಿಯಂ
ಮಾಡೆನೆ ಮಾಡಲೊಲ್ಲದೆ ಸುಹೃದ್ಬಲಮೆಲ್ಲಮನಿಕ್ಕಿ ಯುದ್ಧಮಂ।
ಮಾಡಿದ ಜಾತಿ ಬೆಳ್ ನಿನಗದೇವಿರಿದೀಚುಡರೆಂದು ಮುಂದೆ ಬಂ
ದೇಡಿಸುವಂತಿರಾಡಿದುದದೊಂದು ಮರುಳ್ ಫಣಿರಾಜಕೇತುವಂ॥ ಪಂ.ಭಾ (13-54)

ಚಂ॥ ಮರುಳೆನೆ ಲೋಕದೊಳ್ ನೆಗಳ್ದ ಕೊಳ್ಗುಳದೊಳ್ ಮರುಳಾಟಮಾಡುವಾಂ
ಮರುಳೆನೊ ವಿಕ್ರಮಾರ್ಜುನನೊಳೊಲ್ಲದೆ ಸಂಧಿಯನುರ್ಕಿ ಕೆಟ್ಟ ನೀಂ।
ಮರುಳಯೊ ಪೇಳ ಪೇಳದೊಡೆ ಪೋಗದಿರೀಶ್ವರನಾಣೆಯೆಂದು ಮು
ಲ್ಮರುಳಿಸಾನುಮಂ ತೆಗೆದು ಕಾಡಿದುದಲ್ಲಿ ಫಣೀಂದ್ರ ಕೇತುವಂ॥ ಪಂ.ಭಾ (13-55)

ಲೋಕದಲ್ಲಿ ಮರುಳುಗಳು ಪ್ರಸಿದ್ಧರಾಗಿ ಯುದ್ಧದಲ್ಲಿ ಆಟವಾಡುವ ನಾವು ಮರುಳುಗಳೋ ಸಂಧಿಯನ್ನೊಪ್ಪದ ನೀನು ಮರುಳೋ? ಹೇಳದೇ ಹೋಗಬೇಡ ಹೋದರೆ ಈಶ್ವರನಾಣೆ ಎಂದು ಒಂದು ಮರುಳ ದುರ್ಯೋಧನನನ್ನು ತಡೆದು ಹಿಂಸೆ ಮಾಡಿತು. ಆ ಪಿಶಾಚಿಯ ವರ್ತನೆಗೆ ಮುಗುಳ್ನಗೆ ನಕ್ಕು ನನ್ನನ್ನು ಬ್ರಹ್ಮನು ಮರುಳು ಮಾಡಿದ ಕಾರಣದಿಂದ ಈ ಪಿಶಾಚಿಯ ಕಣ್ಣಿಗೆ ನಾನು ಹುಚ್ಚನಾಗಿ ತೋರಿದೆನೆಂದು ತಿಳಿದು ಅಲ್ಲಿಂದ ಹೊರಟನು. ಈ ಪ್ರಸಂಗ ರನ್ನನಲ್ಲಿ ಪುನರ್ಲೇಖಿತಗೊಂಡು ಪಂಪನಿಗಿಂತ ರಮಣೀಯವಾಗಿ ಮೂಡಿ ಬಂದಿದೆ. ಪಂಪನಲ್ಲಿ ಸಿಕ್ಕ ಒಂದು ಎಳೆಯನ್ನು ಹಿಡಿದು ರನ್ನ ಮರುಳುಗಳ ಪ್ರಸಂಗವನ್ನು ನಾಟಕೀಯವಾಗಿ ಕಂಡರಿಸಿದ್ದಾನೆ.

ಕುರುರಾಜ ನಿನ್ನನೆತ್ತರ ಸವಿನೋಳ್ಪೊಡಾಂ ಬಯಸಿ ಬಂದಪೆನೆಂದುದದೊಂದು ಪುಲ್ಮರುಳ್ ಅದಕ್ಕೆ 'ಭೀಮಕೋಪದೆ ನಿನಗೂರುಭಂಗಭಯಮಾಗದೆ ಪೋಕುಮೆ ಕೌರವೇಶ್ವರಾ' ಎನ್ನಲು ಮರುಳ ಮಾತಿನೋಳ್ ಪುರುಳೇನೆಂದರಸಂ ಪೋಗೆವೋಗೆ ಮತ್ತೊಂದು ಮರುಳ ದುರ್ಯೋಧನನ ಹಿಂದಿನ ದುಷ್ಕೃತ್ಯಗಳನ್ನು ಕೆಣಕುತ್ತದೆ. ಆಗಲೂ ದುರ್ಯೋಧನನ ಮರುಳ ಮಾತಿನಲ್ಲಿ ಹುರುಳಿಲ್ಲವೆಂದು ಸ್ವಲ್ಪ ದೂರ ನಡೆಯಲು ಆ ಮರುಳ ಅವನನ್ನು ಅಡ್ಡಗಟ್ಟಿ

ನುಡಿಯದೆ ಪೋಗಲೀಯನೆಲೆ ಪೋದೊಡೆ ಧೂರ್ಜಟಿಯಾಣೆ ಮೀರೆಪೋ
ದೊಡೆ ಕಲಿಭೀಮನಾಣೆಯನೆ ಧೂರ್ಜಟಿಯಾಣೆಗೆ ನಿಂದು ಭೀಮನಂ
ದೊಡೆ ಮುಳಿದಟ್ಟಿ ಕುಟ್ಟಲರಸಂ ಗದೆಗೊಂಡೆಡೆ ಭೂತಕೋಟಿಯುಂ
ಬಡಿಗೊಳೆ ಸಂಜಯಂ ನಯದೆ ಬಗ್ಗಿಸಿದಂ ಫಣಿರಾಕೇತುವಂ (ಗ.ಯು. 4-46)

ಎಂದಾಗ ದುರ್ಯೋಧನ ಗದೆ ಎತ್ತಿ ಬಡಿಯಲು ಮುಂದಾದನು. ಶಿವನಾಣೆಗೆ ಶಿರಬಾಗಿದರೆ ಭೀಮನಾಣೆಗೆ ಕೆರಳಿ ಕೆಂಡವಾದನು. ಆದರೇನು ಪಿಶಾಚಿಗಳಲ್ಲಿ ಒಂದಾಗಿ ದೊಣ್ಣೆಗಳನ್ನು ಹಿಡಿದು ಪ್ರತಿಭಟಿಸಲು ಸಿದ್ಧವಾದವು.

ರಣರಂಗದಲ್ಲಿ ಹೆಣದ ರಾಶಿಗಳನ್ನು ದಾಟಿ ದುರ್ಯೋಧನ ಹೆಜ್ಜೆ ಹಾಕುವ ಕ್ರಮವನ್ನು ರನ್ನ ಚಿತ್ರಿಸಿರುವ ಭಾವ ವಿಸ್ತಾರಕ್ಕೆ ಈ ಕೆಳಗಿನ ಉದಾಹರಣೆಯನ್ನು ಕೊಡಬಹುದು.

ಇಭಶೈಲಂಗಳನೇರೆಯೇರೆ ರುಧಿರಸ್ರೋತಂಗಳಂ ದಾಂಟಿ ದಾಂ
ಓಭದೋರ್ನೀಲಲತಾಪ್ರತಾನವಿಪಿನವ್ರಾತಂಗಳೊಳ್ ಸಿಲ್ಕಿ ಸಿ
ಲ್ಕಿ ಭರಂಗೆಯ್ದುರದೆಯ್ದಿ ಸಂಜಯಶಿರಸ್ಕಂಧಾವಲಂಬಂ ಕುರು
ಪ್ರಭು ಕಂಡಂ ಶರಜಾಲಜರ್ಜರಿತಗಾತ್ರತ್ರಾಣನಂ ದ್ರೋಣನಂ (ಗ.ಯು. 4-48)

ಈ ಪದ್ಯದಲ್ಲಿ ದುರ್ಯೋಧನನ ನಡಿಗೆಯ ರೀತಿಯಲ್ಲಿ ಯುದ್ಧದ ಭೀಷಣತೆಯ ಭಾವ ವಿಸ್ತಾರವಾಗಿ ಚಿತ್ರಿತವಾಗಿರುವುದು ಕಂಡುಬರುತ್ತದೆ. ಅದೇ ರೀತಿ ಸಂಗ್ರಹ ಭಾವಕ್ಕೆ ಈ ಪದ್ಯವನ್ನು ನಿದರ್ಶನವಾಗಿ ಕೊಡಬಹುದು.

ಒಡಲೊಡಮೆಯೆಂಬಿವೆರಡುಂ।
ಕೆಡಲಿರ್ಪುವು ಕೆಡದ ಕಸವರಂ ಜಸಮ್ಮದರೆಂ॥
ಕೆಡುವೊಡಲೊಡಮೆಯನೆಂದುಂ।
ಕೆಡದೊಡಮೆಗೆ ಮಾರುಗುಡುವುದಿರೆವ ಬೆಂಡಗಾ॥ ಗ.ಯು. (2-04)

ಅದೇ ರೀತಿ ಕಾವ್ಯದ ಕೊನೆಯ ಭಾಗದಲ್ಲಿ ಪಂಪರನ್ನರಿಬ್ಬರೂ ಭಾವ ಸಂಗ್ರಹವುಳ್ಳ ಒಂದೇ ಪದ್ಯವನ್ನು ಇಬ್ಬರೂ ರಚಿಸಿದ್ದಾರೆ. ಬಹುನಾಯಕ ಪ್ರಧಾನವುಳ್ಳ ವ್ಯಾಸ ಭಾರತ ಕಥೆಯನ್ನು ಏಕನಾಯಕರನ್ನಾಗಿ ಚಿತ್ರಿಸಿದ ಪಂಪ ರನ್ನರು ಈ ಕೆಳಗಿನ ಪದ್ಯದಲ್ಲಿ ಹೇಳಿರುವ ಕ್ರಮವನ್ನು ನೋಡಿದರೆ ಅವರ ಮನದಾಳದ ಏಕನಾಯಕ ಪ್ರವೃತ್ತಿಗೆ ವಿರುದ್ಧವಾದುದು ಎನಿಸುತ್ತದೆ. ಆ ಪದ್ಯವೆಂದರೆ

ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ

ಬಲದೊಳ್ ಮದ್ರೇಶನತ್ಯುನ್ನತಿಯೊಳಮರ ಸಿಂಧೂದ್ಭವಂ ಚಾಪ ವಿದ್ಯಾ।
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ನಿ
ರ್ಮಲ ಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ॥
ಗ.ಯು. (10-29), ಪಂ.ಭಾ. (14-64)

ಈ ಪದ್ಯದಲ್ಲಿ ಇಬ್ಬರೂ ದುರ್ಯೋಧನನಿಗೆ ಮೊದಲನೇ ಪ್ರಾಶಸ್ತ್ಯವನ್ನು ಕೊಟ್ಟಿರುವುದು ಗಮನಾರ್ಹವಾದುದು.

ರನ್ನನು ವಿಸ್ತಾರವಾದ ಭಾವನೆಗಳನ್ನು ಸಂಗ್ರಹಿಸಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ.

ಮೀಂಗುಲಿವಕ್ಕಿ ಕೊಳನೊಳ್/
ಮೀಂಗೆರಗುವ ತೆರದಿನೆರಗಿ ನೋಡಿಲ್ಲರ್ದಂ।
ಪಿಂಗಾಕ್ಷನೆಂದು ಪವನಸು/
ತಂಗರೀಪುವ ತೆರದಿನಂತದೇಂ ಸೊಗಯಿಸಿತೋ। ಗ.ಯು. (8-45)

ಒಟ್ಟಿನಲ್ಲಿ ರನ್ನನು ಗದಾಯುದ್ಧದಲ್ಲಿ ಪ್ರದರ್ಶಿಸಿದ ಪಾತ್ರ ರಚನಾ ಕೌಶಲ್ಯವು ಅದ್ಭುತವಾದುದು. ಅವನ ಕಲ್ಪನಾ ಸಾಮರ್ಥ್ಯ ಎಂತಹವರನ್ನೂ ಬೆರಗುಗೊಳಿಸುವಂತಹವು, ಅವನ ಪ್ರತಿಭಾ ಶಕ್ತಿಯು ಅಸಾಧಾರಣವಾದುದು.

4.4 ಸ್ಥಾನಪಲ್ಲಟ.

.ರನ್ನ ತನ್ನ ಕಾವ್ಯದ ಎಲ್ಲ ಘಟನೆಗಳನ್ನು ಹೆಚ್ಚು ಕಡಿಮೆ ಸ್ಥಾನಪಲ್ಲಟ ಮಾಡಿಯೇ ಚಿತ್ರಿಸುತ್ತಾನೆ. ಏಕೆಂದರೆ ಅವನದು ಸಿಂಹಾವಲೋಕನ ಕ್ರಮ. ಕನ್ನಡ ಸಾಹಿತ್ಯದಲ್ಲಿಯೇ ಈ ಒಂದು ತಂತ್ರ ವಿಶಿಷ್ಟವಾದುದು. ಯಾವುದೇ ಬದಲಾವಣೆಗಳನ್ನು ಮಾಡಿಕೊಂಡರೂ ಕಥೆಯ ಓಟಕ್ಕೆ ಚ್ಯುತಿ ಬಾರದಂತೆ ಹಾಗೂ ಯಾವುದೇ ಭಾವಗಳನ್ನು ಬೇರೆ ಬೇರೆ ಪಾತ್ರಗಳ ಮೂಲಕ ಹೇಳಿಸಿಯೂ ಕಾವ್ಯದ ಮೂಲ ಆಶಯಕ್ಕೆ ಧಕ್ಕೆ ಬರದಂತೆ ಔಚಿತ್ಯ ಪ್ರಜ್ಞೆಯನ್ನು ಪ್ರದರ್ಶಿಸಿದ್ದಾನೆ. ಇದಕ್ಕೆ ಕೊಡಬಹುದಾದ ಉದಾಹರಣೆ ಎಂದರೆ ಪಂಪ ಭಾರತದಲ್ಲಿ ಧರ್ಮರಾಯನ ಬಾಯಲ್ಲಿ ಹೇಳಿಸಿರುವ ಮಾತನ್ನು ರನ್ನ ದುರ್ಯೋಧನ ಬಾಯಲ್ಲಿ ಹೇಳಿಸಿದ್ದಾನೆ. ಉದಾಹರಣೆಗೆ ರಣರಂಗದಲ್ಲಿ ದುಶ್ಯಾಸನನ ದುರ್ಗತಿಯನ್ನು ದುರ್ಯೋಧನನು ನೋಡಲಾರದೇ ಹೇಳುವ ಪ್ರಸಂಗವೊಂದು ಈ ರೀತಿ ಇದೆ.

ಜನನೀಸ್ತನ್ಯಮನುಂಡೆನಾಂ ಬಳಿಕೆ ನೀಂ ಸೋಮಾಮೃತಂ ದಿವ್ಯ ಭೋ।

ಜನಮೆಂಬಿಂತವನುಂಡೆನಾ ಬಳಿಕೆ ನೀಂ ಬಾಲತ್ವದಿಂದೆಲ್ಲಿಯುಂ॥
ವಿನಯೋಲ್ಲಂಘನಮಾದುದಿಲ್ಲ ಮರಣಕ್ಕೆನ್ನಿಂದೆ ನೀಂ ಮುಂಚಿದಯ್।
ಮೊನೆಯೊಳ್ ಸೂಳ್ ತಡಮಾಯ್ದಿದೊಂದೆಡೆಯೊಳಂ ಹಾ ವತ್ಸ ದುಶ್ಶಾಸನನಾ॥

ಗ.ಯು. (5-7)

ರನ್ನನು ಭಾವಗಳನ್ನು ಸಹ ಪಲ್ಲಟಿಸಿ ಚಿತ್ರಿಸಿರುವುದಕ್ಕೆ ಈ ಕೆಳಗಿನ ನಿದರ್ಶನ ಸಾಕ್ಷಿ ಹಾಗೂ ಇಲ್ಲಿ ಒಂದು ಲೌಕಿಕ ಸಂವೇದಾಶೀಲ ವ್ಯಕ್ತಿತ್ವ ಒಂದು ಕಾಣಬಹುದು. ಇಂತಹ ಅಣ್ಣನನ್ನು ಯಾವ ತಮ್ಮನು ಬಯಸದೇ ಇರಲಾರನು. ದುರ್ಯೋಧನನ ಬಾಯಲ್ಲಿ ತಮ್ಮ ಎನ್ನುವ ಬದಲು 'ವತ್ಸ' ಎಂದಿರುವುದು ಗಮನಾರ್ಹ.

ಪಾಂಡವರು ಅರಣ್ಯದಲ್ಲಿ ವಾಸ ಮಾಡುತ್ತಿದ್ದಾಗ ದುರ್ಯೋಧನನು ಅವರೆದುರಿಗೆ ತನ್ನ ಸಿರಿಯನ್ನು ಮೆರೆಸಲೆಂದು ಬಂದು ಚಿತ್ರಾಂಗದನೆಂಬ ಗಂಧರ್ವನಿಗೆ ಸೆರೆ ಸಿಕ್ಕಲು, ಅರ್ಜುನನು ಬಿಡಿಸಿಕೊಂಡು ಬರಬೇಕಾಯಿತಷ್ಟೆ. ಆಗ ದ್ರೌಪದಿ ಅವನ ಕಟ್ಟುಗಳನ್ನು ಕಳಚಿ ಮರ್ಮಭೇದಕವಾದ ಮಾತುಗಳನ್ನಾಡಿ ಅವನನ್ನು ಭಾನುಮತಿಗೆ ಒಪ್ಪಿಸಿದಾಗ, 'ದುರ್ಯೋಧನಂ ದಾಡೆಗಳೆದ ಕುಳಿಕನಂತೆಯುಂ ಕೋಡುಡಿದ ಮದಹಸ್ತಿಯಂತೆಯುಂ ನಖಮುಡಿದ ಸಿಂಹದಂತೆಯುಂ ಗಳಿತಗರ್ವನಾಗಿ' ನಾಚಿಕೆಯೊಡನೆ ಹಸ್ತಿನಾವತಿಗೆ ಹೋದನೆಂದು ಪಂಪನು ತನ್ನ ಭಾರತದಲ್ಲಿ ವರ್ಣಿಸಿದ್ದಾನೆ.(7. 39ವ) ರನ್ನನ ಗದಾಯುದ್ಧದಲ್ಲಾದರೆ, ಊರುಭಂಗ ಮುಕುಟಭಂಗಗಳಿಗೆ ಈಡಾಗಿ, ಮಾನಭಂಗದಿಂದ ನರಳುತ್ತಿರುವ ದುರ್ಯೋಧನನ ಬಳಿಗೆ ಅಶ್ವತ್ಥಾಮನು ಬಂದು,

ಕುಳಿಕನ ಪಲ್ಗಳಂ ಮುರೆಯೆ ಮೋದಿದರಾರ್ ಪಿಡಿದೊತ್ತಿ ಸಿಂಹಮಂ
ಮುಳಿಯಿಸಿ ದಾಡೆಯಂ ಪಿಡಿದು ಕಿಳ್ತಿವರಾರ್ ಮದಹಸ್ತಿಯಂ ನೆರಂ।
ಗೊಳೆ ನೆಲಕಿಕ್ಕಿ ಕೋಡೆರಡುಮಂ ಕುಸಿಯೊತ್ತಿದರಾರ್ ಸುರಾದ್ರಿನಿ
ಶ್ಚಳನಿಬಿಡೋರುಮಂಡಲಮನಾರುಡಿದರ್ ಫಣಿರಾಜಕೇತನಾ॥ ಗ.ಯು.(9.20)

ಎಂದು ಮರಗುತ್ತಾನೆ. ರನ್ನನು ಕೊಟ್ಟಿರುವ ಮೂರು ಉಪಮಾನಗಳೂ ಪಂಪನ ಗ್ರಂಥದಿಂದಲೇ ಬಂದಿರತಕ್ಕವು. ಆದರೆ ಇಲ್ಲಿ ಅವು ಅಲ್ಲಿರುವಂತೆ ಲಜ್ಜಾಭಾವಕ್ಕೆ ಪೋಷಕವಾಗದೆ ವಿಸ್ಮಯಭಾವಕ್ಕೆ ಪೋಷಕವಾಗಿ ಬಂದಿದೆ." (ಭಾರತೀಯ ಕಾವ್ಯಮೀಮಾಂಸೆ : ತೀ.ನಂ.ಶ್ರೀ.)

ಸುಯೋಧನನ ತಂದೆತಾಯಿಗಳು ಸಂದಿಗೆ ಒಡಂಬಡು ಎಂದು ಕೇಳಿದ್ದಕ್ಕೆ

ಆಮ್ಮಗನೆನಾಗೆ ಧರ್ಮಜ।

ನೇಮ್ಮಗನಲ್ಲನೆ ಬಳಿಕ್ಕೆ ನೀಮುಂ ತಾಮುಂ

ನಿಮ್ಮೊಳ್ ನೇರ್ಪಡುಗಿಡದೆ ಸು।
ಖಮ್ಮುನ್ನಿನ ತೆರದೆ ಬಾಳ್ವದಾಂ ಬೆಸಕೆಯ್ವೆಂ॥ ಗ.ಯು.(4-12)

ಅಂದರೆ ತಂದೆಯೇ ನಾನು ನಿಮಗೆ ಮಗನಾಗಿರುವ ಹಾಗೆ ಧರ್ಮರಾಯನು ನಿಮಗೆ ಮಗನಲ್ಲವೇ? ಆದ್ದರಿಂದ ನೀವು ಅವನೊಂದಿಗೆ ಅನೋನ್ಯವಾಗಿದ್ದು ಸುಖವಾಗಿ ಬಾಳಿರಿ. ನಾನು ಮಾತ್ರ ನಿಮ್ಮ ಸಂಧಿಯ ಮಾತಿಗೆ ಎಂದಿಗೂ ಒಪ್ಪುವುದಿಲ್ಲ. ದುರ್ಯೋಧನನ ಈ ಮಾತಿನ ಹಿನ್ನೆಲೆಯಲ್ಲಿ ಶೋಕದ ಅತಿರೇಕ ಇದ್ದಂತೆ ಕಾಣಿಸುತ್ತದೆ. ಇವೇ ಮಾತುಗಳು ರನ್ನ ಧರ್ಮರಾಯನ ಬಾಯಲ್ಲಿ ದುರ್ಯೋಧನನ ಸಾವಿನ ನಂತರ ದೃತರಾಷ್ಟ್ರನೆದುರಿಗೆ ಹೇಳಿಸಿರುವುದು ರನ್ನನ ಭಾವಗಳ ಸ್ಥಾನಪಲ್ಲಟ ಕ್ರಿಯೆಗೆ ಸಾಕ್ಷಿಯಾಗಿದೆ. ಗದಾಯುದ್ಧದ ಕೊನೆಯ ಆಶ್ವಾಸದಲ್ಲಿ ಮಗನನ್ನು ಕಳೆದುಕೊಂಡು ಶೋಕತಪ್ತನಾದ ಧೃತರಾಷ್ಟ್ರನೆದುರಿಗೆ ಧರ್ಮರಾಯನು ನುಡಿವ ಸಾಂತ್ವನದ ಮಾತುಗಳೆಂದರೆ

ಈಯದೆ ಬಾಡಮಯ್ಯನೆಮಗೊಲ್ಲದೆ ಸಂಧಿಯನಯ್ಯ ನಿಮ್ಮ ಗಾಂ
ಗೇಯರ ಮಾತುಗೇಳದರೆದಂ ಕುರುರಾಜನದರ್ಕೆ ದು:ಖದಿಂ ಬಾಯರೆಯಲ್ಕೆವೇಡ
ನಿಮಗಾಂ ಮಗನಲ್ಲೆನೆ ನೀಮೆ ತಂದೆಯುಂ
ತಾಯುಮಮೋಘಮಿನ್ನೆಮಗೆ ಪಾಂಡುಮಹೀಪತಿಯಿಂದಮಗ್ಗಳಂ। ಗ.ಯು.10-13

ತಂದೆಯೇ ದುರ್ಯೋಧನನು ನಮಗೆ ಕೇವಲ 5 ಗ್ರಾಮಗಳನ್ನು ಕೊಡದೇ ಸಂಧಿಗೂ ಒಪ್ಪದೇ ಭೀಷ್ಮರ ಹಿತವಚನಗಳನ್ನು ಕೇಳದೇ ಸಾವನ್ನಪ್ಪಿದನು. ಅದಕ್ಕಾಗಿ ನೀವು ದು:ಖಿಸಬೇಕಾಗಿಲ್ಲ. ನಾನು ನಿಮ್ಮ ಮಗನಲ್ಲವೇ? ನಮ್ಮ ತಂದೆಗಿಂತಲೂ ನೀವು ಅಧಿಕರು ಎಂದು ಧರ್ಮರಾಯನು ನುಡಿಯುತ್ತಾನೆ. ಈ ಮಾತನ್ನು ಕೇಳಿದ ಧೃತರಾಷ್ಟ್ರನಿಗೆ ಆಗಿರುವ ವೇದನೆ ಎಂತಹದ್ದೆಂದು ಕಾವ್ಯ ಓದುಗರ ಅರಿವಿಗೆ ಬರುತ್ತದೆ. ಇಲ್ಲಿ ರನ್ನ ಒಂದೇ ಸನ್ನಿವೇಶವನ್ನು ಬೇರೆ ಬೇರೆ ಪಾತ್ರಗಳ ಮೂಲಕ ಬೇರೆ ಬೇರೆ ಸಂದರ್ಭದಲ್ಲಿ ಹೇಳಿಸಿ ಕಾವ್ಯದ ಧ್ವನಿ ಪಾರಮ್ಯತೆಯನ್ನು ಹೆಚ್ಚಿಸಿದ್ದಾನೆ. ಇದು ಅವನ ಪುನರ್ಲೇಖ ಕ್ರಿಯೆಗೆ ಒಂದು ನಿದರ್ಶನ. ಭಾಷಾಂತರ ದೃಷ್ಟಿಯಿಂದ ನೋಡಿದರೆ ಈ ಸನ್ನಿವೇಶದಲ್ಲಿ ಮೂಲದ ಪಾತ್ರದ ಹೆಸರುಗಳು ಮಾತ್ರ ಇದ್ದು ಆಶಯ ಸಂಪೂರ್ಣ ಬದಲಾಗಿದೆ. ಇಲ್ಲಿನ ಬದಲಾವಣೆ ಭಾಷಾಂತರ ಪ್ರಕ್ರಿಯೆಯಾಗಿದೆ.

ಹೀಗೆ ರನ್ನ ತನ್ನ ಕಾವ್ಯದಲ್ಲಿ ಇಂತಹ ವಿಶಿಷ್ಟ ಪ್ರಯೋಗಗಳ ಮೂಲಕ ಬದಲಾವಣೆಗಳನ್ನು ತಂದು ತನ್ನ ವಿಶಿಷ್ಟತೆಯನ್ನು ಮೆರೆದಿದ್ದಾನೆ. ಇದಲ್ಲದೇ ಪಂಪ ಹೇಗೆ

ಅರ್ಜುನನನ್ನು ನಾಯಕನನ್ನಾಗಿ ಚಿತ್ರಿಸಿದನೋ ಹಾಗೆ ರನ್ನನು ನಾಯಕ ಸ್ಥಾನವನ್ನು ಭೀಮನಿಗೆ ಪಲ್ಲಟಿಸಿ ಒಂದು ಬದಲಾವಣೆಯನ್ನು ತಂದಿದ್ದಾನೆ. ಭಾಷಾಂತರವೆಂದರೆ ಬದಲಾವಣೆ ಎಂಬ ಸಾಮಾನ್ಯ ಅಭಿಪ್ರಾಯಕ್ಕೆ ರನ್ನನ ಈ ಒಂದು ತಂತ್ರ ಹೆಚ್ಚು ಒಪ್ಪುತ್ತದೆ.

4.5 ಶೈಲಿಯಲ್ಲಿ ಬದಲಾವಣೆ

.ರನ್ನ ಪಂಪನಿಂದ ಎಷ್ಟೇ ಪ್ರಭಾವಿತನಾಗಿದ್ದರೂ ತನ್ನದೇಯಾದ ವಿಶಿಷ್ಟ ಶೈಲಿಯನ್ನು ತನ್ನ ಕಾವ್ಯದಲ್ಲಿ ಮೂಡಿಸಿದ್ದಾನೆ. "ಅವನ ಶೈಲಿ ಅನ್ಯಾದೃಶವಾದುದು ಅವನ ಭೀಮಸೇನನ ಮಾತಿನ ಹಾಗೆ ಶಿಲಾನಿಕ್ಷಿಪ್ತಾಕ್ಷರ; ಟಾಠಟಾಢಣ, ಮಿಲ್ಟನ್ ಮಹಾಕವಿಯ ಬಗ್ಗೆ Mighty mouthes inventor of hormonies ಎಂದೂ God gifted organ voice of England ಎಂದೂ ಹೇಳುವದುಂಟು. ,ರನ್ನ ಪೊಸದೇಸೆಯ ಜತೆಗೆ ಬೆಡಂಗನ್ನೂ ಹೇಳಿದ, ಅವನ ಕಾವ್ಯ ಸಾಮ್ರಾಜ್ಯದಲ್ಲಿ ಪದೋಕ್ತಿ ಭೇರಿ; ಕೊಳಲಲ್ಲ. ಅವನು ಪಂಪನಲ್ಲಿ ಮೆಚ್ಚಿಕೊಂಡದ್ದೂ ಈ ತುಂಬುದನಿಯ ಗಾಳಿಕಂಠವನ್ನೇ. 'ಸುಭಗ ಕವಿ ಪಂಪನಿಂ ವಾಗ್ವಿಭವೋನ್ನತಿ ನೆಗಳ್ದುದು' ಇದು ರನ್ನನಿಗೂ ಉಪಾದೇಯ. .ರನ್ನನ ಕಾವ್ಯವನ್ನು ಹೇಳಲು ಪುಪ್ಪುಸ ತುಂಬ ಗಟ್ಟಿಯಾಗಿರಬೇಕು; ಕ್ಷಯರೋಗಿಯು ಓದುವ ಕಾವ್ಯವಲ್ಲದು. ಅದಕ್ಕೆ ಗಾಳಿಯ ಕಂಠವೇ ಬೇಕೇ ವಿನಾ ಕೊಳಲಿನ ಮೆಲ್ಲುಲಿ ಸಾಲದು ಈ ವಾಗ್ವೈಭವನ, ಈ ವಾಣಿಯ ಬೆಡಂಗು, ಈ ಟಾಠಡಾಢಣ, ಈ ಮಹಿಮೋನ್ನತಿ, ಈ ಹೊಡೆತ, ಇದು ರನ್ನನ ಶೈಲಿಯ ಪ್ರಮುಖ ಲಕ್ಷಣ."[6]

ರಸೆಯಿಂ ಕಾಲಾಗ್ನಿರುದ್ರಂ ಪೊಳಮಡುವೊಲಂತಾಸರೋಮಧ್ಯದಿಂ ಸಾ ।
ಹಸಗರ್ವಾಲಂಕೃತಂ ತೊಟ್ಟನೆ ಕೊಳೆ ಪೊರಮಟ್ಟೆಲ್ಲಿದಂಭೀಮನೆಂದೆ॥
ಙ್ದೆಸೆಯಂ ನೋಡುತ್ತೆ ಮತ್ತದ್ಭುತನಟನಿಟಿಲಾಲೋಲ ಕೀಲಾಕ್ಷಿವೋಲ್ ದ ।
ಳ್ಳಿಸೆ ಕೋಪಾರಕ್ತನೇತ್ರಂ ನಿಜಭುಜಗದೆಯಂ ತೂಗಿದಂ ಧಾರ್ತರಾಷ್ಟ್ರಂ ॥ಗ.ಯು(7-30)

ಪ್ರಳಯ ಕಾಲದಲ್ಲಿ ಭೂಮಿಯನ್ನು ಭೇದಿಸಿಕೊಂಡು ಅಗ್ನಿಯನ್ನು ಕಾರುತ್ತಾ ರುದ್ರ ಮೇಲೆದ್ದು ಬರುವಂತೆ ಸಾಹಸಯುಕ್ತ ಗರ್ವದಿಂದ ಅಲಂಕೃತನಾದ ದುರ್ಯೋಧನನು ತಟ್ಟನೆ ಮೇಲೆದ್ದು ಬಂದು ಭೀಮಸೇನನೆಲ್ಲಿ ಎಂದು ಅಬ್ಬರಿಸಿ ಎಂಟು ದಿಕ್ಕುಗಳನ್ನು ಒಮ್ಮೆಲೆ ಈಕ್ಷಿಸುತ್ತ ತಾಂಡವ ನರ್ತನದಂತೆ ನಟರಾಜನ ಹಣೆಯಲ್ಲಿ ಜ್ವಾಲೆಯನ್ನುಗುಳುತ್ತಾ ಗಿರ್ರನೇ ತಿರುಗುವ ಹಣೆಗಣ್ಣೋ ಎಂಬಂತೆ ಕೋಪದಿಂದ ಕಣ್ಣುಕೆಂಡವಾಗಿ ಉರಿಯುತ್ತಿರಲು ತನ್ನ ಗದೆಯನ್ನು

ದುರ್ಯೋಧನನು ತೂರಿದನು. ಇದು ಅದ್ಭುತವಾದ ವಿವರಣೆ. ಸನ್ನಿವೇಶಕ್ಕೆ ಒಪ್ಪುವಂತೆ ರುದ್ರರಮಣೀಯವಾದ ಚಿತ್ರವನ್ನು ಮಹಾಕವಿ ಸಹೃದಯರ ಮುಂದಿಟ್ಟಿದ್ದಾನೆ. ಅಂತ್ಯಕಾಲದ ನೆನಪನ್ನು ತರುವಂತಹ ಭಯಾನಕ ರಸಪ್ರವಾಹದಲ್ಲಿ ವಾಚಕವೃಂದವನ್ನು ತೇಲಿಸಿದ್ದಾನೆ."

ಈ ವಿಶಿಷ್ಟ ಪದ್ಯ ವಿನ್ಯಾಸವೇ ಇಲ್ಲಿರುವ ಔಚಿತ್ಯವನ್ನು ಅನುಸರಿಸುತ್ತಿದೆ. ಅರ್ಥಕ್ಕೆ ಮೊದಲೇ ಭಾವ ಕೇವಲ ಧ್ವನಿ ವಿಸ್ತಾರದಿಂದ ಸಂವಹನಗೊಳ್ಳುತ್ತದೆ. 'ನೋಡುತ್ತೆ ಮತ್ತದ್ಭುತನಟನಿಟಿಲಾಲೋಲ ಕೀಲಾಕ್ಷಿವೋಲ್ ಎಂಬಲ್ಲಿ ವರ್ಣಧ್ವನಿ' ಅರ್ಥವನ್ನು ಮಿಂಚಿಸುತ್ತದೆ. ಪುರುಷ ಮೃದುವರ್ಣಗಳು ಮಾತ್ರವಲ್ಲದೇ ಅವುಗಳನ್ನು ಹ್ರಸ್ವ ದೀರ್ಘಗಳನ್ನಾಗಿ ಸನ್ನಿವೇಶಕ್ಕನುಗುಣವಾಗಿ ಬದಲಿಸಿಕೊಳ್ಳುವುದು ವರ್ಣಧ್ವನಿಗೆ ಕಾರಣವಾಗುತ್ತದೆ. ಮೇಲಿನ ಪದ್ಯದಲ್ಲಿ ದೀರ್ಘ ಸ್ವರ ಸಮಾಸಗಳ ವಿನ್ಯಾಸವನ್ನು ಕಂಡರೆ ಗದಾಯುದ್ಧ ಪ್ರಾರಂಭವಾಗಿ ಗದೆಗಳ ಹೊಡೆತದ ಈ ಭಾಗಗಳಲ್ಲಿ ಅವು ಕಿರಿಕಿರಿದಾಗಿ ಕುಣಿಯುತ್ತವೆ.[7]

.ರನ್ನನ ಶೈಲಿಯ ಇನ್ನೊಂದು ಮುಖ್ಯ ಗುಣವೆಂದರೆ ನಾಟಕೀಯತೆ. ಗದಾಯುದ್ಧವನ್ನು ಓದುತ್ತಿರುವಾಗ ಇಡೀ ದೃಶ್ಯ ಕಣ್ಣೆದುರಿಗೆ ನಡೆಯುತ್ತಿದೆಯೋನೋ ಎಂದೆನಿಸುತ್ತದೆ. 'ಹರಿ ಸಂಧಾನಕ್ಕೆ ಬಂದಂದು ಅವಗಡಿಸಿದ ಅಹಂಕಾರಮದೆಲ್ಲಿತ್ತೋ? ಮತ್ಸಹೋದರರಂ ಕಾಂತಾರದೋಳ್ ತಿರ್ರನೆ ತಿರುಪಿದ ಸೊರ್ಕು ಈಗಳ್ ಏನಾದುದೋ?' ಎಂದು ಬರೆಯುವಲ್ಲಿ ರನ್ನನ ಶೈಲಿನ ಮಹತ್ವ ಗೋಚರವಾಗುತ್ತದೆ. ಮುಖ್ಯವಾಗಿ ಅವನದು ನಾಟಕದ ಶೈಲಿ. ಅವನ ಕೃತಿಯಲ್ಲಿ ವ್ಯಕ್ತಿಗಳು ಮಾತನಾಡುವದಷ್ಟೇ ಅಲ್ಲ ಇಡೀ ನಿಸರ್ಗವೇ ಮಾತನಾಡುತ್ತದೆ. ಮಾನವನ ಹಾಗೆ ಮಾನವೀಯ ಆಸೆ ಆತಿಥ್ಯ ಪಕ್ಷಿಗಳು, ನೀರಿನ ತೆರೆಯ ತರಂಗಗಳು ವಿಕಚತ್ ಪಂಕೇಜಗಳು, ಮೀಂಗುಲಿಗಳು ಸರೋವರಗಳು, ಎಲ್ಲವೂ ರನ್ನನ ಕೂಡ ಮಾತನಾಡಿವೆ. ಅವನ ಕಾವ್ಯದಲ್ಲಿ ಸೃಷ್ಟಿ ಕೂಡಾ ಮಾತನಾಡುತ್ತದೆ. ಭೀಮಾದಿಗಳು ವೈಶಂಪಾಯನ ತಡಿಗೆ ಬಂದಾಗ ವಿರುವತ್‌ಸಾರಸ ರಾಜಹಂಸರವದಿಂ 'ಏವಂದಿರೇ! ಈ ಬನ್ನಿಮ್; ಇಚಿತು ಇರಿಮ್ ಎಂದು ಆದರಿಪಂತುಟಾಯ್ತು-ಪವನ, ಉದ್ಧೂತ ಉತ್ತರಾಂಗ ಅಂಬುವಿಂ ತರದಿಂ ಕಾಲ್ಗೆ ಎರಪಂತುಟಾಯ್ತು'

ಎಂಬಲ್ಲಿ ರನ್ನನ ಶೈಲಿಯ ಕ್ರಮ ಏನೆಂಬುದು ತಿಳಿಯುತ್ತದೆ.

ಗದಾಯುದ್ಧ ಎಂಬ ಹೆಸರಿನೊಳಗೆ ಹತ್ತು ಆಶ್ವಾಸಗಳಲ್ಲಿ ರಚಿಸಿದ ಈ ಖಂಡಕಾವ್ಯದ ವಸ್ತು ಕೇವಲ ಒಂದೂವರೆ ದಿನಗಳ ಅವಧಿಯಲ್ಲಿ ನಡೆದ ಘಟನೆ. ಮೂಲಘಟನೆ ಘಟಿಸಿದುದು ಕುರುಕ್ಷೇತ್ರ ರಣರಂಗದಲ್ಲಿ. ಅಲ್ಲಿರುವ ಕ್ರಿಯೆಗಳೆಲ್ಲ ಗದಾಯುದ್ಧ ಸುಯೋಧನನ ಊರುಭಂಗ ಮುಂತಾದ ಮೂಲೋದ್ದೇಶಗಳಿಗೆ ಪೋಷಕವಾಗಿವೆ. ಅಂತೆಯೇ ಆ ಕಾವ್ಯ ಮೊದಲಿನಿಂದಲೂ

ಅತ್ಯಂತ ಪರಿಣಾಮಕಾರಿಯಾಗಿಯೇ ಮುಂದುವರೆಯುತ್ತದೆ. ಅದನ್ನು ಓದುತ್ತಾ ಕುಳಿತಂತೆಯೇ ಸಹೃದಯನ ಚಿತ್ತವೃತ್ತಿ ಇನ್ನೊಂದೆಡೆಗೆ ಹೊರಳದಂತೆ ಕವಿ ನೋಡಿಕೊಂಡಿದ್ದಾನೆ. 'ಒಳಪೊಕ್ಕು ನೋಡೆ ಭಾರತದೊಳಗಣ ಕಥೆಯಲ್ಲಮೀಗದಾಯುದ್ಧದೊಳಂತೊಳಕೊಂಡತ್ತೆನೆ ಸಿಂಹಾವಲೋಕನ ಕ್ರಮ' ದಿಂದಲೂ ಸತ್ಯಾಶ್ರಯ ದೇವನೆ ಪೃಥ್ವಿವಲ್ಲಭಂ ನಾಯಕನಾಗನಿಲಜ ನೊಳ್' ಹೋಲಿಕೆಯನ್ನು ಪಡೆಯಬೇಕೆಂಬ ಸಂಕಲ್ಪದಿಂದಲೂ ಕವಿ ಕೃತಿರಚನೆ ಮಾಡಿದ್ದರೂ ಆವೇಶದಲ್ಲಿ ಅವೆಲ್ಲ ಗೌಣವಾಗಿ ಪರಿಣಮಿಸಿವೆ.

ಇಡೀ ಕಾವ್ಯದುದ್ದಕ್ಕೂ ಕಂಡುಬರುವುದು ರನ್ನನ ಅಸಾಧಾರಣ ಸನ್ನಿವೇಶ ಸಂಯೋಜನೆ. ಆ ಸನ್ನಿವೇಶಗಳನ್ನು ಹೀಗೆ ಗುರುತಿಸಬಹುದು. ಮೊದಲಿಗೆ ಭೀಮನ ಪ್ರತಿಜ್ಞೆ, ಧೃತರಾಷ್ಟ್ರ ಗಾಂಧಾರಿಯ ಸಂಭಾಷಣೆ, ವೈಶಂಪಾಯನ ಸರೋವರ ಪ್ರವೇಶ, ಮರುಳುಗಳ ಜೊತೆಗಿನ ಸಂಭಾಷಣೆ, ಗೆಳೆಯ ಮತ್ತು ಬಂಧುಗಳ ದರ್ಶನ, ಭೀಷ್ಮರ ಭೇಟಿ, ಅಶ್ವತ್ಥಾಮನ ಸಂದರ್ಶನ. ಈ ಮೇಲಿನ ಪ್ರಸಂಗಗಳಲ್ಲಿ ರನ್ನ ಚಿತ್ರಿಸಿರುವ ಸಂಭಾಷಣೆ ಸೃಜನಶೀಲವಾದುದು. ಅವನ ಸೃಜನಶೀಲತೆಗೆ ಭೀಮನ ಪ್ರತಿಜ್ಞೆಯನ್ನು ಉದಾಹರಣೆಯಾಗಿ ಕೊಡಬಹುದು. ಇದೊಂದು ಸಣ್ಣ ಸನ್ನಿವೇಶ. ಇಲ್ಲಿ ಎರಡು ಮಹಾವ್ಯಕ್ತಿಗಳ ಮನಸ್ಸಿನ ಆಂದೋಲನವನ್ನು ಕವಿ ನಾಲ್ಕು ಮಾತಿನ ಸಂಭಾಷಣೆಯಲ್ಲಿ ಮುಗಿಸಿಬಿಟ್ಟಿರುವನು.

ದ್ರೌಪದಿಯ ಮನಸ್ಸಿನ ಕಾತರ, ಭೀಮನ ಕೋಪಾಟೋಪ ಇವನ್ನು ಪೂರ್ತಿಯಾಗಿ ಗ್ರಹಿಸಿಕೊಂಡಿರುವ ಕವಿ ಅವೆರಡು ಪಾತ್ರವನ್ನು ಸಜೀವವಾಗಿ ಕವಿ ನಮ್ಮ ಮುಂದಿರಿಸುವನು. ಅವನ ನಾಟ್ಯ ಪ್ರತಿಭೆಯ ಜಾಣ್ಮೆ ಈ ಸನ್ನಿವೇಶದಲ್ಲಿ ಎದ್ದು ಕಾಣುತ್ತದೆ. 'ಡಾವರ ಡಾಕಿಣಿಯರಂತೆ ದೇವಾಸುರರ ಯುದ್ಧಕ್ಕೆ ತರಗಂಬೊತ್ತವೊಲಿರ್ದ' ದ್ರೌಪದಿ ಕೌರವನ ಊರುಗಳ ನುಡಿವೆ ನೊದೆವೆನೆಂದು ಭೀಷಣ ಪ್ರತಿಜ್ಞೆ ಮಾಡಿದ ಭೀಮಸೇನ ಇವರೀರ್ವರ ಗಂಭೀರ ಸನ್ನಿವೇಶದಲ್ಲಿ ಬುದ್ಧಿಮತಿ ಕಂಚುಕಿ, ವಿದೂಷಕ ಇವರ ಪಾತ್ರಗಳನ್ನು ತಂದು ಅಳುತ್ತ ಬಂದ ದ್ರೌಪದಿಯನ್ನು ನಗುತ್ತ ಹೋಗುವಂತೆ ಮಾಡಿ ಅದಕ್ಕೊಂದು ರಸಮಯವಾದ ನಾಂದಿಯನ್ನು ಹಾಕಿದ್ದಾನೆ ರನ್ನ"[6]

.ರಣರಂಗದಲ್ಲಿ ಸಂಜೆಯ ಸುಯೋಧನ ಸಂಬಾಷಣೆ ರನ್ನ ಮತ್ತೊಂದು ಅದ್ಭುತ ನಾಟಕೀಯ ಸನ್ನಿವೇಶ, ದುರ್ಯೋಧನನ್ನು ಆತನ ತಂದೆ ತಾಯಿಯಲ್ಲಿಗೆ ಕರೆದೊದು ಸಂದಾನ ಮಾಡಿಸಬೇಕೆಂಬ ಅವನ ಅಂಬಲ ಯುದ್ಧದಲ್ಲಿ ತನಗೆ ಸೋಲಿನನ್ನು ತಂದಿದ್ದ ದ್ರೋಣ ಅಂಶ್ವರಾಮರ ಬಗ್ಗೆ ಕೋಪಯೊಕ್ತಪಡಿಸುವನು. ಅದಕ್ಕೆ ಸಂಜೆಯ ಪಾಂಡವರು ಕೇತು ದೃತಾಂಜನ ತನಯ್, ಸೂತೀದ್ರುತ ಹರಿವರ ಪ್ರಸಾದ್ ಇಂತಹ ಅರ್ಜುನನು ಬಿಲ್ಲು

ಹಿಡಿಯಲು, ಭೀಮನ ಗದೆ ಹಿಡಿಯಲು ಅವರ ಮುಂದೆ ಯಾರು ನಿಲ್ಲಬಲ್ಲರು ಎಂದು ಪಾಂಡವರ ಪಕ್ಷಪಾಪಿಯಾಗಿ ನೀಡಿದ ಸಂಜಿಯನಿಗೆ ದುರ್ಯೋಧನ ಕೊಡುವ ಉತ್ತರ '**ಪೆವಿರಂ ಪೊಗವಿಪೆ ಎಮ್ಮ ಕಿಮಿಯಂ ಮಾಡಿದಪೆ** ನೀನು ಮರೆಯ ಪಾಂಡವಂ ಎಂದು ಟೀಕಿಸುತ್ತಾನೆ.

ವನಿತೆಯ ಕೇಶಮಂ ಸಭೆಯೊಳೆನ್ನನುಜಂ ತೆಗೆವಲ್ಲಿ ಗಂಡನಾ

ಗನೆ ಭಗದತ್ತನಾನೆ ಬರಿಯೆಲ್ವುಡಿವನ್ನೆಗಮೊತ್ತೆ ಗಂಡನಾ

ಗನೆ ಕೊಲಲೊಲ್ಲದಂಗಪತಿ ಬಿಲ್ಲೋಳೆ ಕೊಂಡೆಳೆವಲ್ಲಿ ಗಂಡನಾ.

ಗನೆ ಕುರುಬಾಲಸಂಗಹರಣಮಾತ್ರದೆ ಮಾರುತಿ ಗಂಡನಾದನೇ. (ಗ.ಯು. 3-27)

ಎಂದು ಪಾಂಡವರನ್ನು ವಿವಿಧವಾಗಿ ನಿಧಿಸುವಲ್ಲಿ ಸಂಭಾಷಣೆಯನ್ನು ಅವನು ಸಿಂಹಾವಲೋಕನ ಕ್ರಮವನ್ನ ಕಾಣಬಹುದು ದುರ್ಯೋಧನನ ಈ ಹೀಯಾಳಿಕೆ ಎಲ್ಲಿಯವರೆಗೆ ಮುಂದುವರೆಯುತ್ತದೆ ಎಂದರೆ

ಪಸೆಯೋಳ್ ಪಸುರ್ವವಂದರೊಳ

ಅಗ್ನಿ ಸಾಕ್ಷಿಯೋಳ್ ಕೊಂಡ ಪಾಂಡುಪತಿಯಿರೆ ದೋಷಾ

ವಸಥರ್ ಪಾದರದಿಂದ ಜನಿ

ಯಿಸಿದರ್ ಪಾಂಡರೊಳಲ್ಲದೆಮ್ಮೊಳಮುಂಟೇ. ಗ.ಯು. 3-38

ಎಂದು ಹೀಗಳೆಯುತ್ತಾನೆ. ಇಲ್ಲಿ ಎಲ್ಲಾ ರನ್ನ ಸೃಜನಶೀಲ ನಾಟಕೀಯ ಅಂಶವನ್ನು ಗುರುತಿಸಬಹುದು. ಸಂಜಯ ದೃತರಾಷ್ಟ್ರ ಗಾಂಧಾರಿಯು ಬರುವ ಸುದ್ದಿಯನ್ನು ತಿಳಿಸುತ್ತಲೆ ಒಮ್ಮೆಲೆ ದುರ್ಯೋಧನ ಮನಸ್ಸಿನಲ್ಲಿ

ಕಂದ ನಿಜಾನುಜರಲ್ಲದೆ ಎಂದು

ಎನ್ನುಮ ಜನನಿ ಬಂದು ಬಸಗೊಂಡೆಡದೆನೆಂದು

ಮರು ಮಾತು ಗೂಡುವೆಂ

ಕೊಂದರ್ ಕೌಂತೇಯರೆಂದು ಬಿನ್ನಯಿಸುವೇನು .ಗ.ಯು (3-76)

ಇಲ್ಲಿ ಕೊಂದರ್ ಕೌಂತೆಯರ್ ಎಂದು ಮಾತು ದುರ್ಯೋಧನ ಬಾಯಲ್ಲಿ ತುಂಬಾ ವೈಚಿಪೂರ್ಣವಾಗಿ ಬಂದಿದೆ. ಹೀಗೆ ರನ್ನ ಅಧ್ಭುತ ನಾಟಕೀಯ ಸನ್ನಿವೇಶವನ್ನು ನಿರ್ಮಿಸುತ್ತಾನೆ. ಇದು ಅಲ್ಲದೇ ಗುರು, ಗೆಳೆಯ, ದರ್ಶನ ಸಂದರ್ಭದಲ್ಲಿ ನಾಟಕೀಯ ಸನ್ನಿವೇಶವನ್ನು ನಿರ್ಮಿಸಿದ್ದಾನೆ. ದುರ್ಯೋಧನ ಕೊನೆಗೊಮ್ಮೆ ಭೀಷ್ಮನಲ್ಲಿಗೆ ಬಂದಾಯಿತು. ಆಗ ದವಳ ಗಜೇಂದ್ರಮಂ ಧವಳ ಜಾಮರಮ್ ಧವಳ್‌ಪತ್ರಮಂ ಇಲ್ಲದೆ ಬರುತ್ತಿರುವ ಚಕ್ರವರ್ತಿ ದುರ್ಯೋಧನನ್ನು ಭೀಷ್ಮ ಮನ ಕರಗಲು ಸಂಧಾನ ಪ್ರಶ್ನೆಯನ್ನು ಹೇಳುತ್ತಿದ್ದಂತೆ.

ನೆಲಕಿರಿವೆನೆಂದು ಬಗೆದಿರೆ

ಚಲಕಿರಿವೆಂ ಪಾಂಡುಸುತರೋಳೀನೆಲನಿದು ಪಾ॥

ಳ್ಳಲನನಗೆ ನನಗೆ ದಿನಪಸುತನಂ

ಕೊಲಿಸಿದ ನೆಲದೊಡನೆ ಮತ್ತೆ ಪುದವಾಳ್ದಪೆನೇ ॥ ಗ.ಯು. (5-47)

ಪಾಂಡವರೊಡನೆ ರಾಜ್ಯದ ಆಸೆಗೆ ಯುದ್ಧ ಮಾಡುವನೆಂದು ಬಗೆದಿರುವಿರೇ ? ನಾನು ಯುದ್ಧ ಮಾಡುವುದು ನೆಲಕ್ಕಲ್ಲ ಛಲಕ್ಕೆ ನನ್ನ ಪಾಲಿಗೆ ಈ ನೆನ ಪಾಳು ನೆಲ ಯಾಕೆಂದರೆ ಕರ್ಣವ ಕೊಲೆಗೆ ಈ ನೆಲವೂ ಕಾರಣ ಅವನ ರಥವನ್ನು ನುಂಗಿದ ಈ ದ್ರೋಹಿ ಭೂಮಿಯೊಂದಿಗೆ ನಾನು ಬಾಳುವುದು ಸಾಧ್ಯವಿಲ್ಲ ಎಂದು ನುಡಿಯುತ್ತಾನೆ.

ಎಂದ ದುರ್ಯೋಧನನ ಮನಸ್ಥೈರ್ಯವನ್ನು ಕಂಡು ಮೆಚ್ಚಿ ಹೊಗಳಿ ಕೃಪ ಅಶ್ವತ್ಥಾಮ ಬರುವವರೆಗೆ ವೈಶಂಪಾಯನ ಸರೋವರದಲ್ಲಿ ಕಾಲ ಕಳೆಬೇಕೆಂದು ಭೀಷ್ಮ ಉಪದೇಶ ಮಾಡುವನು ಒಟ್ಟಾರೆ ರನ್ನನು ಸಂಭಾಷಣೆ ಕಲೆಯಲ್ಲಿ ನಿಪುಣ ಪಾತ್ರಗಳ ಮನ ವಿಶೇಷಣೆ ಜೀವನದರ್ಶನ ದೃಷ್ಟಿಯಿಂದ ಗದಾಯುದ್ಧ ಶ್ರೇಷ್ಠವಾದ ನಾಟಕವಾಗಲಿಕ್ಕೆ ಯೋಗ್ಯವಾದದು.

ಈ ಮೇಲಿನ ನಾಟಕೀಯ ಸನ್ನಿವೇಶವನ್ನು ಕಟ್ಟಿ ಕೊಟ್ಟಿದ್ದರ ಉದ್ದೇಶವೇನೆಂದರೆ ರನ್ನನು ಹೇಗೆ ಕಥೆ ಮತ್ತು ಶೈಲಿಯಲ್ಲಿ ಬದಲಾವಣೆ ತರುತ್ತಾನೆಂಬುದನ್ನು ಕಂಡು ಕೊಳ್ಳುವುದಾಗಿದೆ.

.''ರನ್ನನ ಶೈಲಿಯು ವೀರ್ಯವತ್ತಾದ ಶೈಲಿ. ಅಷ್ಟೇ ಬಲವನ್ನು ಇನ್ನೊಂದು ಶೈಲಿಯಲ್ಲಿ ನೋಡಲಿಚ್ಚಿಸಿದರೆ ನಾವು ಪರಸಾಹಿತ್ಯಕ್ಕೆ ಪ್ರಯಾಣ ಮಾಡಬೇಕು. ನಮ್ಮ ಕವಿಗಳು ಒಬ್ಬಿಬ್ಬರಲ್ಲಿ ಶಬ್ದಾಡಂಬರವು ಯಥೇಚ್ಛವಾಗಿ ದೊರೆಯುತ್ತದೆ. ಆದರೆ ಶಬ್ದಾಡಂಬರವು ಶಕ್ತಿಯಲ್ಲ. ಶಕ್ತಿಗೆ ಕಾರಣಭೂತವಾದ ವಾಗ್ವೈಭವವು ರನ್ನನೊಬ್ಬನಿಗೇ ಮೀಸಲಾಗಿದೆ. ಇತರ ಕವಿಗಳು ಇಂಪು ಮಾಧುರ್ಯ ಸೌಕುಮಾರ ಲಘುದಾಟಿ ಮೊದಲಾದ ಗುಣಗಳನ್ನು ಶ್ಲಾಘನೀಯವಾಗಿ ಪ್ರದರ್ಶಿಸಿರುವರು. ಆ ಗುಣಗಳು ರನ್ನನಿಗೆ ಅವಶ್ಯಕವಿಲ್ಲ. ದುರ್ಯೋಧನನ ಧರ್ಪ, ದುರ್ಯೋಧನನ ಛಲ, ದುರ್ಯೋಧನನ ಪ್ರಲಾಪ, ಹಾಗೂ ಭೀಮಕೋಪ, ಭೀಮ ಪ್ರತಿಜ್ಞೆ, ಭೀಮಸೇನಾಡಂಬರ- ಇವಕ್ಕೆ ಸಮನ್ವಯವಾದ ಶೈಲಿಗೆ ಲಾಲಿತ್ಯದ ಹಂಬಲವೇಕೆ. ಗದೆ ಗದೆಯಂಘಟ್ಟಿಸಿ ಪುಟ್ಟಿದ ಕೆಂಡದ ಕಿಡಿಗಳೇ ಪದಗಳ ಕೈ ನಡುಗದೆ ಗದೆಯಂ ತಿರುಪುವ ಬೆಡಂಗೇ ಪದಸರಣೀ" ಈ ಮಾತುಗಳು ರನ್ನನ ಶೈಲಿಯನ್ನು ಕುರಿತಂತೆ ಅರ್ಥಪೂರ್ಣವಾದ ವ್ಯಾಖ್ಯಾನವಾಗಿದೆ.'[7]

4.6 .ರನ್ನನ ಸ್ವಂತಿಕೆ

ರಣರಂಗದಲ್ಲಿ ಎಲ್ಲವನ್ನು ಕಳೆದುಕೊಂಡು ತೊಡೆಮುರಿದು ಬಿದ್ದು ಸಾವಿನ ಹಂಚಿನ ಇರುವ ದುರ್ಯೋಧನನಿಗೆ ಅವನ ಕಡೆ ಆಸೆಯಂತೆ ಪಾಂಡವರ ತಲೆಗಳನ್ನು ತರಲು ಅಶ್ವತ್ಥಾಮ ಹೋಗಿ ತರಿದುತಂದು ಕೊಳ್ ನಿನ್ನ ನೆಚ್ಚಿನ ಪಾಂಡವರ ಶಿರಂಗಳನ್' ಎನ್ನಲು ದುರ್ಯೋಧನ ಒಂದೊಂದೇ ಪಾಂಡವರ ತಲೆಗಳನ್ನು ನೋಡುತ್ತಾ ಬರುತ್ತಾನೆ. ಆಗ ದುರ್ಯೋಧನ ಬಾಯಿಯಿಂದ ಬರುವ ಮಾತು.

ಪವನಜನಾಸ್ಯಮಲ್ತಿದವನಾನನಮಪ್ಪೊಡೆ ಮಟ್ಟಮಿರ್ದು ನೋ।
ಡುವದೆ ಮುದೀಯವಕ್ತ್ರಮನೆ ಕೆಮ್ಮನೆ ಪೋಯ್ತರಿವಿಲ್ಲದಾಯ್ತು ಪಾಂ
ಡವರ ಶಿರಂಗಳಲ್ಲವಿವು ಪಾಂಡವಸೂನುಗಳಪ್ಪ ಪಂಚಪಾಂ ।
ಡವರೆ ಶಿರಂಗಳಂ ನೆರೆ ವಿಚಾರಿಸದಕ್ಕಟ ಕೊಂಡು ಬರ್ಪುದೇ । ಗ.ಯು. (9-33)

(ನನ್ನ ಮುಂದಿರುವುದು ಭೀಮನ ಮುಖವಲ್ಲ ಬದ್ಧವೈರಿಯಾದ ಪವನಜನ ಮುಖವೇ ಆಗಿದ್ದಲ್ಲಿ ನನ್ನನ್ನು ನೋಡಿಯೂ ತಟಸ್ಥವಾಗಿರುತ್ತಿತ್ತೆ ? ನಿನಗೆ ಅರಿವು ಇಲ್ಲದೆ ಹೋಯಿತು. ಇವು ಪಾಂಡವರ ತಲೆಗಳಲ್ಲ. ಅಯ್ಯೋ ವಿವೇಚನೆಯಿಲ್ಲದೆ ಉಪಪಾಂಡವರ ತಲೆಗಳನ್ನು ಕಡಿದು ತರಬಹುದೆ?)

ಪರಮೇಶ್ವರರಾವರಾತನೆ ।
ಪರಮ ಜ್ಞಾನಿಯೇ ವಿವೇಕವಿಕರವೋಲ್ ಬಾ ॥
ಲರ ತಲೆಯನರಿದು ತಂದೆಯೋ ।
ದೊರೆಕೊಂಡುದು ನಿಗೆ ಪಾತಕಂ ಬಾಲವಧಂ ॥ ಗ.ಯು. (9-34)

(ಸಾಕ್ಷಾತ್ ಪರಮೇಶ್ವರಾವತಾರನಾದ, ಪರಮ ಜ್ಞಾನಿಯಾದ ನೀನು ಅಜ್ಞಾನಿಯಂತೆ ಬಾಲಕರ ತಲೆಗಳನ್ನತರಿದು ತಂದು ಮಹಾಪಾತಕವನ್ನು ಕಟ್ಟಿಕೊಂಡೆಯಲ್ಲ.)
ಈ ದೋಷವನ್ನು ನೀಗಲು ನೀನು ಹಿಮವತ್ಪರ್ವತಕ್ಕೆ ಹೋಗಿ ತಪಂಗೈಯು ಎಂದು ಹೇಳಿ ದುರ್ಯೋಧನ ಕಣ್ಣುಮುಚ್ಚಿದನು. ಕವಿಯ ಚರಮ ಗೀತೆ

ಪಂಕಜಮುಂ ಸುಹೃದ್ವದನಪಂಕಜಮುಂ ಮುಗಿವನ್ನಮುಗ್ರತೇ
ಜಂ ಕಿಡುತಿರ್ಪಿನಂ ನಿಜಕರಂಗಳನಂದುಡುಗುತ್ತುಮಿರ್ದು ಚ
ಕ್ರಾಂಕಮಗಲ್ವಿನಂ ಕ್ರಮದಿನಂಬರಮಂ ಬಿಸುಟುರ್ವಿಗಂಧಕಾ
ರಂ ಕವಿತರ್ಪಿನಂ ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್ ಗ.ಯು. (9-35)

ಈ ಪದ್ಯದಲ್ಲಿ ದಿನಪತಿಯಾದ ಸೂರ್ಯನು ಕುರುಕುಲಕ್ಕೆ ಒಡೆಯನಾದ ದುರ್ಯೋಧನನು ಏಕಕಾಲದಲ್ಲಿ ಅಸ್ತಮಿಸಿದರು ಎಂದು ಶ್ಲೇಷೆಯಿಂದ ಮನೋಜ್ಞವಾಗಿ ಚಿತ್ರಿಸಿದ್ದಾನೆ. ಇಡೀ ಪ್ರಕೃತಿಯೇ ದುಃಖತಪ್ತವಾಗಿರುವ ಸನ್ನಿವೇಶ ಒಂದನ್ನು ಕವಿ ನಿರ್ಮಾಣ ಮಾಡುತ್ತಾನೆ. ಈ ಸನ್ನಿವೇಶದಲ್ಲಿ ರನ್ನನ ಗ್ರಹಿಕೆ ಮನರ್ಲೇಖ ಪ್ರಕ್ರಿಯೆಯ ದೃಷ್ಟಿಯಿಂದ ನೋಡಿದಾಗ ಮಹತ್ವದ್ದಾಗಿರುತ್ತದೆ.

ಈ ಪದ್ಯವನ್ನು ಕುರಿತಂತೆ ಕುವೆಂಪುರವರ ಈ ಮಾತುಗಳು ಉಲ್ಲೇಖನಾರ್ಹ. "ದಿಗಂತ ಕಾಲದ ಅರ್ಕನ ವೈಭವವು ಕುರುಕುಲಾರ್ಕನ ಅಂತ್ಯದ ಸಂಪತ್ತು ಎರಡೂ ಒಂದನ್ನೊಂದು ಪರಿಹಾಸ್ಯ ಮಾಡುತ್ತಿದ್ದವೋ ಅಥವಾ ಸಹಾನುಭೂತಿಯನ್ನು ಪ್ರದರ್ಶಿಸುತ್ತಿದ್ದವೋ ಅಂತೂ ಸರ್ವರಿಂದಲೂ ಬಿಡಲ್ಪಟ್ಟ ಕೌರವೇಶ್ವರನಿಗೆ ಪ್ರಕೃತಿ ಮಾತೆಯಾದರೂ ತನ್ನ ಪವಿತ್ರವಾದ ಕಾಣಿಕೆಯನ್ನು ಅರ್ಪಿಸಿದಳು. ಮಹಾ ವಸ್ತುವೊಂದರ ವಿನಾಶವನ್ನು ಕಂಡು ಆಕೆಯಾದರೂ ಉದ್ವೇಗಭರಿತಳಾಗಿ ತನ್ನ ಶೋಕವನ್ನು ಸೂಚಿಸಿ ಕೌರವನು ನಿಜವಾಗಿಯೂ ಮಹಾನುಭಾವ ಎಂಬುದನ್ನು ಸ್ಥಿರಪಡಿಸಿದಳು. ದಿನೇಶನಂತ್ಯವು ಎಷ್ಟು ಮಹಿಮಾಸ್ಪದವಾದುದೋ ಕುರುರಾಜನ ಅಂತ್ಯವೂ ಅಷ್ಟೇ ಮಹಿಮೆ, ವೈಭವ, ಶೋಕಭರಿತವಾದುದೆಂದು ಪ್ರಕೃತಿದೇವಿ ತೋರಿಸಿದಳು. ತನ್ನ ಯುಗದ ಒಂದು ಮಹಾದಿವಸ ಅವಸಾನಕಾಲದಲ್ಲಿ ಒಬ್ಬ ಮಹಾಪುರುಷನ ಅವಸಾನವೂ ಸಂಭವಿಸಿತಲ್ಲ ಎಂದು ಯುಗಪುರುಷನಾದ ದ್ವಾಪರನು ಖಿನ್ನವದನನಾದನು."[10]

ರನ್ನನ ಚರಮಗೀತೆ ಇದಾದರೆ ಅವನ ಗುರು ಪಂಪನ ಚರಮಗೀತೆ ಇದಕ್ಕೆ ಹೊಯ್‌ಕೈ ಆಗಿದೆ.

> ನುಡಿದುದನೆಯ್ದೆ ತುತ್ತ ತುದಿಯೆಯ್ದುವಿನಂ ನ್ನಡಿದಂ ವಲಂ ಚಲಂ
> ಬಿಡಿದುದನೆಯ್ದೆ ಮುಂ ಪಡಿದುದಂ ಪಿಡಿದಂ, ಸಲೆ ಪೊಣ್ದ ಪ್ರಣ್ಕೆ ನೇ।
> ರ್ಪಡೆ ನಡೆವನ್ನೆಗಂ ನಡೆದನಳ್ಕದೆ ಬಳ್ಕದೆ ತನ್ನೊಡಲ್ ಪಡ
> ಲ್ವಡುವಿನಮಣ್ಮುಗುಂದನೆ ದಲೇನಭಿಮಾನ ಧನಂ ಸುಯೋಧನಂ॥ ಪಂ.ಭಾ. (13-67)

ಕುರುಕುಲಭಾನುವಾದ ದುರ್ಯೋಧನ ಅಸ್ತಂಗೈಯಲು ಅತ್ತ ಸೂರ್ಯನು ಮುಳುಗಿದ ಕಮಲಗಳೆಲ್ಲ ದಳವನ್ನು ಮುಚ್ಚಿಕೊಂಡವು, ಆಪ್ತಮಿತ್ರರ ಮುಖಗಳು ಕಂದಿಹೋದವು. ಸೂರ್ಯನ ಕಿರಣಗಳು ಮಾಯವಾದವು. ದುರ್ಯೋಧನನು ತನ್ನ ಕೈಗಳನ್ನು ಮುಗಿದು ಮರಣೋನ್ಮುಖನಾದನು. ದುರ್ಯೋಧನನ ಸಾಮ್ರಾಜ್ಯ ಮುಳುಗಿಹೋಯಿತು. ಭೂಲೋಕವೆಲ್ಲ ಅಂಧಕಾರದಲ್ಲಿ ಮುಳುಗಿತು. .ರನ್ನ ಕವಿ ಸಂದರ್ಭಕ್ಕೆ ಒಪ್ಪುವಂತಹ ಮಾತುಗಳನ್ನು ಕೆತ್ತಿರುವನು[11].

.ರನ್ನ ತಾನು ಅಭ್ಯಸಿಸಿದ ಭಟ್ಟ ನಾರಾಯಣನ ವೇಣೀಸಂಹಾರ ನಾಟಕ ಮತ್ತು ಪಂಪನ ವಿಕ್ರಮಾರ್ಜುನ ವಿಜಯ ಕೃತಿಗಳನ್ನು ಆಧರಿಸಿ ಮತ್ತೊಂದು ಭವ್ಯ ಕೃತಿಯನ್ನು ನಿರ್ಮಿಸಿದನು. ಪಂಪ ಭಟ್ಟನಾಯಕನ ಹೆಜ್ಜೆಯ ಮೇಲೆ ನಡೆದು ತನ್ನದೇಯಾದ ಸಿಂಹಾವಲೋಕನ ಕ್ರಮದಿಂದ ಕಥೆ ಹೇಳುತ್ತಾ ಅಲ್ಲಲ್ಲಿ ಕಥೆಯ ವಿಸ್ತಾರ ಸಂಗ್ರಹ ಭಾವ ವಿಸ್ತಾರ ಮತ್ತು ಸಂಗ್ರಹ, ಕಥೆಯ ಸ್ಥಾನಪಲ್ಲಟ, ಪಾತ್ರಗಳ ನಾಟಕೀಯ ಸಂಭಾಷಣೆ ಇತ್ಯಾದಿ ಅಂಶಗಳನ್ನು ಇಲ್ಲಿ ಕ್ರೋಢೀಕರಿಸಲಾಗಿದೆ. ಅಲ್ಲದೇ ಪಂಪಭಟ್ಟನಾರಾಯಣನಿಗಿಂತ ಒಂದು ಕೈಮಿಗಿಲೆಂಬಂತೆ ರನ್ನನ ಕೃತಿ ಇದೆ ಎಂಬುದನ್ನು ಇಲ್ಲಿ ಕಂಡರಿಸಲಾಗಿದೆ. ಅಂದರೆ ಪುನರ್ಲೇಖ ಪರಿಕಲ್ಪನೆವೊಂದು ಭಾಷಾಂತರ ಪ್ರಕ್ರಿಯೆಯಲ್ಲಿ ಬದಲಾವಣೆಗಳನ್ನು ತಂದುಕೊಡಬಹುದೆಂಬುದನ್ನು ಮನಗಾಣ ಬಹುದಾಗಿದೆ.

ಭಾಷೆ ಸಾಹಿತ್ಯದ ಜೊತೆಗೆ ಸಂಸ್ಕೃತಿಯ ಉನ್ನತಿಗೆ ಇಂತಹ ಅಧ್ಯಯನಗಳು ಪೂರಕವಾಗುತ್ತವೆ. ಯಾಕೆಂದರೆ ಕವಿಯೊಬ್ಬ ಸಮಾಜಜೀವಿ ಅವನು ಸಮಾಜದಲ್ಲಿ ಇದ್ದು ಸಮಾಜವನ್ನು ಸುಧಾರಿಸುವುದು ಅವನ ಜವಾಬ್ದಾರಿಯಾಗಿರುತ್ತದೆ. ಅದನ್ನು ಅವನು ಹೇಳುವ ಕ್ರಮ ಕೃತಿಯ ಮೌಲ್ಯದಲ್ಲಿ ಇರುತ್ತದೆ. ಮತ್ತು ಸಹೃದಯದವರಿಗೆ ರಸಾನುಭವ ಉಂಟು ಮಾಡುವಲ್ಲಿ ಅವನ ಶ್ರಮ ಮುಖ್ಯವಾಗುತ್ತದೆ. ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯ ಪ್ರಯೋಜನವನ್ನು ಕುರಿತು ಹೇಳುವಾಗ ಮಮ್ಮಟನೆಂಬ ಅಲಂಕಾರಿಕನು 'ಕಾವ್ಯಂ ಯಶಸ್ಸೇ ಅರ್ಥಕೃತೇ ವ್ಯವಹಾರವಿಧೇ ಶಿವೇತರಕ್ಷತಯೇ ಸದ್ಯಪರನಿವೃತಯೇ ಕಾಂತಾಸಮ್ಮಿತ ತಯೋಪದೇಶಯುಜೇ' ಒದು ಪಟ್ಟಿ ಮಾಡುತ್ತಾನೆ. ಅಂದರೆ ಕಾವ್ಯದಿಂದ ಸಹೃದಯ ಪಡೆಯುವ ಬಹುಮುಖ್ಯ ಪ್ರಯೋಜನವೆಂದರೆ ತತ್‌ಕ್ಷಣದಲ್ಲಿ ಪರಮಾನಂದವನ್ನು ಹೊಂದುವುದಕ್ಕೆ ಹಾಗೂ ನಮಗರಿವಿಲ್ಲದಂತೆ ಉಪದೇಶವನ್ನು ಪಡೆದು ಬದಲಾಗಿ ಬಿಡುತ್ತೇವೆ ಎಂಬ ಆಶಯವನ್ನು ಮಮ್ಮಟ ಹೇಳುತ್ತಾನೆ. ಇಂತಹ ಒಂದು ಪ್ರಯೋಜನ ರನ್ನನ ಕಾವ್ಯಾಭ್ಯಾಸದಿಂದ ಮನಗಾಣಬಹುದು. ಕಾವ್ಯಾಭ್ಯಾಸಿಗಳಾದ ಯಾರಿಗಾದರೂ ರನ್ನನ ಕೃತಿಮೌಲ್ಯ ಅರ್ಥವಾಗದೇ ಇರದು.

ಭಾಷಾಂತರದಿಂದ ಬದಲಾವಣೆಗಳಾಗುತ್ತವೆ ಎಂಬ ಆಲೋಚನೆಯ ಹಿನ್ನೆಲೆಯಲ್ಲಿ ಪುನರ್ಲೇಖಗೊಂಡ ಕೃತಿಯೊಂದರಲ್ಲಿ ಸಂಸ್ಕೃತಿಯ ಬದಲಾವಣೆಗಳನ್ನು ಮನಗಾಣಬಹುದು. ರನ್ನನು ಚಿತ್ರಿಸಿರುವ ತಂದೆತಾಯಿಯ ಬಾಂಧವ್ಯ ಸೋದರ ಸಂಬಂಧ ಘಟನೆಗಳಲ್ಲಿ ಅದರ ಸಾಂಸ್ಕೃತಿಕ ಮೌಲ್ಯಗಳನ್ನು ಮನಗಾಣಬಹುದು. ಗಾಂಧಾರಿ ತನ್ನ ನೂರು ಮಕ್ಕಳನ್ನು ಕಳೆದುಕೊಂಡು ಉಳಿದೊಬ್ಬ ಮಗನನ್ನು ಉಳಿಸಿಕೊಳ್ಳಬೇಕೆಂಬ ಆಸೆಯಿಂದ ಭೀಮನಲ್ಲಿ -

ನನ್ನನ್ನು ಕೊಂದು ನನ್ನ ಮಗನನ್ನು ಕೊಲ್ಲು ಎಂದು ಬೇಡಿಕೊಳ್ಳುವಾಗಿನ ಅಸಹಾಯಕತೆ ಸಹೃಯರ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುತ್ತದೆ. ಗಾಂಧಾರಿ ರಾಣಿಯಾಗಿರಬಹುದು. ಆದರೆ ಪುತ್ರವ್ಯಾಮೋಹ ಯಾರನ್ನೂ ಬಿಡದು.

ಈ ಪ್ರಸಂಗಕ್ಕಿಂತ ಮಿಗಿಲಾಗಿ ದುರ್ಯೋಧನ ಒಂದು ಕಡೆ ಪಾಂಡವರು ಸೋದರರೇ ಅವರಲ್ಲಿ ಬದ್ಧ ದ್ವೇಷ ಎಷ್ಟೇ ಇದ್ದರೂ ಪಾಂಡವರ ಬಗೆಗೆ ಪ್ರೀತಿ ಇದೆ ಎಂಬುದು ಅಭಿಮನ್ಯುವಿನ ಕಳೆಬರವನ್ನು ಕಂಡು ಪ್ರಲಾಪಿಸುವ ದೃಶ್ಯದಿಂದ ತಿಳಿಯುತ್ತದೆ. "ಮಹಾಭಾರತದಲ್ಲಿ ಮುಖ್ಯವಾಗಿರುವುದು ಅಣ್ಣತಮ್ಮಂದಿರ ನಡುವಿನ ಸಂಬಂಧದಲ್ಲಿ ಸ್ನೇಹ ದ್ವೇಷಗಳೆರಡು ಸೇರಿರುತ್ತವೆ. ಇವೆರಡೂ ಸೇರಿಕೊಂಡೇ ಕುರುಕ್ಷೇತ್ರ ಯುದ್ಧ ಅನಿವಾರ್ಯವಾಗುತ್ತದೆ. ಯುದ್ಧದ ಪ್ರಸಂಗದಲ್ಲಿ ವೀರರ ಶೌರ್ಯ ವಿಜೃಂಭಿಸುತ್ತ ದ್ವೇಷ ಸ್ನೇಹಗಳ ಸಮಸ್ಯೆ ಸ್ವಲ್ಪಮಟ್ಟಿಗೆ ಮರೆಯಾಗುತ್ತದೆ. ಅಣ್ಣತಮ್ಮಂದಿರ ನಡುವಿನ ಸಂಬಂಧ ಕೊನೆಗಾಣುವುದು ಹೇಗೆ ಅದಕ್ಕೆ ಒಂದು ಉತ್ತರ ಯುದ್ಧದಲ್ಲಿದೆ. ಬೇರೆ ಪರ್ಯಾಯವೇ ಇಲ್ಲವೇ ಎಂದು ಕೇಳಿದರೆ ಇದೆ. ಆ ಪರ್ಯಾಯವನ್ನೇ ಭಾಸ ನ ನಾಟಕ ಉಪಯೋಗಿಸುತ್ತದೆ. ಮಹಾಭಾರತ ಒಂದು ಕುಟುಂಬದ ಕಥೆ ಎಂದ ಮೇಲೆ ದ್ವೇಷವಾಗಿ ಕಾಣುವುದು ಕೌಟುಂಬಿಕ ಸ್ನೇಹದ ವಿಕೃತ ರೂಪ ಎಂದು ತಿಳಿದಾಗ ಆ ಕೊನೆ ಸಾಧ್ಯವಾಗುತ್ತದೆ. ಅಂದರೆ ಭಾಸನ ನಾಟಕ ಮಹಾಭಾರತ ನಾಟಕವನ್ನು ವಿರೋಧಿಸುವುದಿಲ್ಲ. ಅದರ ಅರ್ಥವನ್ನು ಹೆಚ್ಚು ದಟ್ಟವಾಗಿಸುತ್ತದೆ."[12] ಎಂಬ ಕುರ್ತಕೋಟಿಯವರ ಮಾತುಗಳು ರನ್ನನ ಪುನರ್ಲೇಖ ಪರಿಕಲ್ಪನೆಗೆ ಮೆರಗು ಕೊಡುವಂತಹದು.

ರನ್ನನ ಸೋಪಜ್ಞತೆಗೆ ಇನ್ನೊಂದು ನಿದರ್ಶನ ಕೊಡಬಹುದು. ದುರ್ಯೋಧನ ಭೀಷ್ಮರ ಜಲಮಂತ್ರವನ್ನು ಪಡೆದು ಪಿಂದು ಪೆರಗಾಗಿ ಪೊಕ್ಕ ದುರ್ಯೋಧನನನ್ನು ಕಂಡು ಲಕ್ಷ್ಮಿ ಅವನನ್ನು ಬಿಟ್ಟುಹೋಗುತ್ತಿದ್ದಾಳೆ. ಲಕ್ಷ್ಮಿಯ ಪಾತ್ರ ಚಿತ್ರಗಳಲ್ಲಿ ರನ್ನ ಪಂಪನಿಂದ ಉಪಕೃತ ನಾಗಿದ್ದಾನೆ. ಆದರೂ ತನ್ನ ಸ್ವಂತಿಕೆಯಿಂದ ವಿಸ್ತರಿಸಿರುವುದು ಈ ಪದ್ಯದಿಂದ ತಿಳಿಯುತ್ತದೆ.

ಚಳಮತಿಯಾದೆ ನೀಂ ಜಡಧಿಸಂಭವೆಯಪ್ಪುದರುಂ ಸರೋಜಸಂ
ಕುಳರಜದಿಂದೆ ನೀಂ ಪೊರೆದು ರಾಜಸದೊಳ್ ನೆಲಸಿರ್ಪೆ ಗೋವುಗಾ।
ಚಳವರುದಿರ್ದ ಕೃಷ್ಣನೊಡನಿರ್ದುದರೆಂದಮೆ ಗೋವಿಯಾದೆಯ
ಗ್ಗಳದ ವಿವೇಕಮಿಲ್ಲ ನಿನಗೆತ್ತರುವಾ ಪುರುಷಾಂತರಂಗಳಾ॥ ಗ.ಯು. (9-05)

ಇಲ್ಲಿ ಅಶ್ವತ್ಥಾಮನ ಬಾಯಿಂದ ಬರುವ ಲಕ್ಷ್ಮಿಯ ತೆಗಳಿಕೆಯ ಮಾತುಗಳು ಗಮನಾರ್ಹ. ಸಿರಿವಂತರ ಬಗ್ಗೆ ರನ್ನ ಹೊಂದಿರುವ ಧೋರಣೆ ಇದು ಇರಬಹುದೇ? ಇಲ್ಲಿನ ಮಾತುಗಳು

ಅಶ್ವತ್ಥಾಮನ ಬಾಯಲ್ಲಿ ಬಂದರೂ ಅವು ರನ್ನನ ಧೋರಣೆ ಎಂಬುದು ತಿಳಿಯುತ್ತದೆ. .ಜೀವನೋಪಾಯಕ್ಕಾಗಿ, ಅಧ್ಯಯನಕ್ಕಾಗಿ, ಸ್ಥಾನಮಾನಗಳಿಗಾಗಿ ರನ್ನ ಊರಿಂದೂರಿಗೆ ಅಲೆದಿದ್ದಾನೆ. ಹಗಲಿರುಳು ಆಶ್ರಯಕ್ಕಾಗಿ ಪರಿತಪಿಸಿದ್ದಾನೆ. ಹಲವರ ಅಲಕ್ಷ್ಯಗಳನ್ನು ಅನುಭವಿಸಿದ್ದಾನೆ. ಇದು ಒಂದೆಡೆ ಅವನಿಗೆ ನೆರವಾದರೆ ಮತ್ತೊಂದೆಡೆ ತನ್ನ ಕಾಲದ ರಾಜರ ಚಕ್ರವರ್ತಿಗಳ ತನ್ನ ಆಶ್ರಯದಾತರ ಏಳುಬೀಳುಗಳು ರಾಜ್ಯಲಕ್ಷ್ಮಿಯ ಚಾಂಚಲ್ಯವನ್ನು ಗ್ರಹಿಸಲು ನೆರವಾಗಿವೆ. ಹೀಗೆ ಅವನ ಮನದ ಕ್ಲೇಷೆಯೇ ಲಕ್ಷ್ಮಿಯ ಪ್ರತೀಕದ ಮೂಲಕ ಹರಿದು ಬಂದಿದೆ ಎಂದು ಭಾವಿಸಲು ಸಾಧ್ಯ."[13].

ಮುಂದೆ ಬರುವ ಅಶ್ವತ್ಥಾಮನ ಬಾಯಲ್ಲಿ ಬರುವ ಮಾತುಗಳು ಲಕ್ಷ್ಮಿಯ ಚಾಂಚಲ್ಯದ ಸ್ವಭಾವವನ್ನು ವರ್ತಮಾನದ ಸ್ಥಿತಿಯನ್ನು ಚಿತ್ರಿಸುತ್ತವೆ. ತಾಮ್ರದ ದುಡ್ಡು ತಾಯಿ ಮಕ್ಕಳನ್ನು ಅಗಲಿಸುತ್ತದೆ ಎಂಬ ಜಾನಪದ ನಂಬಿಕೆಯೊಂದನ್ನು ರನ್ನನ ಮೇಲಿನ ಚಿತ್ರಣಕ್ಕೆ ಪೂರಕವಾಗಿದೆ ಎಂದು ಹೇಳಬಹುದು. ಹೀಗೆ ರನ್ನ ಮತ್ತೆ ಬರೆದು ವಿವಿಧ ಬದಲಾವಣೆ ಮರುರೂಪ ತಂದು ಕೃತಿಯ ತಾತ್ವಿಕ ಮೌಲ್ಯವನ್ನು ಹೆಚ್ಚಿಸಿಕೊಂಡಿದ್ದಾನೆ.

ಇದೂವರೆಗಿನ ಈ ಅಧ್ಯಯನದಿಂದ ಎಷ್ಟರ ಮಟ್ಟಿಗೆ ತನ್ನ ಕಾವ್ಯ ವೈವಿಧ್ಯತೆಯನ್ನು ಮೆರೆದಿದಾನೆಂಬುದನ್ನು ಮನಗಾಣಲಾಯಿತು. ಈ ಸಂದರ್ಭದಲ್ಲಿ ಬಾಷಾಂತರದ ಪ್ರಮುಖ ನಿಯಮವಾದ ಬದಲಾವಣೆಯನ್ನು ಗುರುತಿಸಲು ಸಾಧ್ಯವಾಗಿದೆ. ಒಂದೇ ಭಾಷೆಯಲ್ಲಿಯೂ ಭಾಷಾಂತರ ಸಾಧ್ಯ ಎಂಬುದನ್ನು ಸಾಧಿಸಿ ತೋರಿಸಿದ್ದಾನೆ. ಎಂಬುದನ್ನು ಪುನರ್ಲೇಖ ಪರಿಕಲ್ಪನೆಯ ಹಿನ್ನೆಲೆಯಲ್ಲಿ ನೋಡಿದಾಗ ತಿಳಿಯುತ್ತದೆ. ಪುನಃ ಬರೆಯುವುದರಿಂದ ಬದಲಾವಣೆಗಳಾಗುತ್ತವೆ ಎಂದು ಈ ಅಧ್ಯಯನದಿಂದ ತಿಳಿಯಬಹುದಾಗಿದೆ. 10ನೇ ಶತಮಾನದಲ್ಲಿ ಬರೆದ ಪಂಪನ ಕೃತಿ ಆಧಾರಿಸಿ ಹಾಗೂ ಅದಕ್ಕೆ ಪೂರಕವಾದ ಸಂಸ್ಕೃತ ನಾಟಕಗಳನ್ನು ಬಳಸಿಕೊಂಡು ಮತ್ತೇ ಅದೇ ವಸ್ತುವುಳ್ಳ ಕಾವ್ಯಬರೆದು ರನ್ನ ಹೆಗ್ಗಳಿಕೆಗೆ ಕಾರಣವಾಗಿದ್ದು, ಅವನ ಈ ಪುನರ್ಲೇಖ ಪ್ರಕ್ರಿಯೆಯಿಂದಾಗಿ.

ನಮ್ಮ ಎಲ್ಲ ಗ್ರಹಿಕೆಗಳು ಭಾಷಾಂತರಗಳೇ ಆಗಿರುತ್ತವೆ ಎನ್ನುವ ವಿಮರ್ಶಕರೊಬ್ಬರ ಅಭಿಪ್ರಾಯದಂತೆ ರನ್ನನ ಕೃತಿಯನ್ನು ಪಂಪನ ಕೃತಿಯ ಭಾಷಾಂತರವೆಂದು ಭಾವಿಸಿದರೂ ಆ ಭಾಷಾಂತರ ಕ್ರಮ ಮೂಲ ನಿಷ್ಠತೆಗೆ ಭಿನ್ನವಾಗಿರುವುದರಿಂದ ರನ್ನನ ಕ್ರಮವನ್ನು ಇಲ್ಲಿ ಭಾಷಾಂತರದ ಹಲವು ಮಾದರಿಗಳಲ್ಲೊಂದಾದ ಪುನರ್ಲೇಖನ ಕ್ರಮವೆಂದು ಈ ಅಧ್ಯಾಯದಲ್ಲಿ ಗ್ರಹಿಸಲಾಗಿದೆ. ಅಷ್ಟೇ ಏಕೆ ಕನ್ನಡ ಕವಿಗಳ ರಚನಾ ಕ್ರಮವೆಲ್ಲಾ ಪುನರ್ಲೇಖಗಳೇ ಆಗಿವೆ. ಯಾರಲ್ಲೂ ಮೂಲ ನಿಷ್ಠತೆಯ ಪ್ರಶ್ನೆ ಕಾಡಿಲ್ಲ. ಒಬ್ಬಬ್ಬರು ಒಂದೊಂದು ರೀತಿಯಲ್ಲಿ ತಮಗೆ ಅನುಕೂಲವಾದಂತೆ ಬದಲಿಸಿ ತನ್ನ ಕಾಲದ ಅಭಿರುಚಿ ಅಗತ್ಯಕ್ಕೆ ತಕ್ಕಂತೆ ಪಾತ್ರಗಳ

ಗುಣಸ್ವಭಾವಗಳನ್ನು ಬದಲಿಸಿ ಮರುರೂಪಿಸಿದ್ದಾರೆ. ಈ ಸಂದರ್ಭದಲ್ಲಿ ಈ ಕ್ರಮವನ್ನು ಕುರಿತಂತೆ ಓ.ಎಲ್.ನಾಗಭೂಷಣ ಅವರ ಈ ಕೆಳಗಿನ ಮಾತುಗಳು ಉಲ್ಲೇಖನಾರ್ಹವಾದವು.

"ಸಂಸ್ಕೃತ ಭಾಷೆಯಲ್ಲಿ ಲಭ್ಯವಿದ್ದ ಕಥೆ, ಛಂದೋರೂಪ ಕಥೆ ಹೇಳುವ ಕ್ರಮ ಇವುಗಳನ್ನು ತಮಗೆ ಬೇಕಾದಂತೆ ಬಳಸಿಕೊಂಡು ಕನ್ನಡದ ಅಗತ್ಯಗಳನ್ನು ಪೂರೈಸುವಂತ ರಚನೆಗಳನ್ನು ನಿರ್ಮಿಸಿಕೊಳ್ಳುವ ಉದ್ದೇಶ ನಮ್ಮ ಹಳೆಯ ಕವಿಗಳಿಗೆ ಇತ್ತೆಂದು ತೋರುತ್ತದೆ. ಇಂದು ನಮ್ಮನ್ನು ಇಂಗ್ಲೀಷ್ ಮತ್ತು ಕನ್ನಡದ ಸಂಬಂಧ ಪ್ರಶ್ನೆಯಾಗಿ ಕಾಡುತ್ತಿರುವಂತೆ ಆಗ ಸಂಸ್ಕೃತ ಮತ್ತು ಕನ್ನಡದ ಸಂಬಂಧ ಸಮಸ್ಯೆಯಾಗಿ ಕಾಡಿತ್ತು. ಸಂಸ್ಕೃತವನ್ನು ಅನುಸರಿಸಿ ಕನ್ನಡದ ಅನನ್ಯತೆಯನ್ನು ಉಳಿಸಿಕೊಂಡು ಬರೆಯುವುದು ಹೇಗೆ ಎಂಬ ತೊಡಕು ಹಳಗನ್ನಡದ ಕವಿಗಳನ್ನು ಕಾಡಿಸಿರಬೇಕು. ಸಂಸ್ಕೃತದಲ್ಲಿ ಆಕರವಾಗಿ ಲಭಿಸಿದ ಕಥೆಯನ್ನು ಬೇರೆ ಮೈಯಾಂತಂತೆ ಕನ್ನಡದ ಪ್ರತಿಫಲವಾಗುವಂತೆ ಹೇಳಬೇಕೆನ್ನುವ ಧೋರಣೆ ಪ್ರಭಲವಾಗಿರುವಂತೆ ಕಾಣುತ್ತದೆ."[14]

ಈ ಮೇಲಿನ ಮಾತುಗಳನ್ನು ಗಮನಿಸಿದಾಗ ರನ್ನನ ಭಾಷಾಂತರ ಮಾದರಿಯಾದ ಪುನರ್ಲೇಖ ಪ್ರಕ್ರಿಯೆಗೂ ಅನ್ವಯ ವಾಗುವಂತಹವು. ಇಲ್ಲಿ ಪುನರ್ಲೇಖವೆಂಬುದನ್ನು ಮೂಲಭೂತವಾಗಿ ಬದಲಾಯಿಸಿ ಬರೆದದ್ದು ಎಂದು ಗ್ರಹಿಸಬೇಕು. ಇದೂವರೆಗಿನ ಅಧ್ಯಯನವು ಅಂತಹ ಬದಲಾವಣೆಗಳನ್ನು ಗುರುತಿಸುವುದಾಗಿದೆ. ಅಲ್ಲದೇ ಮೂಲಕ್ಕಿಂತ ಬೇರೆಯ ಆಕೃತಿ ಹಾಗೂ ಭಿನ್ನಭಿನ್ನ ಆಶಯಗಳನ್ನು ಗುರುತಿಸಬಹುದಾಗಿದೆ. ರನ್ನನು ಬೇರೆ ಕ್ರಮ ಅನುಸರಿಸಿ ಅದೇ ವಸ್ತುವನ್ನು ರಚಿಸಿದ್ದು, ಹೊಸಹೊಸ ಭಾವನೆಗಳಿಗೆ ಇಂಬುಕೊಟ್ಟಿದ್ದಾನೆ. ಪಂಪ ರನ್ನರ ಕಾಲದ ಅಂತರ ಹೆಚ್ಚಿಲ್ಲದಿದ್ದರೂ ರನ್ನ ಅದೇ ಆಕೃತಿಯಲ್ಲಿ ಬರೆದು ಯಶಸ್ವಿ ಸಾಧಿಸಿದ್ದು ಅವನ ಸೋಪಜ್ಞತೆಗೆ ಸಾಕ್ಷಿಯಾಗಿದೆ.

ಅಡಿಟಿಪ್ಪಣಿಗಳು

೧. ಲಕ್ಷ್ಮೀನಾರಾಯಣ ಭಟ್ಟ ಎನ್.ಎಸ್. ೧೯೮೦ ಗದಾಯುದ್ದದಲ್ಲಿ ಸೋಪಜ್ಞೆ(ಸಂ.ರನ್ನನ ಸಹಾಸ ಭೀಮವಿಜಯ ಪರಾಮರ್ಶೆ ಬಾಳಣ್ಣ ಸೀಗೀಹಳ್ಳಿ ಪುಟ ೩೯೮

೨. ಶ್ರೀಕಂಠ ಕೂಡಿಗೆ ೧೯೮೦, ರನ್ನ ಒಂದು ಜನಪದ ಅಧ್ಯಯನ, ಕೃತಿ ರನ್ನನ ಸಾಹಸ ಭೀಮ ವಿಜಯ ಪರಾಮರ್ಶೆ (ಸಂ) ಬಾಳಣ್ಣ ಸೀಗೆಹಳ್ಳಿ, ಪುಟ ३८೨

೩. ಸುಬ್ಬರಾಯಭಟ್ಟ ಗಧಾಯುದ್ದ ಧರ್ಪಣ ಪುಟ ೨೨೯

೪. ಪುಟ್ಟಪ್ಪ ಕೆ.ವಿ. ೧೯೮೨, ಶಕ್ತಿಕವಿ ರನ್ನ ಲೇ. ರನ್ನನ ಸಾಹಸ ಭೀಮ ವಿಜಯ (ಸಂ) ಬಾಳಣ್ಣ ಸೀಗೆಹಳ್ಳಿ ಪುಟ ೨೯೦

೫. ಶ್ರೀಕಂಠಯ್ಯ ತಿ.ನಂ.1978,ಗಧಾಯುದ್ಧವು ಸ್ತ್ರೀಕರಣ ವಿಚಾರವೂ ರನ್ನ ಪ್ರಶಸ್ತಿ ಪುಟ 92

೬. ಧಾರವಾಡಕರ ರಾ.ಯ. ೧೯೬೬, ಗದಾಯುದ್ಧ ಸಂ. ರನ್ನನ ಸಾಹಸಭೀಮ ವಿಜಯ ಪರಾಮರ್ಶೆ ಬಾಳಣ್ಣ ಸೀಗೆಹಳ್ಳಿ ಪುಟ ೧೩೭

೭. ತಿಪ್ಪೇರುದ್ರಸ್ವಾಮಿ.ಹೆಚ್., 1990, ತೌಲನಿಕ ಕಾವ್ಯ ಮಿಮಾಂಸೆ ಪುಟ. 310

೮. ಆರ್.ಸಿ. ಹಿರೇಮಠ, ರನ್ನನ ಕಾವ್ಯದಲ್ಲಿ ನಾಟಕೀಯತೆ (ಸಂ) ೧೯೬೬, ರನ್ನನ ಸಾಹಸ ಭೀಮ ವಿಜಯ ಪರಾಮರ್ಶೆ(ಸಂ) ಬಾಳಣ್ಣ ಸೀಗೆಹಳ್ಳಿ, ಪುಟ ೧೧೭.

೯. ರಂಗಣ್ಣ ಎಸ್.ವಿ. ೧೯೯೫, ರನ್ನಕವಿ ಪ್ರಶಸ್ತಿ, ಪುಟ ೨೨೭

೧೦. ಕುವೆಂಪು, 1995 ರನ್ನನ ವೀರಕೌರವ: ರನ್ನ ಕವಿಪ್ರಶಸ್ತಿ ಪು.164

೧೧. ಅದೇ ಪುಟ

೧೨. ಕುರ್ತಕೋಟಿ ಕೀರ್ತಿನಾಥ, 1997, ಬಯಲು ಆಲಯ, ಪುಟ 10

೧೩. ಶೈಲಜಾ ಉಡಚಣ, 1980, ರನ್ನನು ಚಿತ್ರಿಸಿದ ಗದಾಯುದ್ಧದ ಸ್ತ್ರೀ ಪಾತ್ರಗಳು, ಪುಟ 313

೧೪. ನಾಗಭೂಷನ ಸ್ವಾಮಿ. ಓ.ಎಲ್, 1999, ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಭಾಷಾಂತರ, ಪುಟ 33

ಅಧ್ಯಾಯ-೫

ಸಮಾರೋಪ

ಅಧ್ಯಾಯ-5.

ಸಮಾರೋಪ

ಆಧುನಿಕ ಪೂರ್ವ ಕನ್ನಡ ಸಾಹಿತ್ಯವು ಸಂಸ್ಕೃತ ಸಾಹಿತ್ಯದ ಭಾಷಾಂತರವೇ ಆದರೂ ಕನ್ನಡ ಕವಿಗಳು ಕಂಡುಕೊಂಡ ಭಾಷಾಂತರ ಕ್ರಮವನ್ನು ಪುನರ್ಲೇಖ ಪ್ರಕ್ರಿಯೆಯಾಗಿ ಗುರುತಿಸಲಾಗಿದೆ. ಹಾಗೂ ಅದನ್ನು ಭಾಷಾಂತರ ಅಧ್ಯಯನ ನೆಲೆಯಿಂದ ಅಧ್ಯಯನ ಒಳಪಡಿಸಲಾಗಿದೆ. ಆ ಮೂಲಕ ಅದನ್ನು ಒಂದು ಅಧ್ಯಯನ ಶಿಸ್ತಿನ ಕ್ರಮವಾಗಿ ನೋಡುವ ಕ್ರಮ ಈ ಅಧ್ಯಯನದಲ್ಲಿ ನಡೆದಿದೆ. ಹಾಗೂ ಭಾಷಾಂತರದ ಹಲವು ಮಾದರಿಗಳಾದ ನೇರಾನುವಾದ, ಸಂಗ್ರಹಾನುವಾದ, ಭಾವಾನುವಾದ ಮುಂತಾದ ಮಾದರಿಗಳಡಿಯಲ್ಲಿ ಕನ್ನಡ ಮಹಾಭಾರತಗಳ ಸ್ಥೂಲ ಪರಿಚಯವನ್ನು ಈ ಅಧ್ಯಯನದಲ್ಲಿ ಮಾಡಿಕೊಡಲಾಗಿದೆ.

ಈ ಸಂಶೋಧನಾ ಪ್ರಬಂಧದ ಮೊದಲನೇ ಅಧ್ಯಾಯದಲ್ಲಿ ವಿವರಿಸಿಕೊಂಡ ಉದ್ದೇಶದಂತೆ ಕನ್ನಡ ಸಂದರ್ಭದಲ್ಲಿ ನಡೆದು ಬಂದಿರುವ ವಿವಿಧ ಕಾಲಘಟ್ಟದ ಪುನರ್ಲೇಖ ಪ್ರಕ್ರಿಯೆಗಳನ್ನು ಈ ಪ್ರಬಂಧದಲ್ಲಿ ಆದ್ಯಂತವಾಗಿ ಮಾಡಿಕೊಡಲಾಗಿದೆ.

ಈ ಪ್ರಬಂಧದ ಎರಡನೇ ಅಧ್ಯಾಯದಲ್ಲಿ ಪುನರ್ಲೇಖ ಪ್ರಕ್ರಿಯೆಯ ಅರ್ಥ ಮತ್ತು ವ್ಯಾಖ್ಯಾನಗಳನ್ನು ವಿವರಿಸುವ ಉದ್ದೇಶ ಸಾಕಾರಗೊಂಡಿದೆ. ಅಂದರೆ ಮರುಬರವಣಿಗೆಯೊಂದರ ಕೃತಿಯೊಂದು ಉತ್ತಮ ರೀತಿಯಲ್ಲಿ ರೂಪುಗೊಳ್ಳುವ ಮತ್ತು ಬದಲಾವಣೆಗೊಳ್ಳುವ ರೀತಿಯಲ್ಲಿ ಪುನರ್ಲೇಖ ಪ್ರಕ್ರಿಯೆಯನ್ನು ಗ್ರಹಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಆಧುನಿಕಪೂರ್ವ ಕನ್ನಡ ಮಹಾಭಾರತಗಳ ಸ್ಥೂಲ ಸಮೀಕ್ಷೆಯೊಂದನ್ನು ನೀಡಿ, ಸಂಗ್ರಹಿಸಿ ಕೊಡುವುದರ ಮೂಲಕ ಕನ್ನಡ ಭಾರತಗಳ ವಿಸ್ತಾರಗಳನ್ನು ಮತ್ತು ಭಾಷಾಂತರದ ಬೇರೆಬೇರೆ ಮಾದರಿಗಳನ್ನು ಗುರುತಿಸಲಾಗಿದೆ. ಅಲ್ಲದೇ ಭಾಗವತ ಮತ್ತು ಜೈನ ಭಾರತದ ಸ್ಥೂಲ ಪರಿಚಯವನ್ನು ಲೌಕಿಕ ಹಾಗೂ ಧಾರ್ಮಿಕ ಹಿನ್ನೆಲೆಯಲ್ಲಿ ವಿವರಿಸಿ ಕೊಡಲಾಗಿದೆ. ಈ ಭಾರತಗಳು ವ್ಯಾಸ ಭಾರತದಿಂದ ಭಾಷಾಂತರಗೊಂಡು ಬೇರೆ ಬೇರೆ ಕಾಲದಲ್ಲಿ ಬದಲಾವಣೆ ಹೊಂದಿವೆ ಎಂಬುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಆಧುನಿಕಪೂರ್ವ ಕನ್ನಡ ಭಾರತಗಳ ಭಾಷಾಂತರ ಪ್ರಕ್ರಿಯೆಯ ರೂಪುರೇಷೆಗಳನ್ನು ಈ ಅಧ್ಯಾಯ ಒಳಗೊಂಡಿದೆ. ಕನ್ನಡ ಭಾಷಾಂತರ ಅಧ್ಯಯನ ಕ್ಷೇತ್ರವು ಇಂತಹ ಅಧ್ಯಯನದಿಂದ ವಿಸ್ತಾರಗೊಳ್ಳುತ್ತದೆಂದು ಭಾವಿಸಲಾಗಿದೆ. ಈ ಸಮೀಕ್ಷೆ ಮುಂದಿನ ಅಧ್ಯಯನದ ಮಾರ್ಗಸೂಚಿಯಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಒಂದೇ ಕಾಲಘಟ್ಟದಲ್ಲಿ ರಚಿತವಾದ ಎರಡು ಮಹಾಭಾರತ ಕೃತಿಗಳಾದ ಪಂಪನ ವಿಕ್ರಮಾರ್ಜುನ ವಿಜಯವನ್ನು ಅನುಲಕ್ಷಿಸಿ ರನ್ನ ಮತ್ತೆ ಬರೆದು ಯಾವ ಯಾವ ಬದಲಾವಣೆಗಳನ್ನು ತಂದಿದ್ದಾನೆಂದು ಭಾಷಾಂತರದ ನೆಲೆಯಲ್ಲಿ ವಿವರಿಸಲಾಗಿದೆ. ಅಲ್ಲದೇ ಪಂಪನ ವಿಕ್ರಮಾರ್ಜುನ ವಿಜಯದ ಪುನರ್ಲೇಖವಾಗಿ ರನ್ನನ ಗದಾಯುದ್ಧ ಹೇಗೆ ಭಿನ್ನ ಆಶಯಗಳನ್ನು ಮೂಡಿಸಿದೆ ಎಂದು ತೌಲನಿಕವಾಗಿ ಇಲ್ಲಿ ವಿಶ್ಲೇಷಿಸಲಾಗಿದೆ. ಈ ವಿಶ್ಲೇಷಣೆಯ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂದ ಬದಲಾವಣೆಯ ಪ್ರಕ್ರಿಯೆಯನ್ನು ವಿವರಿಸಿದ್ದೇನೆ. ಹಾಗೂ ರನ್ನ ತನ್ನ ಕೃತಿಯನ್ನು ಉತ್ತಮಪಡಿಸಿಕೊಳ್ಳಲು ಏನೆಲ್ಲಾ ಸೃಜನಶೀಲತೆಯನ್ನು ವ್ಯಕ್ತಪಡಿಸಿದ್ದಾನೆ ಎಂಬುದನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

ರನ್ನನ ಕಾವ್ಯದ ಆಶಯಗಳನ್ನು ಮತ್ತು ಅವನು ಸಾಧಿಸಿದ ಯಶಸ್ಸನ್ನು ಇಲ್ಲಿ ಗುರುತಿಸಲಾಗಿದೆ. ತನ್ನ ಯಶಸ್ಸಿಗೆ ರನ್ನ ಕೈಕೊಂಡ ಪ್ರಯೋಗಶೀಲತೆಯನ್ನು ಈಗಾಗಲೇ ವಿಮರ್ಶಕರು ಗುರುತಿಸಿರುವ ಅಂಶಗಳನ್ನು ಪ್ರಸ್ಥಾಪಿಸುವುದರ ಜೊತೆಗೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾಗಿದೆ. ಮರುಬರವಣಿಗೆ ಸಾಧಕ ಬಾಧಕಗಳನ್ನು ರನ್ನ ಹೇಗೆ ನಿರ್ವಹಿಸಿದ್ದಾನೆಂದು ಈ ಪ್ರಬಂಧದಾದ್ಯಂತ ಬೇರೆ ಬೇರೆ ಶೀರ್ಷಿಕೆಯಡಿಯಲ್ಲಿ ವಿಶ್ಲೇಷಿಸಲಾಗಿದೆ. ಈ ಸಂದರ್ಭದಲ್ಲಿ ಕೃತಿಯೊಂದು ಹೇಗೆ ಪಾತ್ರ ಪೋಷಣೆಯಲ್ಲಿ ಶೈಲಿ, ರೂಪ, ಆಕೃತಿಯಲ್ಲಿ ವ್ಯತ್ಯಾಸ ಹೊಂದುತ್ತದೆಂದು ಈ ಪ್ರಬಂಧದಲ್ಲಿ ವಿವರಿಸಿಕೊಡಲಾಗಿದೆ.

ರನ್ನ ಮಾಡಿಕೊಂಡ ಬದಲಾವಣೆಗಳು ಮತ್ತು ನಾಯಕನ ವ್ಯತ್ಯಾಸ, ಅಂದರೆ ಪಂಪ ಅರ್ಜುನನನ್ನು ನಾಯಕನನ್ನಾಗಿ ಮಾಡಿಕೊಂಡರೆ ರನ್ನ ಭೀಮನಿಗೆ ವರ್ಗಾಯಿಸುತ್ತಾನೆ. ವ್ಯಾಸರಲ್ಲಿ ಬಹುನಾಯಕರುಳ್ಳ ಭಾರತ ರನ್ನ ಪಂಪರಲ್ಲಿ ಏಕನಾಯಕತ್ವವನ್ನು ಪಡೆದುಕೊಳ್ಳುತ್ತದೆ. .ರನ್ನ ಭೀಮನ ವ್ಯಕ್ತಿತ್ವಕ್ಕೆ ತಕ್ಕಂತೆ ಶೈಲಿಯಲ್ಲಿ ಹೇಗೆ ಬದಲಾವಣೆಯನ್ನು ತರುತ್ತಾನೆಂಬ ಅಂಶವನ್ನು ಈ ಅಧ್ಯಯನದಲ್ಲಿ ವಿವರಿಸಿಕೊಡಲಾಗಿದೆ. ಅದೇ ರೀತಿ ಬೇರೆ ಬೇರೆ ಪಾತ್ರಗಳು ಪಂಪ ನಿರ್ವಹಿಸಿರುವುದಕ್ಕಿಂತ ರನ್ನ ನಿರ್ವಹಿಸಿರುವುದು ಹೇಗೆ ಭಿನ್ನವಾಗಿದೆ ಎಂಬುದನ್ನು ಕರ್ಣ, ದ್ರೌಪತಿ, ದುಶ್ಯಾಸನ, ಭೀಷ್ಮ, ಧರ್ಮರಾಯ ಇನ್ನು ಮುಂತಾದ ಪಾತ್ರ ವಿಶ್ಲೇಷಣೆ ಮಾಡುವುದರ ಮೂಲಕ ವಿವರಿಸಿಕೊಡಲಾಗಿದೆ. ಮತ್ತು ಕೆಲವು ಪ್ರಸಂಗಗಳು ಪಂಪನಲ್ಲಿ ಇರುವುದಕ್ಕಿಂತ ಭಿನ್ನವಾಗಿರುವುದನ್ನು ಇಲ್ಲಿ ಗುರುತಿಸಲಾಗಿದೆ. ಉದಾಹರಣೆಗೆ ಮರುಳ್‌ಗಳ ಪ್ರಸಂಗದಲ್ಲಿನ ನಾಟಕೀಯತೆ, ವೈಶಂಪಾಯನ ಸರೋವರ ಪ್ರವೇಶ, ದುಶ್ಯಾಸನ ಮತ್ತು ಕರ್ಣನ ಬಗ್ಗೆ ದುರ್ಯೋಧನನು ತಳೆದಿದ್ದ ಧೋರಣೆ ಮುಂತಾದ ಪ್ರಸಂಗಗಳನ್ನು ತೌಲನಿಕವಾಗಿ ಈ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಅಂದರೆ ಒಂದು ಕೃತಿಯ ವಸ್ತು ಮತ್ತೆ ಬರೆಯಲ್ಪಟ್ಟಾಗ ಹೇಗೆ ಬೇರೆ ಬೇರೆ ಆಯಾಮಗಳನ್ನು ಪಡೆದುಕೊಳ್ಳುತ್ತದೆ ಎಂಬುದನ್ನು ಇಲ್ಲಿ ಆದ್ಯಂತವಾಗಿ ಕಂಡರಿಸಲಾಗಿದೆ. ಇಲ್ಲಿನ ಬೇರೆ ಬೇರೆ ಆಯಾಮಗಳೇ ಭಾಷಾಂತರ ಮಾದರಿಯಾದ ಪುನರ್ಲೇಖ ಪ್ರಕ್ರಿಯೆ ಆಗಿದೆ. ಅಧ್ಯಾಯ 2 ರಲ್ಲಿ ವಿವರಿಸಿರುವಂತೆ ಪುನರ್ಲೇಖವನ್ನು ವಿವರಿಸುವಾಗ ವಿದ್ವಾಂಸರ ಮೂಲವನ್ನು ಪರಿವರ್ತಿಸುವ ಹಾಗೂ ಉತ್ತಮ ಪಡಿಸುವ ಗುಣವನ್ನು ಪುನರ್ಲೇಖದ ಮೂಲ ಸತ್ವವಾಗಿ ಗುರುತಿಸಿರುತ್ತಾರೆ. ಪಂಪನ ಕೃತಿಯನ್ನು ಪುನರ್ಲೇಖಿಸುವ ರನ್ನನು ಹಲವು ಸಂಧರ್ಬದ್ಲಲ್ಲಿ ಈ ಆಶಯವನ್ನು ಈಡೇರಿಸುವುದನ್ನು ಅಧ್ಯಾಯ 4 ರಲ್ಲಿ ಗುರುತಿಸಲಾಗಿದೆ. ಹಾಗಾಗಿ ಕನ್ನಡದ ಕವಿಗಳ ಪುನರ್ಲೇಖ ಪ್ರತಿಭೆಗಳ ಕೌಶಲವನ್ನು ಅರಿಯುವುದಕ್ಕೆ ಕನ್ನಡ ಕೃತಿಯೊಂದು ಮಾದರಿಯಾಗಿದೆ.

ಪಂಪ, ರನ್ನರ ಕಾವ್ಯಗಳೆರಡು ವೀರ ರಸ ಪ್ರಧಾನ ಕಾವ್ಯಗಳಾದರೂ ಅವರಿಬ್ಬರ ಕಾವ್ಯ ನಾಯಕರ ಗುಣ ಲಕ್ಷಣಗಳಿಗೆ ಅನುಗುಣವಾಗಿ ಅಲ್ಲಿನ ವೀರ ರಸದ ಸ್ವರೂಪ ಭಿನ್ನವಾಗುತ್ತದೆ. ಕಾವ್ಯ ಶೈಲಿ ಭಿನ್ನವಾಗುತ್ತದೆ. ಕಥಾ ಹಂದರಂದಲ್ಲೂ ಮಾರ್ಪಾಡಗಳಾಗುತ್ತವೆ. ಹಾಗಾಗಿಯೇ ಒಂದು ಕಾಲ ಘಟ್ಟದಲ್ಲಿ ನಡೆದ ರನ್ನನ ಪುನರ್ಲೇಖವು ಪುನರುಕ್ತಿ ಎನಿಸದೆ ಅನುಕರಣೆ ಎನಿಸದೆ ಕ್ಲೀಶ ಎನಸದೆ ತನ್ನದೇ ಆದ ಸ್ವಾರಸ್ಯವನ್ನು ಉಳಿಸಿಕೊಳ್ಳುತ್ತದೆ.

ಒಟ್ಟಾರೆ 10ನೇ ಶತಮಾನದಲ್ಲಿ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ರನ್ನ ಇತರೆ ಕವಿಗಳಿಗಿಂತ ಭಿನ್ನವಾಗಿ ನಿಲ್ಲುವುದು ಹೇಗೆ ಎಂಬುದನ್ನು ತನ್ನ ಕಾವ್ಯದಲ್ಲಿ ನೂತನ ಪ್ರಯೋಗಗಳನ್ನು ಮಾಡುವುದರ ಮೂಲಕ ಗುರುತಿಸಿಕೊಂಡಿರುವುದನ್ನು ಈ ಅಧ್ಯಯನದಾದ್ಯಂತ ಕಂಡುಕೊಳ್ಳಬಹುದಾಗಿದೆ. ಮಹಾಕವಿಯೊಬ್ಬನ ಪ್ರತಿಭೆಯಲ್ಲಿ ಮಹಾಭಾರತದಂತಹ ವಸ್ತು ವಿಷಯ ಮತ್ತೆ ಮತ್ತೆ ರೂಪ ತಳೆದರೂ ಅದು ಹೇಗೆ ತನ್ನ ಮೌಲಿಕತೆಯನ್ನು ಉಳಿಸಿಕೊಳ್ಳುತ್ತದೆ ಎಂಬುದನ್ನು ರನ್ನನ ಗದಾಯುದ್ಧ ಕಾವ್ಯವನ್ನು ಅಧ್ಯಯನ ಮಾಡುವುದರ ಮೂಲಕ ಸಹೃದಯರು ಅರಿಯಬಹುದಾಗಿದೆ.

ಪರಾಮರ್ಶನ ಗ್ರಂಥಗಳು

೧. ಅನಂತ ರಂಗಾಚಾರ್.ಎನ್.(ಸಂ) ೧೯೭೭, ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨. ಇಂಗ್ಲೀಷ್-ಇಂಗ್ಲೀಷ್-ಕನ್ನಡ ನಿಘಂಟು, ೧೯೮೫, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.

೩. ಕರ್ಣಾಟ ಕೃಷ್ಣರಾಯ ಭಾರತ, ೨೦೦೩, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪. ಕರ್ಣಾಟಕ ಕನ್ನಡ ವಿಷಯ ವಿಶ್ವಕೋಶ, ೧೯೭೯, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೫. ಕನ್ನಡ ಸಾಹಿತ್ಯ ಪರಿಷತ್ತು(ಸಂ), ೧೯೯೫, ರನ್ನಕವಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬. ಕರಿಗೌಡ ಬೀಚನಹಳ್ಳಿ (ಸಂ).೨೦೦೪, ಭಾಷಾಂತರದ ಸಾಂಸ್ಕೃತಿಕ ನೆಲೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೭. ಕುರ್ತಕೋಟಿ ಕೀರ್ತಿನಾಥ, ೧೯೯೨, ಬಯಲು ಆಲಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೮. ಕುರ್ತಕೋಟಿ ಕೀರ್ತಿನಾಥ, ೧೯೯೫, ಕನ್ನಡ ಸಾಹಿತ್ಯ ಸಂಗಾತಿ, ಕನ್ನಡ ವಿಶ್ವವಿದ್ಯಾಲಯ ಹಂಪಿ

೯. ಕುರ್ತಕೋಟಿ ಕೀರ್ತಿನಾಥ, ೧೯೯೮, ನೂರು ಮರ ನೂರು ಸ್ವರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೦. ಕುವೆಂಪು, ೧೯೬೦, ದ್ರೌಪದಿಯ ಶ್ರೀಮುಡಿ, ಉದಯರವಿ ಪ್ರಕಾಶನ, ಮೈಸೂರು.

೧೧. ಕುವೆಂಪು(ಸಂ), ೧೯೭೪, ಕರ್ಣಾಟಕ ಭಾರತ ಕಥಾಮಂಜರಿ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ. ಮೈಸೂರು.

೧೨. ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್ ೧೯೮೮ (ಪ್ರಸ್ತಾವನೆ) ಕರ್ಣಾಟ ಭಾರತ ಕಥಾಮಂಜರಿ ಮೈಸೂರು.

೧೩. ಗುರುದತ್ತ ಪ್ರಧಾನ(ಸಂ), ೨೦೦೪, ಅನಾವರಣ, ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

೧೪. ಗೋಪಾಲರಾವ್. ಬಿ., ೧೯೯೨, ಜೈಮಿನಿ ಭಾರತ ಕಥಾಸಾರ ಶ್ರೀಶೈಲ ಕಥಾ ಪ್ರಕಾಶನ ಮೈಸೂರು.

೧೫. ಜಗನ್ನಾಥಶಾಸ್ತ್ರಿ ಕೂಡಲಿ, ೨೦೦೬, ತುರಂಗಭಾರತ ಸಂಪುಟ ೨, ಅಗ್ನಿಸೇವಾ ಟ್ರಸ್ಟ್ ಬೆಂಗಳೂರು.

೧೬. ಜಯಚಂದ್ರ ಎಂ.ಎ., ೨೦೦೬, ಸಾಳ್ವಸಂಪುಟ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೭. ತಾರಕೇಶ್ವರ ವಿ.ಬಿ., ೨೦೦೬, ವಸಾಹತುಶಾಹಿ ಮತ್ತು ಭಾಷಾಂತರ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೮. ತಿಪ್ಪೇರುದ್ರಸ್ವಾಮಿ ಹೆಚ್., ೧೯೯೦, ತೌಲನಿಕ ಕಾವ್ಯಮೀಮಾಂಸೆ, ಡಿ.ವಿ.ಕೆ.ಮೂರ್ತಿ ಪ್ರಕಾಶಕರು ಮೈಸೂರು

೧೯. ನರಸಿಂಹಶಾಸ್ತ್ರಿ. ಕೆ.ಎಲ್., ೧೯೮೦, ಆದಿ ಪುರಾಣಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೦. ನಾಗರಾಜಯ್ಯ ಹಂಪ., (ಸಂ), ರನ್ನ ಸಂಪುಟ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೧. ಬಾಳಣ್ಣ ಸೀಗೆಹಳ್ಳಿ (ಸಂ), ೨೦೦೪, ರನ್ನನ ಸಾಹಸ ಭೀಮ ವಿಜಯ ಪರಾಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೨. ಮುಗಳಿ. ರಂ.ಶ್ರೀ., ೧೯೯೦, ಕನ್ನಡ ಸಾಹಿತ್ಯ ಚರಿತ್ರೆ, ಗೀತಾಬುಕ್ ಹೌಸ್ ಮೈಸೂರು.

೨೩. ರಹಮತ್ ತರೀಕೆರೆ(ಸಂ), ೨೦೦೪, ಕುಮಾರವ್ಯಾಸ ಭಾರತ, ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೪. ರಾಮಚಂದ್ರ ಸಿ.ಎನ್., ೨೦೦೭, ರಕ್ತ ರೂಪಣೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೫. ವಿವೇಕರೈ, ೨೦೦೬, ಬಂಧುವರ್ಮ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೬. ವೆಂಕಟಾಚಲಶಾಸ್ತ್ರಿ ಟಿ.ವಿ. (ಸಂ), ೨೦೦೬, ಪಂಪ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೭. ಶಿರೂರ ಬಿ. ವಿ. ೨೦೦೭.(ಸಂ), ಮೂರನೇ ಮಂಗರಸ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೮. ಶ್ರೀಕಂಠಯ್ಯ.ತೀ.ನಂ. ೨೦೦೨, ಭಾರತೀಯ ಕಾವ್ಯಮೀಮಾಂಸೆ, ಮೈಸೂರು ವಿ.ವಿ.ಮೈಸೂರು.

೨೯. ಸೀತಾರಾಮಯ್ಯ. ಎಂ.ವಿ., (ಸಂ), ೧೯೮೦, ಶ್ರೀಕೃಷ್ಣ ಬಾಲಲೀಲೆ ಭಾಗ-೧ & ೨, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

೩೦. ಸುಂಕಾಪುರ ಎಂ.ಎಸ್.೧೯೭೯, ಮಂಗರಸನ ನೇಮಿ ಜಿನೇಶ ಸಂಗತಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೩೧. ಸುಬ್ಬರಾಯಭಟ್ (ಸಂ), ೨೦೦೧, ಗದಾಯುದ್ಧ ದರ್ಪಣಂ, ಶ್ರೀಮತಿ ಲಲಿತಾ. ಪಾರ್ವತೀ ಭವನ ಕಾಸರಗೋಡ.

೩೨. ಹಂಜಿ ಎಸ್.ವಿ., ೨೦೦೩, ಸಂಸ್ಕೃತ ಕನ್ನಡ ಶಬ್ದಕೋಶ.

೩೩. Amiya Dev Edit, 1994, Narrative a seminor, the various possible meaning or rewriting different tradition in East & West, Sahitya Acodemy. New Delhi.

೩೪. Cambridge Learners dictionary, 2001, Cambridge University press.

೩೫. Mona baaker, 2001, Route ledge Encyclopedia to translation studies.

୩୬. Oxford cross word dictionary,2006, Webstor New word.

୩୭. Oxford paperback dictionary, 1990, University Press.

୩୮. Oxford advanced learners dictionary.

୩୯. The conscious oxford dictionary, 1990, Oxford University press.

୪୦. Websters third new International dictionary, 1986.

****